ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 15
ಏಪ್ರಿಲ್ 08, 2012

ಪುಟ 16 ರೂ. 5/-






ನವ ಉದಾರವಾದೀಕರಣ ನೀತಿಗಳು :

ಸಿರಿವಂತರ ಬಾಯಿಗೆ ಬೆಣ್ಣೆ - ಬಡವರ ಬಾಯಿಗೆ ಮಣ್ಣು

CPIM 20 PARTY CONGRESS
KOZHIKODE 2012 APRIL 4-9



‘ಮುನ್ನಡೆಯ ಸದಾವಕಾಶ’

- ಕಾರಟ್

ಕೋಜಿಕ್ಕೋಡ್ ಮಹಾಧಿವೇಶನದತ್ತ...

ಬೆಂ.ವಿ.ವಿ. ಪತ್ಯ :
ಇದ್ದದ್ದು ಇದ್ದಾಂಗ ಹೇಳಿದರೆ...

ಮಡೆಸ್ನಾನ - ಪಂಕ್ತಿಬೇಧ ವಿರೋಧಿಸಿ ಸಾಮೂಹಿಕ ಧರಣ




ಸ್ಲೋವಾಕಿಯಾ :



ಎಡ ಪಕ್ಷಕ್ಕೆ ಪ್ರಚಂಡ ಜಯ

"ಮಡೇಸ್ನಾನ, ಪಂಕ್ತಿಭೇದ, ದೇವದಾಸಿ ಪದ್ಧತಿ ನಿಷೇಧಿಸಿ"

ವಿವಿಧ ಮಠಾಧೀಶರುಗಳು ಹಾಗೂ ಜನಪರ ಹೋರಾಟಗಾರರ, ಚಿಂತಕರ ಪ್ರತಿಭಟನೆಯಲ್ಲಿ ಆಗ್ರಹ



ಮನವಿ ಸ್ವೀಕರಿಸಲು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮುಖ್ಯಮಂತ್ರಿ ಸದಾನಂದಗೌಡ, ಸಚಿವ ಸುರೇಶಕುಮಾರ್

ರಾಜ್ಯದ ನಾನಾ ಭಾಗದಲ್ಲಿರುವ ಜಾತಿ ಪದ್ಧತಿ, ಮಡೆಸ್ನಾನ, ಪಂಕ್ತಿಭೇದ, ದೇವದಾಸಿ ಪದ್ಧತಿ ಸೇರಿದಂತೆ ವಿವಿಧ ಮೂಢನಂಬಿಕೆಗಳನ್ನು ನಿಷೇಧಿಸುವಂತೆ ಆಗ್ರಹಿಸಿ ವಿವಿಧ ಮಠಗಳ ಮಠಾಧೀಶರುಗಳು, ಕ್ರಿಯಾಶೀಲ ಹೋರಾಟಗಾರರು, ಪ್ರಗತಿಪರ ಚಿಂತಕರುಗಳಿಂದ ಬೆಂಗಳೂರು ಮಹಾ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾರ್ಚ್ 26, 2012ರಂದು ಪ್ರತಿಭಟನಾ ಸಭೆ ನಡೆಯಿತು.

ಸಭೆಯ ನೇತೃತ್ವವನ್ನು ನಿಡುಮಾಮಿಡಿಯ ಮಾನವಧರ್ಮ ಪೀಠದ ಶ್ರೀ ವೀರಭದ್ರಚನ್ನಮಲ್ಲ ಸ್ವಾಮೀಜಿ ವಹಿಸಿದ್ದರು., 'ರಾಜ್ಯದಲ್ಲಿರುವ ಮೂಢನಂಬಿಕೆ ಮತ್ತು ಅನಿಷ್ಟ ಪದ್ಧತಿಗಳ ನಿರ್ಮೂಲನೆಗಾಗಿ ಸರ್ಕಾರ ಶಾಶ್ವತ ಆಯೋಗವನ್ನು ರಚನೆ ಮಾಡುಬೇಕು. ಆ ಮೂಲಕ ಮೂಢನಂಬಿಕೆಗಳಿಗೆ ಕಾನೂನಿನ ಕಡಿವಾಣ ಹಾಕುವ ಅಗತ್ಯವಿದೆ' ಎಂದು ಅವರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

'ಮೂಢನಂಬಿಕೆಗಳ ಕುರಿತು ವಿದ್ಯಾರ್ಥಿ ವಲಯದಲ್ಲಿ ಹೆಚ್ಚಿನ ಜಾಗೃತಿ ಮೂಡಬೇಕಿದ್ದು, 1ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಮೂಢನಂಬಿಕೆಗಳನ್ನು ಕಿತ್ತೊಗೆಯುವ ಕುರಿತು ಪರಿಹಾರ ಕ್ರಮವನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಚಿಂತನೆ ನಡೆಸಬೇಕು' ಎಂದು ಸಲಹೆ ನೀಡಿದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನವೇ ಪರಮಶ್ರೇಷ್ಠ ಸಂವಿಧಾನದ ಆಶಯಗಳ ಮುಂದೆ ಪುರಾತನ ಮತ್ತು ಅರ್ಥಹೀನ ಆಚರಣೆಗಳು ಮೌಲ್ಯ ಕಳೆದುಕೊಳ್ಳುತ್ತವೆ. ಆದರೆ, ಪ್ರಸ್ತುತ ದಿನಗಳಲ್ಲಿ ಅಮಾನವೀಯ ಆಚರಣೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಸವಾರಿ ಮಾಡುತ್ತಿರುವುದು ಖೇದನೀಯ. ಇದನ್ನು ಸಮರ್ಥಿಸಲು ಹುಟ್ಟಿಕೊಂಡಿರುವ ವರ್ಗದ ಬಗ್ಗೆಯೂ ಎಚ್ಚರ ವಹಿಸಬೇಕು' ಎಂದು ಕರೆ ನೀಡಿದರು.

ತೋಂಟದಾರ್ಯ ಮಹಾಸಂಸ್ಥಾನದ ಸಿದ್ಧಲಿಂಗ ಸ್ವಾಮೀಜಿ, 'ಮಡೆಸ್ನಾನ ನಿಷೇಧಗೊಳ್ಳಬೇಕು ಎನ್ನುತ್ತಲೇ ಮಡೆಸ್ನಾನವೆಂಬುದು ಅನಾದಿ ಕಾಲದಿಂದಲೂ ಬಂದ ಆಚರಣೆ, ಎಂಜಲೆಲೆ ಮೇಲೆ ಉರುಳುವವರು ಉರುಳಲಿ ಎಂಬ ದ್ವಂದ್ವ ಹೇಳಿಕೆ ನೀಡುತ್ತಿರುವ ಸ್ವಾಮೀಜಿಯ ಬಗ್ಗೆ ಎಲ್ಲರೂ ಎಚ್ಚರ ವಹಿಸುವ ಅಗತ್ಯವಿದೆ' ಎಂದ ಅವರು 'ಬುದ್ಧಿವಂತರು ಮತ್ತು ವಿದ್ಯಾವಂತರೂ ಎನಿಸಿ ಕೊಂಡಿರುವ ಜಿಲ್ಲೆಗಳಲ್ಲಿಯೇ ಮೂಢನಂಬಿಕೆಗಳು ಹೆಚ್ಚು ಪ್ರಚಲಿತದಲ್ಲಿರುವುದರಿಂದ ಶಿಕ್ಷಣ ವ್ಯವಸ್ಥೆಯ ಬಗ್ಗೆಯೇ ಅನುಮಾನ ಹುಟ್ಟುತ್ತದೆ' ಎಂದು ಸಂಶಯ ವ್ಯಕ್ತಪಡಿಸಿದರು.

'ಭಾರತೀಯರು ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳನ್ನು ದುರ್ಗಾವತಾರವೆಂದೇ ನಂಬಿದ್ದರು. ಎಲ್ಲ ಕಾಲದಲ್ಲೂ ಮೂಢನಂಬಿಕೆಗಳು ಬೇರೂರಿದ್ದವು. ಆದರೆ ಕಿತ್ತೊಗೆಯಲು ಪ್ರಜ್ಞಾವಂತರೆಲ್ಲರೂ ಒಂದಾಗಬೇಕು. ಮಠಾಧೀಶರ ಪ್ರತಿಭಟನೆಗೆ ಮಣಿಯದಿದ್ದರೇ ಸದ್ಯದಲ್ಲೇ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಿದ್ದೇವೆ' ಎಂದು ಎಚ್ಚರಿಕೆ ನೀಡಿದರು.

ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 'ಜಾತಿ ಮತ, ಧರ್ಮಗಳನ್ನು ಲೆಕ್ಕಿಸದೇ ಮೂಢನಂಬಿಕೆಗಳ ವಿರುದ್ಧ ಬಂಡಾಯವೇಳುವುದನ್ನು ಕಲಿಯಬೇಕಿದೆ. ರಾಜ್ಯ ಸರ್ಕಾರ ಜನ ನೆಮ್ಮದಿಗಾಗಿ ಹೋಮ ಹವನ ಮಾಡುತ್ತಿದೆ. ಇದರಿಂದ ಯಾವುದೇ ಪ್ರಯೋಜನವಿಲ್ಲ' ಎಂದು ಹೇಳಿದರು. ಬಸವ ಸೇವಾ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣ, ಹಿರೇಮಠದ ಬಸವಲಿಂಗ ಪಟ್ಟದೇವರು, ಸಿದ್ದರಾಮ ಮಹಾಸ್ವಾಮೀಜಿ ಉಪಸ್ಥಿತರಿದ್ದರು.

ವಿವಿಧ ದಲಿತ ಸಂಘಟನೆಗಳು, ಸಿಪಿಐ(ಎಂ), ಸಿಪಿಐ ಮುಂತಾದ ಎಡಪಕ್ಷಗಳು, ರೈತ ಸಂಘಟನೆಗಳು ಈ ಹೋರಾಟದಲ್ಲಿ ಪಾಲ್ಗೊಂಡಿದ್ದವು.

ಸರ್ಕಾರದ ಪರವಾಗಿ ಮುಖ್ಯಮಂತ್ರಿ ಸದಾನಂದಗೌಡ, ಸಚಿವ ಸುರೇಶಕುಮಾರ್‌ರವರು ಧರಣಾ ಸ್ಥಳಕ್ಕೆ ಭೇಟಿ ನೀಡಿ ಎರಡು ತಿಂಗಳೊಳಗಾಗಿ ಮಡೆಸ್ನಾನ ಪದ್ಧತಿಯನ್ನು ನಿಷೇಧಿಸಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು. ಬೇಡಿಕೆಗಳು ಈಡೇರದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ತೀರ್ಮಾನಿಸಲಾಯಿತು.



ಲಕ್ಷ್ಮಿನಾರಾಯಣ ನಾಗವಾರ



ಜಿ.ಎಸ್.ನಾಗರಾಜ್



ಚಿಂತಕ ಎ.ಕೆ.ಸುಬ್ಬಯ್ಯ



ಚಿಂತಕ ಡಾ.ಜಿ.ರಾಮಕೃಷ್ಣ

ಏಪ್ರಿಲ್ 12 ರಾಜ್ಯವ್ಯಾಪಿ ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಬರ ಪರಿಹಾರ ಕಾಮಗಾರಿಗಳ ಗಂಭೀರ ನಿರ್ಲಕ್ಷ್ಯ, ಜನ ವಿರೋಧಿ ರಾಜ್ಯ ಬಜೆಟ್ ಖಂಡಿಸಿ, ಕುಡಿಯುವ ನೀರು ಸಮಸ್ಯೆ ಸೇರಿದಂತೆ ಜನ ಸಮುದಾಯದ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಏಪ್ರಿಲ್ 12, 2012ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 1, 2012 – ಡಿವೈಎಫ್‌ಐ ಅಖಿಲ ಭಾರತ ಸಮ್ಮೇಳನದ ಸ್ವಾಗತ ಸಮಿತಿ ಸಭೆ, ಸೆನೆಟ್ ಹಾಲ್, ಬೆಂಗಳೂರು. ಬೆ.10.30ಕ್ಕೆ

ಏಪ್ರಿಲ್ 4 ರಿಂದ 9, 2012 – ಸಿಪಿಐ(ಎಂ) ಪಕ್ಷದ ಅಖಿಲ ಭಾರತ ಮಹಾಧಿವೇಶನ, ಕೇರಳದ ಕೋಝಿಕೋಡ್‌ನಲ್ಲಿ.

ಏಪ್ರಿಲ್ 9, 2012 – ಮಹಾಧಿವೇಶನದ ಬೃಹತ್ ರ್‍ಯಾಲಿ, ಕೋಝಿಕೋಡ್.

ಏಪ್ರಿಲ್ 17 ರಿಂದ 19, 2012– ಸಿಐಟಿಯು ವತಿಯಿಂದ ಬೆಂಗಳೂರಿನಲ್ಲಿ ನಿರಂತರ ಧರಣಿ.

ಮೇ 21, 2012 – ಭೂಮಿ, ಮನೆ-ನಿವೇಶನಕ್ಕಾಗಿ ರಾಜ್ಯ ಮಟ್ಟದ ಬೃಹತ್ "ಮಹಾಧರಣಿ" – ಬೆಂಗಳೂರು.

ಸೆಪ್ಟಂಬರ್ 9ರಿಂದ 12, 2012– ಡಿವೈಎಫ್‌ಐ ಅಖಿಲ ಭಾರತ ಸಮ್ಮೇಳನ–ಬೆಂಗಳೂರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬೆಂಗಳೂರು ವಿ.ವಿ. ಪಠ್ಯ : ಇದ್ದದ್ದು ಇದ್ದಂಗೆ ಹೇಳಿದರೆ........


ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. ಫದವೀಯ ತೃತೀಯ ಸೆಮಿಸ್ಟರ್‌ನ ಪಠ್ಯದಲ್ಲಿನ ಪಾಠ ಮತ್ತು ಪದ್ಯವೊಂದರ ಬಗ್ಗೆ ವಿವಾದವನ್ನು ಎತ್ತಲಾಗಿದೆ. ಕಳೆದೆರೆಡು ವರುಷಗಳಿಂದಲೂ ಸಾಹಿತಿ ಡಾ॥ಸಬೀಹಾ ಭೂಮಿಗೌಡರವರ 'ಮಹಿಳೆ ಮತ್ತು ಕೋಮುವಾದ' ಪಾಠವಾಗಿ, ಶಶಿಕಲಾ ವೀರಯ್ಯಸ್ವಾಮಿಯವರ 'ನನ್ನ ಅವತಾರ' ಕವಿತೆ ಸಾಹಿತ್ಯ ಸಲ್ಲಾಪದಲ್ಲಿ ಭೋಧಿಸಲಾಗುತ್ತಾ ಬದಲಾದೆ. ವಿದ್ಯಾರ್ಥಿಗಳು ಪರೀಕ್ಷೆಯ ಹೊಸ್ತಿಲಿನಲ್ಲಿ ನಿಂತಿದ್ದರೂ ಈಗ ಅಪಸ್ವರ ಎತ್ತಿರುವುದು ಯಾಕೆಂದು ಪ್ರಶ್ನಿಸಬೇಕಾಗುತ್ತದೆ. ಕೋಮುವಾದದ ಘೋರ ಅಪಾಯಗಳನ್ನು ಮಹಿಳಾ ಸಂವೇದಿಯಾಗಿಯೂ ವಿಶ್ಲೇಷಿಸಿ ಎಚ್ಚರಿಸಿರುವಾಗ ಇದೇ ಪಾಠವು ಕೋಮುವಾದವನ್ನು ಹಬ್ಬಿಸುತ್ತದೆ ಎಂಬ ಸಂಘಪರಿವಾರದ ಮಾತುಗಳು ಹಾಸ್ಯಾಸ್ಪದವಾಗಿದೆ. ವಿಚಿತ್ರವೆಂದರೆ ತಾವು ನಿಜವಾದ ಸೆಕ್ಯೂಲರಿಸ್ಟರು ಎಂದು ಈ ಕೋಮುವಾದಿಗಳು ಹೇಳಿಕೊಳ್ಳುತ್ತಿದ್ದಾರೆ. ಬಹುಸಂಖ್ಯಾತ ಕೋಮುವಾದ, ಅಲ್ಪಸಂಖ್ಯಾತ ಮೂಲಭೂತವಾದಗಳೆರಡನ್ನು ನಿದರ್ಶನಗಳ ಮೂಲಕ ಅತ್ಯಂತ ನಿಷ್ಠುರವಾಗಿ ವಿಮರ್ಶಿಸಿರುವುದನ್ನು ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ. 'ಹಿಂದುತ್ವ'ದ ಕೋಮುವಾದಿಗಳಿಗೆ ಮುಸ್ಲಿಂ ಮೂಲಭೂತವಾದವನ್ನು ಟೀಕಿಸಿರುವುದು ಸಹ ಸರಿ ಕಾಣಿಸುತ್ತಿಲ್ಲ. ! ಇಲ್ಲಿ ಅವರ 'ಕನಸೊಂದೇ ಮನಸೊಂದೇ' ಎಂಬ ಅವರ ಅವಕಾಶವಾದೀ ಭಾತೃತ್ವ ಕಣ್ಣಿಗೆ ಹೊಡೆಯುವಂತಹದ್ದು.

ಈ ವಿವಾದ ಎದ್ದಿರುವ ಹಿನ್ನೆಲೆಯಲ್ಲಿ ಆ ಲೇಖನವನ್ನು ಪಠ್ಯಪುಸ್ತಕಕ್ಕಾಗಿಯೇ ಬರೆದುದಲ್ಲ. ಬೇರೆ ಸಂದರ್ಭಕ್ಕೆ ಬರೆದುದು ಎಂದು ಸ್ಪಷ್ಟಪಡಿಸಿದ್ದಾರೆ. ಅಭಿವ್ಯಕ್ತಿಯ ಸ್ವರೂಪ, ವಸ್ತು-ವಿಶ್ಲೇಷಣೆ ಬಗೆಗೆ ಹಲವು ಅಭಿಪ್ರಾಯವನ್ನು-ಬೇರೆಯವರು ಇಷ್ಟುಕೊಳ್ಳಲು ತಕರಾರಿಲ್ಲ. ಆದರೆ ಲೇಖಕರಿಗೂ ಅವರದ್ದೇ ಸ್ವಾತಂತ್ರ್ಯವಿದೆ. ಪದವಿ ಕಲಿಕೆಯ ಮಟ್ಟದಲ್ಲಿ ಕನ್ನಡ ಸಾಹಿತ್ಯದ ಹಲವು ಮಾದರಿಗಳ ಅರಿವು ಅಗತ್ಯವಿದ್ದು ವಿದ್ಯಾರ್ಥಿ ಅಧ್ಯಯನ ಮಾಡಬೇಕಾಗುತ್ತದೆ. ನಮ್ಮ ನಾಡಿನ ಸಾಹಿತ್ಯ ಪರಂಪರೆಯಲ್ಲಿ ಬಂಡಾಯ ಸಾಹಿತ್ಯ-ವಿಚಾರಗಳು ಅತ್ಯಂತ ಪ್ರಮುಖವಾಗಿವೆ. ಅದರ ಪ್ರಾತಿನಿಧಿಕವಾದ ಸಾಹಿತ್ಯ, ಲೇಖನಗಳನ್ನು ಪಠ್ಯದಲ್ಲಿ ಒಳಗೊಂಡಿರುವುದರಲ್ಲಿ ಯಾವುದೇ ತಪ್ಪಿಲ್ಲ. ಈಗ ಆಯ್ಕೆ ಮಾಡಿರುವ ಬರಹಗಳು ಭಾರತದ ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ಇವೆ. ಒಂದು ವೇಳೆ ಯಾವುದರ ಬಗ್ಗೆಯೂ ಭಿನ್ನಾಭಿಪ್ರಾಯಗಳಿದ್ದಲ್ಲಿ ಚರ್ಚಿಸಿ, ಹೊಸ ಅರಿವು ಪಡೆಯಲು ಮುಕ್ತ ಅವಕಾಶವಿದೆ. ಪದವಿ ವಿದ್ಯಾರ್ಥಿಗಳಿಗೆ ಇದು ಅಗತ್ಯವೂ ಹೌದು.

ಈ ಹಿನ್ನೆಲೆಯಲ್ಲಿ ಎ.ಬಿ.ವಿ.ಪಿ. ಸಂಘಟನೆ ಪಾಠಗಳ ಬಗ್ಗೆ ತಕರಾರು ಎತ್ತಿರುವುದು ದುರುದ್ದೇಶದಿಂದಲೇ. ಅಲ್ಲಿ ಪ್ರಸ್ತಾಪಿತವಾದ ಬಹುತೇಕ ವಿಷಯಗಳು ನಡೆದ ನಿದರ್ಶನಗಳ ಆಧಾರದಲ್ಲಿವೆ. ಆದರೆ ಧಾರ್ಮಿಕತೆ, ದೇಶಪ್ರೇಮದ ಮುಖವಾಡ ಹಾಕಿ ಭಾರತೀಯ ಬಹುಮುಖಿ ಸಂಸ್ಕೃತಿ, ಪರಂಪರೆಯನ್ನು ನಾಶಗೊಳಿಸುವ ಗುಪ್ತ ಅಜೆಂಡಾ ಇಲ್ಲಿ ಬಯಲಾಗುತ್ತಿರುವುದು ನಿಜಕ್ಕೂ ಆ ಶಕ್ತಿಗಳಿಗೆ ದಿಗಿಲು ಹುಟ್ಟಿಸಿರಬಹುದು.


ಪ್ರಮುಖ ವಿಷಯವೆಂದರೆ, ಬಿಜೆಪಿ ಅಧಿಕಾರದಲ್ಲಿರುವುದನ್ನು ಬಳಸಿ ಇಡೀ ಶೈಕ್ಷಣಿಕ ಕ್ಷೇತ್ರವನ್ನು 'ಹಿಂದುತ್ವ'ದ ಫ್ಯಾಸಿಸ್ಟ್ ಮಾದರಿಯ ಚಿಂತನೆಗಳಿಂದ ತುಂಬಿಸಬೇಕೆಂಬ ಆರ್.ಎಸ್.ಎಸ್.ನ ಅಜೆಂಡಾ ಜಾರಿ ಕಾರ್ಯಾಚರಣೆಯ ಭಾಗವಿದಾಗಿದೆ. ಈಗಾಗಲೇ ವಿಶ್ವವಿದ್ಯಾಲಯಗಳ ಸೆನೆಟ್-ಸಿಂಡಿಕೇಟ್‌ಗಳು, ಉಪ ಕುಲಪತಿ, ಕುಲ ಸಚಿವರಂತಹ ಎಲ್ಲಾ ಪ್ರಮುಖ-ಸ್ಥಾನಗಳಿಗೆ, 'ಕರ ಸೇವಕರ'ನ್ನು ನೇಮಿಸುವ ಕೆಲಸ ನಡೆದಿದೆ ಮತ್ತು ಈಗ ಪ್ರಗತಿಪರ, ಸಾಮಾಜಿಕ, ಕಳಕಳಿಯ ಅಧ್ಯಾಪಕರನ್ನು, ಪಠ್ಯ ಕ್ರಮಗಳನ್ನು ತೆಗೆದು ಹಾಕುವ ಧಾಳಿ ಆರಂಭಗೊಂಡಿದೆ. ಹಿಂದೆ ಶಿವಮೊಗ್ಗ, ಇತ್ತೀಚಿಗೆ ಮಂಗಳೂರು ವಿ.ವಿ.ಗಳಲ್ಲಿ (ಗಾಂಧೀ ಬಂದ) ಇಂತಹುದೇ ತಕರಾರು ಎತ್ತಿ ಧಾಳಿ ನಡೆಸಿದೆ. ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮಗಳನ್ನು ಪುನರ್ ರೂಪಿಸಿ ಕೋಮುವಾದೀಕರಿಸಲಾಗುತ್ತಿದೆ. ಈಗ ತುಮಕೂರು ವಿಶ್ವವಿದ್ಯಾಲಯದ ಲಾಂಛನವನ್ನೇ ಬದಲಾಯಿಸಲಾಗುತ್ತಿದೆ. ಇಂತಹ ಧಾಳಿಗಳ ಭಾಗವೇ ಬೆಂಗಳೂರು ವಿ.ವಿ. ಪಠ್ಯದ ಕುರಿತ ವಿವಾದವಾಗಿದೆ. ಇಡೀ ಶಿಕ್ಷಣ ಕ್ಷೇತ್ರವನ್ನೇ ಕೋಮುವಾದದ ವಿಷದಿಂದ ಮುಳಿಗೇಳಿಸಿ ಚಿಂತನೆ-ಚೈತನ್ಯ ಕೊಲ್ಲುವ ಯತ್ನಗಳನ್ನೇ ಮಾನವ ಪ್ರೇಮಿಗಳು ಒಪ್ಪಲು ಸಾಧ್ಯವೇ ಇಲ್ಲ. ಆದ್ದರಿಂದ ಅಂತಹ ಹುನ್ನಾರಗಳನ್ನು ದಿಟ್ಟತನದಿಂದ ಎದುರಿಸಿ, ಹಿಮ್ಮೆಟ್ಟಿಸಬೇಕು.

'ಜಾತಕ ಪಕ್ಷಿ'ಗೆ ಕಾದಿದೆ ಆಘಾತ ! ?



'ಸಂತೋಷದ ಸುದ್ದಿ ಇನ್ನೇನು ಬರಲಿದೆ'ಯೆಂದು ಮಾಜಿ ಮುಖ್ಯಮಂತ್ರಿಗಳು ಹೇಳಿಕೊಂಡು ತಿರುಗುತ್ತಿರುವಾಗಲೇ ಅವರಲ್ಲಿ ದುಃಖದ ವಾರ್ತೆಗಳೂ ಮುಡುಗಟ್ಟಿರುವುದನ್ನು ಬಚ್ಚಿಡಲಾಗುತ್ತಿಲ್ಲ. ಇನ್ನೇನೂ ಮಾತನಾಡುವುದಿಲ್ಲ. ಕಾಯುವುದೇ ನನ್ನ ಕಾಯಕ ಎನ್ನುತ್ತಾರಾದರೂ ಸುಮ್ಮನೆ ಕುಳಿತಿಲ್ಲ. ಈಗಲೂ ಯಡಿಯೂರಪ್ಪನವರಿಗೆ ಮತ್ತೇ ಅದೃಷ್ಟ ಖುಲಾಯಿಸಲಿದೆ ಎಂದೇ ಅವರ ಬಣದ ಅನೇಕರು ಕಾದಿದ್ದಾರೆ. ಹಾಗೆ ನಂಬಿಕೆ ಹುಟ್ಟಿಸದಿದ್ದರೆ ಜೊತೆಗೆ ಉಳಿಯುವವರ್ಯಾರು ?

ಬಿಜೆಪಿಯೊಳಗಿನ ಬಡಿದಾಟದಿಂದ, ಅಧಿಕಾರದಾಹದ ಕಿತ್ತಾಟದಿಂದ ಕರ್ನಾಟಕ ಜನತೆ ತತ್ತರಿಸುತ್ತಿದೆ. ವಿವಿಧ ಗುಂಪುಗಳ ಕದನ ಇಡೀ ಆಡಳಿತವನ್ನೇ ಶಿಥಿಲಗೊಳಿಸಿದೆ. ಅಭಿವೃದ್ಧಿ ಸಾಧಿಸುವುದಿರಲಿ ಇರುವ ಕರ್ನಾಟಕವೂ ಹಾಳಾಗುತ್ತಿದೆ. ಬಿಜೆಪಿಯ ಹೈಕಮಾಂಡ್ ಈ ಗುದ್ದಾಟವನ್ನೂ ನಿಲ್ಲಿಸಲಾಗದೇ ಶಿಸ್ತನ್ನೂ ಹೇರಲಾಗದೇ ಅಸಹಾಕತೆ ತೋರ್ಪಡಿಸುತ್ತಿದೆ. ರಾಜ್ಯದಲ್ಲಿರುವಂತೆಯೇ ಹೈಕಮಾಂಡ್‌ನ ಒಳಗೂ ಒಡಕಿದೆ. ಇಲ್ಲಿರುವಂತೆ ಅಲ್ಲಿಯೂ ಇಲ್ಲಿನವರಿಂದ ಫಲಾನುಭವಿಗಳಿದ್ದಾರೆ.



ಇನ್ನೂ ಸರಿಯಾಗಬೇಕಾದವರು ಯಾರು ?.


ಈಗ ಇನ್ನೇನು, ಬಜೆಟ್‌ನ ವಿಧಾನಸಭಾ ಅಧಿವೇಶನ ಮುಕ್ತಾಯವಾಗಬೇಕಿದೆ. ಆದರೆ ಆಗಲೇ ಮತ್ತೇ ಯಡಿಯೂರಪ್ಪನವರ ಬಣ ತಮ್ಮ ಶಕ್ತಿ ಪ್ರದರ್ಶನಕ್ಕೆ ಇಳಿದಿದೆ. ಬೆಳಿಗ್ಗೆ ಮಾಜಿ ಸಿ.ಎಂ. ಮನೆಯಲ್ಲಿ ಉಪಹಾರ, ಮಧ್ಯಾಹ್ನ ಸದಾನಂದಗೌಡರ ಆಪ್ತರ ಮನೆಯಲ್ಲಿ ಭೋಜನ ಸ್ವೀಕರಿಸುವ ತರಾತುರಿಯಲ್ಲಿ ಶಾಸಕ ಮಹಾಶಯರು, ಜನ ಪ್ರತಿನಿಧಿಗಳು ಸರಕಾರ-ಆಡಳಿತ ಎಷ್ಟೊಂದು ಕ್ರಿಯಾಶೀಲ ?! ಗುಜರಾತ್ ಮಾದರಿಯೆಂದರೆ ಇದೇನೇ !.

ಈಗ ಬಜೆಟ್ ಅಂಗೀಕಾರವಾಗಬೇಕು. ಅದು ಆಗದೇ ಹೋದರೆ ಸರ್ಕಾರವೇ ಪತನವಾಗುತ್ತದೆ. ಹೀಗಾಗಿ ಇದು ಆಡಳಿತ ಪಕ್ಷಕ್ಕೆ ಸತ್ವಪರೀಕ್ಷೆಯಂತೇ. ಇದನ್ನೇ ಹಿಡಿದು ಯಡಿಯೂರಪ್ಪ ಹೈಕಮಾಂಡನ್ನೂ - ಸದಾನಂದ-ಅನಂತರನ್ನೂ ಅಲ್ಲಾಡಿಸುತ್ತಿದ್ದಾರೆ. 'ಗಡುವು ಮುಗಿಯಿತು, ಹಾದಿ ಬಿಡಿ, ಎಂಬುದು ಯಡಿಯೂರಪ್ಪನವರ ಆಗ್ರಹ ಅರ್ಥಾತ್ ಬ್ಲಾಕ್ ಮೇಲ್ !

ಈ ನಡುವೆ ವಿವಿಧ ಬಣಗಳೊಂದಿಗೆ ಹೈಕಮಾಂಡ್ ಮಾತುಕತೆ ನಡೆಸಿದೆ. ಏನು ನಡೆದಿದೆ ? ಏನು ನಡೆಯಲಿದೆ ?. ಹುತ್ತೊಳಗಿನ ಹಾವು ಹೊರ ಬಂದಿಲ್ಲ !. ಆದರೆ ಬಣಗಳೊಳಗೆ ನಿಷ್ಠುರ ನಿಷ್ಠೆಗಳೂ ಬದಲಾಗುತ್ತಿವೆ.

ಪುಟ 5 ಕ್ಕೆ........

ಕಾರ್ಟೂನ್ ಕಾರ್ನರ್



ಕೃಪೆ : ದಿ ಹಿಂದೂ

ಉ.ಕ. ಜಿಲ್ಲಾ ಪಂಚಾಯತ ಎದುರು ಪಂಚಾಯತ ನೌಕರರ ಧರಣೆ



ಕಾರವಾರ : ಮಾರ್ಚ 15ರಂದು ಬೆಳಗ್ಗೆ 11 ಗಂಟೆಯಿಂದ ಜಿಲ್ಲಾ ಪಂಚಾಯತ ಎದುರಿಗೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ವ್ಹಿ.ಪಿ. ಕುಲಕರ್ಣಿ ಇವರ ನೇತೃತ್ವದಲ್ಲಿ ಹಲವಾರು ಬೇಡಿಕೆ ಇಟ್ಟು ಉತ್ತರ ಕನ್ನಡ ಜಿಲ್ಲಾ ಪಂಚಾಯತ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿದ್ದು, ಕನಿಷ್ಠ ವೇತನಕ್ಕೂ ಅಪ್ರೂಲ್‌ಗೂ ಯಾವುದೇ ಸಂಬಂಧ ಇಲ್ಲಾ ಎಂದು ವ್ಹಿ.ಪಿ.ಕುಲಕರ್ಣಿ ಗ್ರಾಮ ಪಂಚಾಯತ ನೌಕರರ ರಾಜ್ಯ ಮುಖಂಡರು ಸಭೆಯಲ್ಲಿ ವಿವರಣೆಯನ್ನು ನೀಡಿದ್ದಾರೆ. ಆದ್ದರಿಂದ ಎಲ್ಲಾ ಗ್ರಾಮ ಪಂಚಾಯತ ನೌಕರರಿಗೆ ದಿನಾಂಕ 01/04/2011 ರ ಕನಿಷ್ಠ ವೇತನ ಆದೇಶದ ಪ್ರಕಾರ ಎಲ್ಲಾ ಕ್ಲಾರ್ಕ, ಬಿಲ್‌ಕಲೆಕ್ಟರ, ವಾಟರಮೇನ್, ಸಿಪಾಯಿ, ಹಾಗೂ ಇತರೆ ನೌಕರರಿಗೆ ವೇತನ ನೀಡುವಂತೆ ಆದೇಶ ಮಾಡಿರುತ್ತದೆ. ಹಾಗೂ ಸರಕಾರದ ಆದೇಶದ ಪ್ರಕಾರ ಜಾರಿ ಮಾಡದೇ ಹೋದ ಗ್ರಾಮ ಪಂಚಾಯತ ಪಿ.ಡಿ.ಓ.ಗಳ ಮೇಲೆ ಕ್ರಮ ತೆಗೆದುಕೊಂಡಾದರೂ ವೇತನ ಕೊಡಿಸುತ್ತೇವೆ ಎಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ ಕಾರವಾರ ಇವರು ಸಭೆಯಲ್ಲಿ ಆಸ್ವಾಸನೆ ನೀಡಿದರು.

ಈ ಹಿಂದಿನ ಆದೇಶದಲ್ಲಿ ಗ್ರೇಡ್-2 ಕಾರ್ಯದರ್ಶಿಗಳ ಆಯ್ಕೆ ಮಾಡುವ ಮಾನದಂಡ ಅಂಕ ಮತ್ತು ಪರೀಕ್ಷೆ ಮಾಡುವದನ್ನು ರದ್ದುಪಡಿಸಿ, ಈಗಾ ಸಿನಿಯರಟ್ಟಿ ಪ್ರಕಾರ ಆಯ್ಕೆ ಮಾಡಲಾಗುವುದು ಎಂದು 13/03/2012ರಂದು ಕರಡು ಪ್ರತಿ ನೀಡಲಾಗಿದೆ. 15 ದಿನಗಳಲ್ಲಿ ಸರಕಾರದ ಆದೇಶ ಮಾಡಲಾಗುವುದು ಎಂದು ಸರಕಾರದ ಕರಡು ಪ್ರತಿಯನ್ನು ಮಾಹಿತಿಗಾಗಿ ಸಿ.ಓ ಇವರಿಗೆ ನೀಡಲಾಗಿದೆ.

ಇನ್ನು ಕಂಪ್ಯೂಟರ ಆಪರೇಟರ ಹೊರಗುತ್ತಿಗೆ ತೆಗೆದು ಗ್ರಾಮ ಪಂಚಾಯತ ನೌಕರರೆಂದು ಪರಿಗಣನೆ ಮಾಡುವಂತೆ ಸರಕಾರದ ಜೊತೆ ಮಾತುಕತೆ ನಡೆಯುತ್ತಾ ಇದ್ದು, ಒಂದೇರಡು ದಿನಗಳಲ್ಲಿ ಬಗ್ಗೆ ಹರಿಯಬಹುದು.

ಈ ಚಲೋ ಕಾರ್ಯಕ್ರಮದ ಗ್ರಾಮ ಪಂಚಾಯತ ನೌಕರರ ಜಿಲ್ಲಾ ಅಧ್ಯಕ್ಷರಾದ ಸುಭಾಸ ಕೊಪ್ಪಿಕರ, ಪ್ರಧಾನ ಕಾರ್ಯದರ್ಶಿ ಶ್ರೀ ಮುತ್ತಾ ಪೂಜಾರಿ, ಖಜಾಂಜಿ ಗಣಪತಿ ಭಾಗ್ವತ, ಜಿಲ್ಲಾ ಸಿ.ಐ.ಟಿ.ಯು ಅಧ್ಯಕ್ಷರಾದ ಹರೀಶ ನಾಯ್ಕ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಜಿಲ್ಲಾ ಗ್ರಾಮ ಪಂಚಾಯತ ಜಿಲ್ಲಾ ಸಮಿತಿ ಸದಸ್ಯರು, ಎಲ್ಲಾ ತಾಲೂಕಾ ಅಧ್ಯಕ್ಷರು ಕಾರ್ಯದರ್ಶಿಗಳು ಹಾಗೂ ಇತರೆ ಮುಖಂಡರು ಸಭೆಯಲ್ಲಿ ಹಾಜರಿದ್ದಾರೆ ತಿಳಿಸಲಾಗಿದೆ.



ರಸ್ತೆ-ಸೇತುವೆಗಾಗಿ, ಶಿಕ್ಷಕರಿಗೆ, ಮೂಲಭೂತ ಸೌಕರ್ಯಗಳಿಗಾಗಿ

ಹುಲಿ ಯೋಜನೆ ವಿರೋಧಿಸಿ ರೈತರ ಧರಣೆ ಸತ್ಯಾಗ್ರಹ

ಜೋಯಿಡಾ : ರಾಜ್ಯದಲ್ಲೇ ಅತಿ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟ ಜೋಯಿಡಾ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ, ರಸ್ತೆ-ಸೇತುವೆಗಳಿಗಾಗಿ, ಶಾಲೆಗಳಿಗೆ ಶಿಕ್ಷಕರಿಗಾಗಿ, ಸಾರಿಗೆ ವ್ಯವಸ್ಥೆಗಾಗಿ, ವಿದ್ಯುತ್ತಿಗಾಗಿ, ಹುಲಿ ಯೋಜನೆ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ಜೋಯಿಡಾ ತಾಲೂಕು ಸಮಿತಿ ನೇತೃತ್ವದಲ್ಲಿ ಫೆ.29ರಿಂದ ಜೋಯಿಡಾ ತಹಶೀಲ್ದಾರ ಕಛೇರಿ ಎದುರು ರೈತರ ಧರಣೆ ಆರಂಭಗೊಂಡಿದೆ. ಧರಣೆ ಪ್ರಾರಂಭದಲ್ಲಿ ಬೃಹತ್ ಮೆರವಣಿಗೆ ನಡೆಸಲಾಯಿತು. ಧರಣೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ಸಿ. ಬಯಾರೆಡ್ಡಿ ಉದ್ಘಾಟಿಸಿದರು. ಜೋಯಿಡಾ ತಾಲೂಕಿನ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜನ್ನು ರಾಜ್ಯ ಬಜೇಟ್‌ನಲ್ಲಿ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಜಿಲ್ಲಾ ಸಮಿತಿ ಅಧ್ಯಕ್ಷರಾದ ಮಂಜುನಾಥ ಪುಲಕರ, ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ತಾಲೂಕ ಕಾರ್ಯದರ್ಶಿ ಪ್ರೇಮಾನಂದ ವೇಳಿಪ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಹೋರಾಟದ ನೇತೃತ್ವವನ್ನು ತಾಲೂಕಾ ಸಮಿತಿ ಅಧ್ಯಕ್ಷರಾದ ನಾರಾಯಣ ವೇಳಿಪ, ಕಾರ್ಮಿಕ ಮುಖಂಡರಾದ ಯಮುನಾ ಗಾಂವಕರ, ರೈತ ಸಂಘದ ಪದಾಧಿಕಾರಿಗಳಾದ ದಿಗಂಬರ ದೇಸಾಯಿ, ರಾಜೇಶ ಗೌಡ, ಶಾಂತಾ ವೇಳಿಪ, ಬಾಳಸೋ ಕುಂಡಲಕರ, ಅನಂತ ದೇಸಾಯಿ, ಮಹಾದೇವ ಮಿರಾಶಿ, ದತ್ತಾ ದೇಸಾಯಿ, ರವಿ ಡಿಗ್ಗಿ ಮುಂತಾದವರು ವಹಿಸಿದ್ದರು.

ಬೇಡಿಕೆಗಳ ಬಗ್ಗೆ ಜೋಯಿಡಾ ತಹಶೀಲ್ದಾರರಿಗೂ ತಾಲೂಕ ಪಂಚಾಯತ ಕಾರ್ಯನಿರ್ವಹಣಾ ಅಧಿಕಾರಿಗಳಿಗೂ ಮನವಿ ನೀಡಲಾಯಿತು. ಪ್ರಮುಖ ಬೇಡಿಕೆಗಳ ಕುರಿತು ಮಾರ್ಚ್ 3ರಂದು ಧರಣೆಯ ನಾಲ್ಕನೇ ದಿನ ಮಾನ್ಯ ಶಾಸಕರಾದ ಸುನೀಲ ಹೆಗಡೆ ಮತ್ತು ತಹಶೀಲ್ದಾರ ಅಲ್ಲದೇ ತಾಲೂಕಿನ ಹಿರಿಯ ಅಧಿಕಾರಿಗಳು ಹೋರಾಟ ನಿರತರೊಂದಿಗೆ ಬೇಡಿಕೆಗಳ ಬಗ್ಗೆ ಜಂಟಿ ಚರ್ಚೆ ನಡೆಸಿದರು. ಬೇಡಿಕೆಗಳನ್ನು ಈಡೇರಿಸಲು ತುರ್ತು ಕ್ರಮ ತೆಗೆದುಕೊಳ್ಳುವುದಾಗಿ ಹಾಗೂ ಬಜೆಟ್‌ನಲ್ಲಿ ಹಲವಾರು ಅಂಶಗಳನ್ನು ಅಳವಡಿಸುವುದಾಗಿ ತಿಳಿಸಿ ಲಿಖಿತವಾಗಿ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಧರಣೆ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

"ಸರ್ಕಾರಿ ಶಾಲೆಗಳಲ್ಲಿ ಕಲಿತವರು ಕ್ರೂರಿಗಳೂ, ನಕ್ಸಲರೂ ಆಗಿದ್ದಾರೆ" ಕಾರ್ಪೋರೇಟ್ ಗುರು ರವಿಶಂಕರ ಅಣಿಮುತ್ತು.

ಖಾಸಗಿ ಶಾಲೆಯೊಂದರ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ರವಿಶಂಕರ ಗರೂಜಿಯವರು ಸರ್ಕಾರಿ ಶಾಲೆಗಳು ನಕ್ಸಲರನ್ನು ಉತ್ಪಾದಿಸುವ ಕೇಂದ್ರಗಳು ಆದ್ದರಿಂದ ಸರ್ಕಾರ ಶಾಲೆಗಳನ್ನು ನಡೆಸುವ ಬದಲು ಖಾಸಗಿ ಸಂಸ್ಥೆಗಳಿಗೆ ವಹಿಸಲಿ ಎಂದು ತಿಳಿಸಿದ್ದಾರೆ. ಅವರ ಹೇಳಿಕೆಯನ್ನು ಸಮರ್ಥಿಸಲು ಅವರು ಖಾಸಗಿ ಶಾಲೆಗಳಲ್ಲಿ ಕಲಿತ ಮಕ್ಕಳು ಶೀಲವಂತರೂ, ಆದರ್ಶಮಯಿಗಳೂ ಆಗಿದ್ದಾರೆ ಮತ್ತು ಅದಕ್ಕೆ ಆ ಶಾಲೆಗಳ ಶಿಕ್ಷಕರೇ ಕಾರಣ ಆದರೆ ಸರ್ಕಾರಿ ಶಾಲೆಗಳಲ್ಲಿ ಕಲಿತವರು ಕ್ರೂರಿಗಳು ಮತ್ತು ನಕ್ಸಲ್‌ಗಳೂ ಆಗಿರುವುದು ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ ಎಂದು ಹೇಳಿದ್ದಾರೆ. ಇವರ ಹೇಳಿಕೆ ಆಧಾರವಿಲ್ಲದ್ದು ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಖಂಡಿಸಿದೆ.

ಸರ್ಕಾರಿ ಶಿಕ್ಷಣ ವ್ಯವಸ್ಥೆ ಗಣನೀಯವಾಗಿರುವಾಗಲೇ ದೇಶದ ಅರ್ಧಕ್ಕರ್ಧ ಜನತೆ ಅನಕ್ಷರಸ್ಥರಾಗಿದ್ದಾರೆ. ಹಾಗಿರುವಾಗ ಮಾನ್ಯ ಗುರೂಜಿಯವರ ಫರ್ಮಾನಿನಂತೆ ಸರ್ಕಾರ ಖಾಸಗಿಯವರಿಗೆ ಶಾಲೆಗಳನ್ನು ಮಾರಿದಲ್ಲಿ ನಮ್ಮ ಸಮಾಜ 100 ವರ್ಷ ಹಿಂದೆ ಓಡುವುದು ಖಂಡಿತ. ಸ್ವತಃ ಗುರೂಜಿ 185 ಪೂರ್ವಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದ್ದು, ಅವರು ತೆರೆಯುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಕ್ಕಳ ಕೊರತೆ ಬರದಂತೆ ಈಗಲೇ ಪಿತೂರಿಯೊಂದನ್ನು ಹೆಣೆಯುತ್ತಿರುವಂತೆ ತೋರುತ್ತದೆ ಎಂದೂ ಬಿಜೆವಿಎಸ್ ಶಂಕೆ ವ್ಯಕ್ತ ಪಡಿಸಿದೆ.



ಶಿಕ್ಷಕರು ಮತ್ತು ಶಿಕ್ಷಕ ಸಂಘಟನೆಗಳು ಈ ಹೇಳಿಕೆಯನ್ನು ಬಲವಾಗಿ ಖಂಡಿಸಬೇಕು ಕರೆ ನೀಡಿರುವ ಬಿಜೆವಿಎಸ್ ಸರ್ಕಾರ ರವಿಶಂಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಆಗ್ರಹಿದೆ.


ತಮ್ಮ ಹೇಳಿಕೆಗೆ ವಿರೋಧ ಬಂದ ಹಿನ್ನೆಲೆಯಲ್ಲಿ ರವಿಶಂಕರ ಗುರೂಜಿಯವರು ನನ್ನ ಹೇಳಿಕೆಯನ್ನು ಸಾಮಾನ್ಯೀಕರಿಸಬಾರದು. ಅದು ನಕ್ಸಲ್ ಪೀಡಿದ ರಾಜ್ಯಗಳ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದ್ದು ಎಂದು ಸಮರ್ಥಿಸಲು ಹೊರಟಿದ್ದಾರೆ ಎಂದಿರುವ ಬಿಜೆವಿಎಸ್ ಈ ಕುರಿತು ಎಚ್ಚರಿಕೆ ವಹಿಸುವಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಕರೆ ನೀಡಿದೆ.

ಎಸ್‌ಎಫ್‌ಐನಿಂದ ಪ್ರತಿಭಟನೆಗೆ ಕರೆ

ರವಿಶಂಕರರ ಈ ಹೇಳಿಕೆಯು ಸಮಾಜದ ದಲಿತರು, ಹಿಂದುಳಿದವರು, ಬಡವರು ಮುಂತಾದ ಅವಕಾಶ ವಂಚಿತ ವಿಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ವಂಚಿಸುವ ಹುನ್ನಾರ ಮತ್ತು ಶಿಕ್ಷಣದ ನಿರ್ದಯ ವ್ಯಾಪಾರೀಕರಣದ ಪರವಾದ ಲಾಬಿ ಎಂದು ಭಾರತ ವಿದ್ಯಾರ್ಥಿ ಫೇಡರೇಷನ್‌ನ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಖಾಸಗೀಕರಣದ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಸಂಘ ಪರಿವಾರದ ತಕ್ಕೆಗೆ ತೆಗೆದುಕೊಳ್ಳುವ ಸಂಚು ಹಾಗೂ ಸರ್ಕಾರಿ ಶಾಲೆಗಳಿಗೆ ಸೇರಿರುವ ಅಪಾರ ಪ್ರಮಾಣದ ಆಸ್ತಿಯನ್ನು ಲಪಟಾಯಿಸುವ ಸಂಚು ಈ ಹೇಳಿಕೆಯ ಹಿಂದಿದೆ ಎಂದು ಖಂಡಿಸಿರುವ ಎಸ್ಸೆಫೈ ಏಪ್ರಿಲ್ 2,2012 ರಂದು ರಾಜ್ಯವ್ಯಾಪಿ ಬೂತ ದಹನ ಇತ್ಯಾದಿ ಪ್ರತಿಭಟನೆಗೆ ಕರೆ ನೀಡಿದೆ.

"ರೈತ ವಿರೋಧಿ, ಬಡವರ ವಿರೋಧಿ, ಬಂಡವಾಳಗಾರರ ಕೇಂದ್ರ ಸರ್ಕಾರದ ಬಜೆಟ್" ಪ್ರಾಂತ ರೈತ ಸಂಘದ ಕಟು ಟೀಕೆ





ಕೃಷಿಯ ಎಲ್ಲಾ ಲಾಗವಡಿಗಳ ಬೆಲೆಗಳು ವಿಪರೀತವಾಗಿ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಲೆಯು ಸಿಗದೇ ದಿವಾಳಿಯಾಗಿ ರೈತರು ಆತ್ಮಹತ್ಯೆಗಳಿಗೆ ಮುಂದಾಗುತ್ತಿರುವ ಸನ್ನಿವೇಶದಲ್ಲಿ ಕೃಷಿ ಬಿಕ್ಕಟ್ಟನ್ನು ತಿಳಿಗೊಳಿಸಿ ಕೃಷಿ ರಕ್ಷಣೆಗೆ ಮುಂದಾಗುವ ಬದಲು ಈಗಾಗಲೇ ಕಳೆದ 8–10 ತಿಂಗಳಲ್ಲಿ ಶೇ 100–120 ಕ್ಕಿಂತ ಹೆಚ್ಚು ಬೆಲೆ ಏರಿಕೆಯಾಗಿರುವ D.A.P ಇತ್ಯಾದಿ ರಸಗೊಬ್ಬರಗಳಿಗೆ ನೀಡುತ್ತಿರುವ ರಸಗೊಬ್ಬರಗಳ ಸಬ್ಸಿಡಿಯಲ್ಲಿ 6000 ಕೋಟಿರೂಗಳ ಕಡಿತ ಮಾಡಿ, ರಸಗೊಬ್ಬರಗಳ ಬೆಲೆ ಮತ್ತಷ್ಟು ಏರಿಕೆಯಾಗಿ, ರೈತರಿಗೆ ಸಿಗಲಾರದ ಸ್ಥಿತಿಯನ್ನು ಕೇಂದ್ರ ಸರ್ಕಾರದ ಬಜೆಟ್ ಉಂಟುಮಾಡಿದೆ. ಅಷ್ಟು ಮಾತ್ರವಲ್ಲದೆ 'ಬಡವರ ಪಾಲಿಗೆ ಅಭಯ ಹಸ್ತ' (ಅಮ್ ಅದಿಮಿಕಾ ಸಾಥ್ ಕಾಂಗ್ರೆಸ್‌ಕ ಹಾತ್) ಎಂದು ಘೋಷಣೆ ಮಾಡುವ ಯು.ಪಿ.ಎ. ನಾಯಕತ್ವದ ಕಾಂಗ್ರೆಸ್‌ನ ಅರ್ಥ ಸಚಿವರು, ಎಲ್ಲಾ ರೀತಿಯ ಬೆಲೆ ಏರಿಕೆಗಳಿಂದ ನರಳುತ್ತಿರುವ ಅಸಂಖ್ಯಾತ ಸಾಮಾನ್ಯ ಜನರನ್ನು ಮತ್ತಷ್ಟು ಬೆಲೆ ಏರಿಕೆಗೆ ತಳ್ಳುವ ಹುನ್ನಾರವಾಗಿ ಪೆಟ್ರೋಲ್, ಡಿಸೇಲ್ ದರಗಳ ಸಬ್ಸಿಡಿಯಲ್ಲಿ ಸುಮಾರು 27,0000 ಕೋಟಿ ರೂಗಳ ಕಡಿತ, ಗ್ರಾಮೀಣ ಪ್ರದೇಶದ ಕೃಷಿ ಕೂಲಿಕಾರರಿಗೆ, ಕನಿಷ್ಠ ನೂರು ದಿನಗಳ ಕೆಲಸ ಕೂಡುವ ಉದ್ದೇಶದಿಂದ ಜಾರಿಗೆ ಬಂಧಿರುವ ಉದ್ಯೋಗ ಖಾತರಿ ಯೋಜನೆಗಾಗಿ ಕಳೆದ ವರ್ಷ ನೀಡಿದ್ದ ಮೊತ್ತದಲ್ಲಿ 9,000 ಕೋಟಿ ರೂಗಳ ಕಡಿತ, ಸಾಮಾನ್ಯ ಜನರಿಂದ ಸಂಗ್ರಹವಾಗುವ ಅಪ್ರತ್ಯಕ್ಷ ತೆರಿಗೆಯಿಂದ ಹೆಚ್ಚುವರಿಯಾಗಿ ಸುಮಾರು 46,000ಕೋಟಿ ರೂ ಸಂಗ್ರಹದ ಘೋಷಣೆ, ಅಸಂಘಟಿತ ಕಾರ್ಮಿಕರು ಸೇರಿದಂತೆ ಕಾರ್ಮಿಕರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು ಶೇ 9.5 ರಿಂದ 8.25ಕ್ಕೆ ಇಳಿಕೆ, ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡಕ್ಕೆ ಅವರವರ ಜನಸಂಖ್ಯೆಯ ಆಧಾರವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕೆಂಬ ಶಾಸನಬದ್ಧ ನಿರ್ಣಯವನ್ನು ಧಿಕ್ಕರಿಸಿ ಶೇ.16.5 ರಷ್ಟು ಇರುವ ಪರಿಶಿಷ್ಟ ಜಾತಿಯ ಜನಕ್ಕೆ ಶೇ.7, ಶೇ.8.2 ರಷ್ಟು ಇರುವ ಪರಿಶಿಷ್ಟ ಪಂಗಡದ ಜನರಿಗೆ ಶೇ 4ರಷ್ಟು ಮಾತ್ರವೇ ಹಣವನ್ನು ಮೀಸಲಿಟ್ಟಿದ್ದಾರೆ.

ಇಂತಹ ಹಲವಾರು ಕ್ರಮಗಳ ಮೂಲಕ ದೇಶದ ಬಹುಸಂಖ್ಯಾತ ರೈತರು, ಕೃಷಿ ಕೂಲಿಕಾರರಿಗೆ ಕೇಂದ್ರ ಸರ್ಕಾರದ ಬಜೆಟ್ ಮೋಸ ಮಾಡಿದೆ. ಹೀಗಾಗಿ ಈ ಬಜೆಟ್ ರೈತರು ಮತ್ತು ಬಡವರ ವಿರೋಧಿ ಬಜೆಟ್‌ಯೆಂದು ಕರ್ನಾಟಕ ಪ್ರಾಂತ ರೈತ ಸಂಘ ಅಭಿಪ್ರಾಯ ಪಡುತ್ತದೆ.

ಇದೇ ಸಂದರ್ಭದಲ್ಲಿ ರೈತರು ಮತ್ತು ಬಡವರ ಮೇಲೆ ಅನೇಕ ರೀತಿಯ ದಾಳಿ ನಡೆಸಿರುವ ಕೇಂದ್ರ ಸರ್ಕಾರದ ಈ ಬಜೆಟ್, ದೇಶದ ಶೇರು ಮಾರುಕಟ್ಟೆಯಲ್ಲಿ ನೂರಾರು ಕೋಟಿ ರೂಗಳ ವ್ಯಾಪಾರ ಮಾಡಿ, ಲಾಭ ಗಳಿಸುವವರಿಗೆ ತೆರಿಗೆ ಕಡಿತ, ದೊಡ್ಡ ದೊಡ್ಡ ಬಂಡವಾಳಗಾರರಿಗೆ ಸಾವಿರಾರು ಕೋಟಿ ರೂ ತೆರಿಗೆ ವಿನಾಯ್ತಿಗಳನ್ನು ಘೋಷಣೆ ಮಾಡಿ, ತನ್ನ ನಿಜ ಸ್ವರೂಪವನ್ನು ಪ್ರದರ್ಶನ ಮಾಡಿದೆ. ಇದರಿಂದ ದೇಶದ ದುಡಿಯುವ ಜನರ ಹಾಗು ಕೆಲವೇ ಶ್ರೀಮಂತರ ನಡುವಿನ ಕಂದಕವನ್ನು ಮತ್ತಷ್ಟು ವಿಸ್ತರವಾಗಲಿದೆ.

ಇಂತಹ ರೈತರು, ಬಡವರ ವಿರೋಧಿ ಹಾಗು ಬಂಡವಾಳಗಾರರ ಪರವಾದ ಈ ಬಜೆಟ್‌ನ್ನು ವಿರೊಧಿಸಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (K.P.R.S) ರಾಜ್ಯ ಸಮಿತಿ ಕರೆ ನೀಡುತ್ತದೆ.

'ಜಾತಕ ಪಕ್ಷಿ'ಗೆ ಕಾದಿದೆ ಆಘಾತ ! ?

ಪುಟ 3ರಿಂದ......

ಮಂತ್ರಿಮಂಡಲದ ವಿಸ್ತರಣೆಯ ಬೆಣ್ಣೆ ಹತ್ತಾರು ಜನ ಓಲಾಡುವವರ ಮೂಗಿಗೆ ಹಚ್ಚಲಾಗಿದೆಯಲ್ಲ. ಅಂತೂ ಮತ್ತೊಂದು ಸುತ್ತಿನ ಬಂಡಾಯ ಬಿಜೆಪಿಯಲ್ಲಿ ನಿರೀಕ್ಷಿತ, ಇದು ನಿಲ್ಲದ ಕದನ.

* * * *

ಸಂತೋಷದ ಸುದ್ದಿಯ ಜಾತಕ ಪಕ್ಷಿಗೆ ಅಘಾತಕಾರಿ ಸುದ್ಧಿಯ ಸಿಡಿಲು ಬಡಿದಿದೆ ಈಗ ತಮ್ಮ ಅಧಿಕಾರಾವಧಿಯಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಲು ಯಡಿಯೂರಪ್ಪನವರ ಕುಟುಂಬದ ಸದಸ್ಯರುಳ್ಳ ಭಗತ್ ಹೋಮ್ಸ್ ಮತ್ತು ಧವಳಗಿರಿ ಪ್ರಾಪರ್ಟೀಸ್‌ಗೆ ಪ್ರವೀಣಚಂದ್ರ ಎಂಬುವವರಿಂದ 6 ಕೋಟಿ ರೂ.ಗಳ ಅಕ್ರಮ ಪ್ರತಿಫಲ ಪಡೆದ ಬಗ್ಗೆ ಕ್ರಮ ವಹಿಸಲು ಕೇಂದ್ರೀಯ ಉನ್ನತಾಧಿಕಾರ ಸಮಿತಿ (ಸಿಇಸಿ) ಸುಪ್ರೀಂಕೋರ್ಟ್‌ಗೆ ಶಿಫಾರಸ್ಸು ಮಾಡಿದೆ. ಜಿಂದಾಲ್ ಸ್ಟೀಲ್ಸ್‌ನ ವ್ಯವಹಾರದಲ್ಲಿ 10 ಕೋಟಿ ರೂಪಾಯಿ ಯಡಿಯೂರಪ್ಪನವರ ಮಕ್ಕಳುಳ್ಳ ಪ್ರೇರಣಾ ಟ್ರಸ್ಟ್‌ಗೆ ಹಣ ಪಡೆದ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವ ಸಂಭವವೂ ಇದೆ. ಹೀಗಾದಲ್ಲಿ ಇನ್ನು ಯಡಿಯೂರಪ್ಪಗೆ ಮುಖ್ಯಮಂತ್ರಿ ಪಟ್ಟ ಕನವರಿಕೆಯಾಗಬಹುದು ಎಂಬ ಆತಂಕ ಮನೆ ಮಾಡಿದೆ. ಅನಂತ–ಸದಾನಂದಗೌಡರ ಬಣಕ್ಕೆ ಇದು ಅಸ್ತ್ರ ಒದಗಿಸಿದೆ. ಆರೋಪಗಳಿಂದ ಮುಕ್ತವಾಗಿ ಬನ್ನಿ ಎಂದು ಹೈಕಮಾಂಡ್ ಹೇಳುತ್ತಿತ್ತಲ್ಲ. ಅಂದರೆ ಮುಂದೆ ಕದನ ವಿರಾಮ ಇಲ್ಲ. ಇರುವುದೆಲ್ಲಾ ಕದನ ಕಾಂಡ!.

ಹಗರಣಗಳನ್ನು ಬಯಲಿಗೆಳೆದ ಲೋಕಾಯುಕ್ತ ಸಂಸ್ಥೆಯನ್ನೇ ನಿಷ್ಕ್ರಿಯಗೊಳಿಸಿ, ತಮ್ಮ ಕೈಗೊಂಬೆಯಂತೆ ಕೆಲಸ ಮಾಡಿಸುತ್ತಾ, ಎಲ್ಲದಕ್ಕೂ 'ಬಿ' ರಿಪೋರ್ಟ್ ಹಾಕಿ ಕೇಸ್‌ಗಳಿಂದ ಖುಲಾಸೆ ಮಾಡುತ್ತಿರುವ ಬಿಜೆಪಿ ಸರ್ಕಾರಕ್ಕೆ ಸುಪ್ರೀಂಕೋರ್ಟ್‌ನ ನಿರೀಕ್ಷಿತ ತನಿಖಾ ತೀರ್ಪು ಕಪಾಳಮೋಕ್ಷವಾಗಲಿದೆ ಎಂಬ ನಿರೀಕ್ಷೆ ಜನರದ್ದು. ಅದು ಆಗಲಿದೆಯೇ ?

ಕವನ

ನೆಲದತ್ತ ಕಣ್ಣು ಹಾಯಿಸೋಣ

ಕನ್ನಡ ಧ್ವಜವನ್ನು
ಮುಗಿಲೆತ್ತರಕ್ಕೆ
ಹಾರಿಸುವ ಮುನ್ನ
ಒಮ್ಮೆ ನೆಲದತ್ತ
ಕಣ್ಣು ಹಾಯಿಸೋಣ
ಈ ನೆಲದ ನೋವಿಗೆ
ಒಮ್ಮೆ ಸ್ಪಂದಿಸೋಣ
'ಅಗೋ ಅಲ್ಲಿ ನೋಡಿ'
ಶಾಂತಿಯ ತೋಟದ
ಹೂ ಬನದಲ್ಲಿ
ಯಾರೋ ಬಿತ್ತಿದ್ದಾರೆ
ವಿಷ ಮುಳ್ಳುಗಳನ್ನು
ಬೀದಿಯಲ್ಲಿ
ಯಾರದೋ ನೆತ್ತರು ಹರಿಯುತ್ತಿದೆ.
ಫಲ ಕೊಡುವ
ಮರಗಳ ಟೊಂಗೆಗಳಲ್ಲಿ
ಮಣ್ಣಿನ ಮಗನ
ಹೆಣಗಳು.
ಜಾತಿ ಗದ್ದಲದ ಭೀತಿಯಲ್ಲಿ
ಕನ್ನಡಮ್ಮ ಹೌಹಾರಿ ನಿಂತಿದ್ದಾಳೆ
ಯಾರೋ ಹಚ್ಚಿದ
ದ್ವೇಷದ ಬೆಂಕಿಯಲ್ಲಿ
ಕನ್ನಡದ ಮನಸ್ಸುಗಳು
ಚಟಪಟ ಸಿಡಿಯುತ್ತಿವೆ.
ಕನ್ನಡಮ್ಮನಿಗೆ
ಪೀತಾಂಬರ ತೊಡಿಸುವ ಮುನ್ನ
ಹರಿದ ಸೀರೆ
ಕೆದರಿದ ತಲೆಯ
ಬಡ ಭುವನೇಶ್ವರಿಯ ಬಗ್ಗೆ
ಒಮ್ಮೆ ಯೋಚಿಸೋಣ
ನೆಲದತ್ತ ಒಮ್ಮೆ
ಕಣ್ಣು ಹಾಯಿಸೋಣ.

–ಹುಲಿಕಟ್ಟಿ ಚನ್ನಬಸಪ್ಪ

ನಾರಿ ದೇವತೆಯೆಂಬ ಭಾರತದಲ್ಲಿ

ಒಂದು ನಿಮಿಷಕ್ಕೊಂದು ನಾರಿಯರ ಮಾನ
ಹರಾಜು ಹಾಕುತಿದೆ ಈ ಪುರುಷ ಕೋಣ
ಎರಡು ನಿಮಿಷಕ್ಕೊಂದು ಮಾನಿನಿಯ ಹತ್ಯ
ದನ ಕಾಯಬೇಕೆಂಬ ನಮ್ಮ ಅಮಾತ್ಯ

– ವಿಡಂಬಾರಿ

ಮಂಗಳೂರಿನಲ್ಲಿ ವಿಶ್ವ ಜಲ ದಿನಾಚರಣೆ ಕುಡಿಯುವ ನೀರಿನ ಕೊರತೆ ನೀಗಿಸಲು ಆಗ್ರಹ

ಮಾರ್ಚ್ 22ರಂದು ವಿಶ್ವ ಜಲ ದಿನಾಚರಣೆಯನ್ನು ವಿಶ್ವ ಸಂಸ್ಥೆ ಘೋಷಿಸಿದ್ದು, ಕರ್ನಾಟಕ ರಾಜ್ಯಾದ್ಯಂತ ಸರ್ವರಿಗೂ ಶುದ್ಧ ಕುಡಿಯುವ ನೀರು ಒದಗಿಸಬೇಕೆಂದು ಆಗ್ರಹಿಸಿ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ಕೊಟ್ಟ ಮೇರೆಗೆ, ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಯಿತು.

ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು, ಕರಾವಳಿಯ ಮೂರು ಜಿಲ್ಲೆಗಳಲ್ಲಿ ಧಾರಾಳ ಮಳೆ ಬೀಳುತ್ತಿದ್ದರೂ, ಬೇಸಗೆಯಲ್ಲಿ ಕುಡಿಯುವ ನೀರಿಗೂ ಹಾಗೂ ಕೃಷಿಗೆ ಅಗತ್ಯವಾದ ನೀರಿಗೂ ಕೊರತೆ ಉಂಟಾಗುತ್ತದೆ. ಮಂಗಳೂರು ತಾಲೂಕಿನ ಕೊಣಾಜೆ, ಕಿನ್ಯಾ, ಅಂಬ್ಲಮೊಗರು, ಮುಡಿಪು ಈ ಮೊದಲಾದ ಉಳ್ಳಾಲ ಪ್ರದೇಶದ ಊರುಗಳಲ್ಲಿ ಕಡುಬೇಸಗೆಯಲ್ಲಿ ನೀರಿನ ಪರದಾಟ ತೀವ್ರವಾಗಿರುತ್ತದೆ. ಇಂಥ ಸಂದರ್ಭದಲ್ಲಿ ಕುಡಿಯುವ ನೀರಿನ ವಿಷಯದಲ್ಲಿ ಶಾಶ್ವತ ಪರಿಹಾರಗಳನ್ನು ಒದಗಿಸುವ ಬಗ್ಗೆ ಸರಕಾರ ಗಮನ ಹರಿಸಿಲ್ಲ. ದ.ಕ.ಜಿಲ್ಲೆಯಲ್ಲಿ ನೇತ್ರಾವತಿಯ ನೀರನ್ನು ಮಂಗಳೂರು ನಗರ, ಉಳ್ಳಾಲ ಅಲ್ಲದೆ ಕೈಗಾರಿಕಾ ಪ್ರದೇಶವಾದ ನವಮಂಗಳೂರು, ಬೈಕಂಪಾಡಿ ಹಾಗೂ ಇತರ ಆರ್ಥಿಕ ವಲಯಗಳಿಗೆ ಒದಗಿಸಬೇಕಾದ ಅಗತ್ಯ ತುರ್ತು ಇದ್ದು ಇದರಿಂದಾಗಿ ಸಾಮಾನ್ಯ ನಾಗರಿಕರಿಗೆ ಕುಡಿಯುವ ನೀರು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗುತ್ತದೆ ಎಂದು ವಿವರಿಸಿದರು.

ವಾರಾಹಿ, ಶರಾವತಿ, ಕಾಳಿ ನದಿಗಳ ವಿದ್ಯುತ್ ಯೋಜನೆಗಳಿಂದ ವ್ಯರ್ಥ ಹೊರ ಹೋಗುವ ನೀರನ್ನು ತ್ಯೈಲ್‌ರೇಸ್ ಯೋಜನೆಗಳಿಗಾಗಿ ರೂಪಿಸುವ ಯೋಜನೆಗಳನ್ನು ಸರಕಾರ ಹಮ್ಮಿಕೊಂಡಿಲ್ಲ. ಕರಾವಳಿಯ ಉಪನದಿ ಹಾಗೂ ತೋಡುಗಳಿಗೆ ವ್ಯಾಪಕವಾಗಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಿ ನೀರು ಸಂರಕ್ಷಣೆ ಮಾಡಬಹುದೆಂದು ತಜ್ಞರ ಹಾಗೂ ಅನುಭವಿಗಳ ಅಭಿಪ್ರಾಯವಿದ್ದರೂ, ಅಂಥ ಯೋಜನೆಗಳನ್ನು ಸರಕಾರ ಯೋಚಿಸುತ್ತಿಲ್ಲ. ಇಡೀ ರಾಜ್ಯದ ಕುಡಿಯುವ ನೀರಿನ ಯೋಜನೆಗಳಿಗೆ ಕೇವಲ 1,000 ಕೋಟಿ ರೂಪಾಯಿಗಳ ಅಲ್ಪವೊತ್ತದ ಮೊಬಲಗನ್ನು ಮಾತ್ರ ರಾಜ್ಯ ಬಜೆಟ್‌ನಲ್ಲಿ ನಿಗದಿಪಡಿಸಲಾಗಿದೆ. ಮಠಮಾನ್ಯಗಳಿಗೆ ವ್ಯರ್ಥ ನೀಡಲಾದ ಮೊಬಲಗನ್ನು ನಾಗರಿಕರ ಉಪಯೋಗಕ್ಕಾಗಿ ಬಳಸಬಹುದು ಎಂಬಷ್ಟು ವಿವೇಕವೂ ಸರಕಾರಕ್ಕಿಲ್ಲ ಎಂದು ಬಿ.ಮಾಧವ ಲೇವಡಿ ಮಾಡಿದರು.

ಹಿರಿಯ ಸಿಪಿಐ(ಎಂ) ಮುಖಂಡ ಕೆ.ಆರ್.ಶ್ರೀಯಾನ್ ಅವರೂ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ●

ಭಗತ್‌ಸಿಂಗ್ ಹುತಾತ್ಮ ದಿನ ಆಚರಣೆ

ಡಿವೈಎಫ್‌ಐ ಮಂಗಳೂರು ನಗರ ಸಮಿತಿ ವತಿಯಿಂದ ಮಾರ್ಚ್ 22 ರಂದು "ಜಾಗೃತ ಜ್ಯೋತಿ" ಕಾರ್ಯಕ್ರಮ ಮಂಗಳೂರು ನಗರ ಕೇಂದ್ರವಾದ ಹಂಪನಕಟ್ಟಾ ಪ್ರದೇಶದಲ್ಲಿ ನಡೆಯಿತು. ಡಿವೈಎಫ್‌ಐ ಧ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಜಿಲ್ಲಾಧಿಕಾರಿ ಕಚೇರಿ ಎದುರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಕೂಡಾ ಮಾತನಾಡಿದರು. ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಸ್ವಾಗತಿಸಿದರು. ನಗರ ಸಮಿತಿ ಸದಸ್ಯ ನವೀನ್ ಕೊಂಚಾಡಿ ಧನ್ಯವಾದವಿತ್ತರು. "ಜಾಗೃತ ಜ್ಯೋತಿ"ಯ ಮೊಂಬತ್ತಿ ಹಿಡಿದ ಡಿವೈಎಫ್‌ಐ ನೂರು ಮಂದಿ ಸದಸ್ಯರು ಮುಸ್ಸಂಜೆಯ ಹೊತ್ತು ಜಿಲ್ಲಾಧಿಕಾರಿ ಕಚೇರಿ, ಪುರಭವನ, ನೆಹರೂ ಮೈದಾನಕ್ಕೆ ಸುತ್ತುವರಿದು ಮತ್ತೆ ಜಿಲ್ಲಾಧಿಕಾರಿ ಕಚೇರಿಗೆ ವಾಪಾಸಾದರು.

ಮಾರ್ಚ್ 22 ರಂದು ಉರ್ವಸ್ಟೋರ್ ಡಿವೈಎಫ್‌ಐ ಘಟಕ ಆಚರಿಸಿದ ಭಗತ್‌ಸಿಂಗ್ ಹುತಾತ್ಮ ದಿನದಲ್ಲಿ 50 ಮಂದಿಯಷ್ಟು ಯುವಕರು ಭಾಗವಹಿಸಿದ್ದರು. ಡಿವೈಎಫ್‌ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಮುಖ್ಯ ಭಾಷಣಕಾರರಾಗಿದ್ದರು: ಘಟಕಾಧ್ಯಕ್ಷ ಎಂ.ಬಿ.ಪ್ರಶಾಂತ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು.

ಮಾರ್ಚ್ 25 ರಂದು ಕೊಂಚಾಡಿ ಘಟಕ ಆಚರಿಸಿದ ಕಾರ್ಯಕ್ರಮದಲ್ಲಿ 60 ಮಂದಿಯಷ್ಟು ಸ್ಥಳೀಯರು ಭಾಗವಹಿಸಿದ್ದರು. 'ಸಮುದಾಯ' ಸಂಘಟನೆಯ ವಾಸುದೇವ ಉಚ್ಚಿಲ, ಪ್ರಗತಿಪರ ಚಿಂತಕ ಕೃಷ್ಣಪ್ಪ ಕೊಂಚಾಡಿ, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಅತಿಥಿಗಳಾಗಿ ಮಾತನಾಡಿದರು. ಕ್ರಿಸ್ಟೋಫರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನವೀನ್ ಕೊಂಚಾಡಿ ಕಾರ್ಯಕ್ರಮ ನಿರೂಪಿಸಿದರು.

ಮಾರ್ಚ್ 23 ರಂದು ಪಂಜಿಮೊಗರು ಮತ್ತು ಬಜಾಲು ಡಿವೈಎಫ್‌ಐ ಘಟಕಗಳು ಬೆಳಗ್ಗೆ ಧ್ವಜಾರೋಹಣ ನಡೆಸಿ ಹುತಾತ್ಮ ಭಗತ್‌ಸಿಂಗ್ ದಿನವನ್ನು ಆಚರಣೆ ಮಾಡಿದವು.



ಪಂಜಿಮೊಗರು ಕೊಲೆ ತನಿಖೆ ಆಗ್ರಹಿಸಿ ಜಾಥಾ



ವರದಿ : ವಾ.ಉ.

ಮಂಗಳೂರು ನಗರ ವ್ಯಾಪ್ತಿಯ ಪಂಜಿಮೊಗರಿನಲ್ಲಿ ತಾಯಿ ಮಗುವಿನ ಅವಳಿ ಕೊಲೆ ನಡೆದು 9 ತಿಂಗಳಾದರೂ ಅಪರಾಧಿಗಳ ಪತ್ತೆ ನಡೆಸಲಾಗದ ಪೋಲೀಸ್ ಇಲಾಖೆಯ ವೈಫಲ್ಯವನ್ನು ವಿರೋಧಿಸಿ ಸ್ಥಳೀಯ ನಾಗರಿಕರು ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪಂಜಿಮೊಗರಿನಿಂದ ಪೋಲಿಸ್ ಕಮೀಷನರೇಟ್ ವರೆಗೆ 12 ಕಿ.ಮೀ. ನಡಿಗೆಯಲ್ಲಿ ಪ್ರತಿಭಟನಾ ಜಾಥಾ ನಡೆಸಿದರು.

ಕೊಲೆ ವಿಷಯ ಇನ್ನೂ ನಿಗೂಢವಾಗಿದ್ದು ಸ್ಥಳೀಯರು ಈಗಲೂ ಭಯಭೀತ ಸ್ಥಿತಿಯಲ್ಲಿದ್ದಾರೆ. ತಮಗೆ ಭರವಸೆಯ ಆಶಾಕಿರಣವಾಗಿರುವ ಡಿವೈಎಫ್‌ಐನ ನೇತೃತ್ವದಲ್ಲಿ ಈಗಾಗಲೇ 6 ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದ್ದಾರೆ. ಜನ ತಾಳ್ಮೆ ಮೀರಿದ್ದಾರೆ. 12 ಕಿ.ಮೀ. ಪ್ರತಿಭಟನಾ ಪಾದಯಾತ್ರೆಯಲ್ಲಿ ಮಹಿಳೆಯರನ್ನೊಳಗೊಂಡು 150ಕ್ಕೂ ಮೀರಿದ ನಾಗರೀಕರು ಮಂಗಳೂರು ನಗರದಾದ್ಯಂತ ನಡಿಗೆಯಲ್ಲಿ ಸಾಗಿ ಬಂದುದು ನೋಡುಗರಲ್ಲಿ ಕೌತುಕ ಮೂಡಿಸಿತು. ಬುರ್ಖಾಧಾರಿ ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಬೆಳಗ್ಗೆ 9.45ಕ್ಕೆ ಹೊರಟ ಪ್ರತಿಭಟನಾಕಾರರು ನಡುಬಿಸಿಲು 12 ಗಂಟೆಗೆ ಘೋಷಣೆಗಳೊಂದಿಗೆ ಕಮೀಷನರೇಟ್ ತಲುಪಿದರು.

ಹಾಡುಹಗಲೇ ಮನೆನುಗ್ಗಿ ನಡೆಸಿದ ಈ ಕೊಲೆ ಪ್ರಕರಣದ ತನಿಖೆಗಾಗಿ ವಿಶೇಷ ತಂಡ ರಚಿಸಿಬೇಕು. ಇಲ್ಲವೇ ತನಿಖೆಯನ್ನು ಸಿಐಡಿ ಅಥವಾ ಸಿಒಡಿಗೆ ಒಪ್ಪಿಸಬೇಕು. ವಾರದೊಳಗೆ ಅಪರಾಧಿಗಳನ್ನು ಪತ್ತೆ ಮಾಡದಿದ್ದರೆ, ಮುಂದಿನ ಹಂತದಲ್ಲಿ ನಾಗರಿಕರು ಧರಣಿ ಸತ್ಯಾಗ್ರಹ ಮಾಡಲಿರುವರು ಎಂಬುದಾಗಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಎಚ್ಚರಿಕೆ ನೀಡಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಮುಖಂಡರಾದ ಭಾರತಿ ಬೋಳಾರ್, ಡಿವೈಎಫ್‌ಐನ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಎಸ್‌ಎಫ್‌ಐನ ನಾಯಕ ಚರಣ್ ಮುಂತಾದವರು ಮಾತನಾಡಿದರು. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸಾಜಿದಾ, ಡಿವೈಎಫ್‌ಐ ಪಂಜಿಮೊಗರು ಘಟಕದ ಅಧ್ಯಕ್ಷ ಬಶೀರ್ ಅಹ್ಮದ್, ಅನಿಲ್ ಡಿಸೋಜ, ಸೌಮ್ಯ ಡಿಸೋಜ, ನೌಶಾದ್ ಬಾವಾ, ಖಲೀಲ್ ಅಹ್ಮದ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ★

ಕೃಷಿ ಬಜೆಟ್ ಹೆಸರಲ್ಲಿ ಸಂಘ ಪರಿವಾರದ ಅಂಗ ಸಂಸ್ಥೆಗಳಿಗೆ ಹಣದ ಹರಿವು–ಖಂಡನೆ

ಕೃಷಿ ಬಜೆಟ್ ಹೆಸರಿನಲ್ಲಿ ಸಂಘ ಪರಿವಾರದ ಅಂಗ ಸಂಸ್ಥೆಗಳಿಗೆ ಸರಕಾರದ ಹಣ ನೀಡಲಾಗಿದೆ ಎಂದು ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಟೀಕಿಸಿದರು.

ಯುವಜನ ಪರ ಬಜೆಟ್ ಮಂಡನೆಗೆ ಆಗ್ರಹಿಸಿ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿ ಕಚೇರಿ ಎದುರು ಮಾರ್ಚ್ 16 ರಂದು ಏರ್ಪಡಿಸಿದ್ದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಅವರು ಮಾತನಾಡಿದರು.

ರಾಜ್ಯ ಸರಕಾರದ ಬಜೆಟ್ ಮಂಡನೆಗೆ ಪೂರ್ವಭಾವಿಯಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಯುವಜನ ಪರ ಬಜೆಟ್ ಮಂಡನೆ ಆಗ್ರಹಿಸಿ ಡಿವೈಎಫ್‌ಐ ಹಮ್ಮಿಕೊಂಡಿದ್ದ ಪ್ರತಿಭಟನೆಗಳ ಭಾಗವಾಗಿ ಮಂಗಳೂರಿನಲ್ಲಿ ಈ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರತಿಭಟನಾ ಸಭೆಯಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ, ಜಿಲ್ಲಾ ಸಮಿತಿ ಮುಖಂಡರಾದ ಸಂತೋಷ್, ಇಮ್ತಿಯಾಜ್, ಮಹಾಬಲ ದೆಪ್ಪೆಲಿಮಾರ್ ಮೊದಲಾದವರು ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಣಕಾಸು ಕೊರತೆಯ ಹೊರೆಯನ್ನು ಇಳಿಸಲು ಶ್ರೀಮಂತರಿಗೆ ಕೊಡುವ ರಿಯಾಯ್ತಿಗಳನ್ನು ಬರ್ಖಾಸ್ತು ಮಾಡಬಾರದು, ಬಡವರಿಗೆಂದು ಇರುವ ಸಬ್ಸಿಡಿಗಳನ್ನು ಬರ್ಖಾಸ್ತು ಮಾಡಿಯೇ ಇಳಿಸಬೇಕು ಎಂದು ನವ-ಉದಾರವಾದ ನಿರ್ದೇಶಿಸುತ್ತದೆ. ಎಷ್ಟೆಂದರೂ ರಿಯಾಯ್ತಿಗಳು 'ಬೆಳವಣಿಗೆ'ಗೆ ನೀಡುವ 'ಉತ್ತೇಜಕ'ಗಳು ಹಾಗೂ ಸಬ್ಸಿಡಿಗಳು ಆರ್ಥಿಕ ವ್ಯವಸ್ಥೆಯ ಮೇಲಿನ 'ಹೊರೆ'ಗಳಲ್ಲವೇ? ಇದೀಗ 'ಬಡತನದ ತತ್ವಶಾಸ್ತ್ರ'. ಇದಕ್ಕೆ ಉತ್ತರವಾಗಿ ಮಾರ್ಕ್ಸ್ ಬರೆದ 'ತತ್ವಶಾಸ್ತ್ರದ ಬಡತನ' ಎಂಬ ಕೃತಿಯಲ್ಲಿ ಕೊನೆಗೆ ಕಾರ್ಮಿಕ ವರ್ಗದ ವಿಮೋಚನೆಯನ್ನು, ಆಮೂಲಕ ಎಲ್ಲ ಶೋಷಿತ ವರ್ಗಗಳ ವಿಮೋಚನೆಯನ್ನು ಸಾಧಿಸುವಲ್ಲಿ ಮಹತ್ವದ ಸಂಗತಿಯೆಂದರೆ "ಒಂದು ವರ್ಗವಾಗಿ ಕ್ರಾಂತಿಕಾರಿ ಅಂಶಗಳ ಸಂಘಟನೆ" ಎಂದಿದ್ದಾರೆ. ಇದು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಶೋಷಿತ ವರ್ಗಗಳ ರಾಜಕೀಯ ಶಕ್ತಿ- ಕಾರಕ ಅಂಶ; ಭಾರತದ ಮೂರ್ತ ಪರಿಸ್ಥಿತಿಗಳಲ್ಲಿ ಈ ಕಾರಕ ಅಂಶವನ್ನು ಬಲಪಡಿಸುವುದೇ ಮುಂಬರುವ ಸಿಪಿಐ(ಎಂ)ನ 20ನೇ ಮಹಾಧಿವೇಶನದ ಮುಂದಿರುವ ಅಜೆಂಡಾ.

ನವ-ಉದಾರವಾದ: ಬಡತನದ ತತ್ವಶಾಸ್ತ್ರ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮಾರ್ಚ್ 29, 2012ರ ಸಂಚಿಕೆಯ ಸಂಪಾದಕೀಯ

ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಮುಂದೊತ್ತುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕು-ದೆಸೆ ಶೋಷಣೆಯನ್ನು ತೀವ್ರಗೊಳಿಸುವ ಮೂಲಕ ಗರಿಷ್ಟ ಲಾಭ ಗಿಟ್ಟಿಸಲು ಪ್ರಯತ್ನಿಸುತ್ತದೆ, ಕೆಲವೊಮ್ಮೆ ಇದು ಕೊಳ್ಳೆ ಹೊಡೆಯುವ ಮಟ್ಟಕ್ಕೂ ಹೋಗುತ್ತದೆ- ಹೀಗೆ ಮಾಡುವಾಗ, ದೇಶದ ಒಳಗೂ, ಜಗತ್ತಿನ ಎಲ್ಲೆಡೆಯೂ ದುಡಿಯುವ ಜನಗಳ ವಿಶಾಲ ಜನಸಮೂಹದ ಮೇಲೆ ಅದು ಅಪಾರ ಸಂಕಟಗಳನ್ನು ಹೇರುತ್ತದೆ ಎಂದು ನಾವು ಈ ಅಂಕಣದಲ್ಲಿ ಹೇಳುತ್ತಾ ಬಂದಿದ್ದೇವೆ. ಜನಗಳ ನಿಜ ಜೀವನದ ಅನುಭವಗಳು ಪ್ರತಿದಿನ ಇದನ್ನು ದೃಢಪಡಿಸುತ್ತಿವೆ. ಬಡತನ ಉಲ್ಬಣಗೊಳ್ಳುತ್ತಿರುವುದು ಇದರ ನೇರ ಪರಿಣಾಮ.

ಭಾರತದಲ್ಲಿ ಬಡತನ ಎಷ್ಟಿದೆ ಎಂಬ ಬಗ್ಗೆ ಈಗ ನಡೆಯುತ್ತಿರುವ ಚರ್ಚೆ ಕೆಲವೊಮ್ಮೆ ಅತಿ-ಯಥಾರ್ಥತೆಯ ಸ್ವರೂಪವನ್ನು ಕೂಡ ಪಡೆಯುತ್ತಿದೆ. ಭಾರತದಲ್ಲಿ ಈಗ ಆರ್ಥಿಕ ಸುಧಾರಣೆಗಳಿಗೆ ಮಾರ್ಗದರ್ಶನ ನೀಡುವ ಇಂತಹ ಒಂದು 'ಬಡತನದ ತತ್ವಶಾಸ್ತ್ರ'ವಂತೂ ಖಂಡಿತಾ ಇದೆ ಎಂದು ಇದರಿಂದ ಮತ್ತೊಮ್ಮೆ ದೃಢಪಡುತ್ತದೆ.

ಮಿಥ್ಯೆ ಸೃಷ್ಟಿಸುವ ಕಸರತ್ತು

ನಮ್ಮ ದೇಶದ ಸಂಪನ್ಮೂಲಗಳ ಲೂಟಿ ಎರಡು ಮುಖ್ಯ ವಿಧಗಳಲ್ಲಿ ನಡೆಯುತ್ತಿದೆ. ಮೊದಲನೆಯದಾಗಿ, ಈ ಸುಧಾರಣೆಗಳು ಒಟ್ಟು ಆರ್ಥಿಕ ಅಸಮಾನತೆಗಳನ್ನು ಹೆಚ್ಚಿಸುತ್ತಲೇ ಇವೆ. 'ಹೊಳೆಯುವ ಭಾರತ'ದ ಹೊಳಪಿಗೂ 'ನರಳುವ ಭಾರತ'ದ ಶೋಷಣೆಯ ತೀವ್ರತೆಗೂ ನೇರ ಸಂಬಂಧವಿದ್ದಂತಿದೆ. ಎರಡನೆಯದಾಗಿ, ಇಂತಹ ಲೂಟಿ ಖಾಸಗಿ ಲಾಭಕ್ಕಾಗಿ ನಮ್ಮ ಸಂಪನ್ಮೂಲಗಳ ಬಹಿರಂಗ ಕೊಳ್ಳೆಯ ಮೂಲಕವೂ ನಡೆಯುತ್ತಿದೆ. ಮಹಾಹಗರಣಗಳ ಸರಮಾಲೆ ಇದನ್ನೇ ಬಿಂಬಿಸಿದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಇಂತಹ ಪ್ರಕ್ರಿಯೆಯನ್ನು ಕಾಯ್ದುಕೊಳ್ಳಬೇಕಾದರೆ ಅದಕ್ಕೆ ಪ್ರಜಾಸತ್ತಾತ್ಮಕ ಅನುಮೋದನೆ ಎಂಬುದರ ಸಮರ್ಥನೆ ಬೇಕಾಗುತ್ತದೆ. ದೇಶದಲ್ಲಿ ಬಡತನ ಆರ್ಥಿಕ ಸುಧಾರಣೆಗಳು ಸಾಗಿರುವ ದಿಕ್ಕಿನಿಂದಾಗಿ ಗಮನಾರ್ಹವಾಗಿ ಇಳಿದಿದೆ ಎಂಬ ಮಿಥ್ಯೆಗೆ ಜನಪ್ರಿಯತೆಯನ್ನು ಸೃಷ್ಟಿಸಿ ಜನಗಳನ್ನು ದಾರಿ ತಪ್ಪಿಸಿದರೆ ಇಂತಹ ಸಮರ್ಥನೆ ಲಭ್ಯವಾಗುತ್ತದೆ. ಇದು ಸುಳ್ಳುಗಳಿಂದ ತುಂಬಿದ ಅಂಕಿ-ಅಂಶಗಳನ್ನು ಉತ್ಪಾದಿಸುವ ಮೂಲಕ ಮಾತ್ರವೇ ಸಾಧ್ಯ.

ಇಂತಹ ಒಂದು ಕಸರತ್ತು ಮಾರ್ಚ್ 19ರಂದು ಮತ್ತೊಮ್ಮೆ ಕಂಡು ಬಂದಿದೆ. ಅಂದು ಯೋಜನಾ ಆಯೋಗ ಪ್ರಕಟಿಸಿದ 2009-10ರ ಬಡತನದ ಅಂದಾಜುಗಳ ಪ್ರಕಾರ 2004-05 ಮತ್ತು 2009-10ರ ನಡುವೆ ಬಡತನ ಒಟ್ಟಾರೆಯಾಗಿ 7.3ಶೇ.ದಷ್ಟು ಇಳಿದಿದೆ. ಇದು 2009-10ರಲ್ಲಿ ದೈನಂದಿನ ತಲಾಬಳಕೆ ನಗರಪ್ರದೇಶದಲ್ಲಿ ರೂ. 28 ಮತ್ತು ಗ್ರಾಮೀಣ ಪ್ರದೇಶದಲ್ಲಿ ರೂ.22 ಎಂಬುದನ್ನು ಆಧರಿಸಿ ಮಾಡಿರುವ ಲೆಕ್ಕಾಚಾರ.



ಇಂತಹ ಬೃಹತ್ ಮೋಸ ಬಹಳ ಸಮಯದಿಂದ ರೂಪುಗೊಳ್ಳುತಿತ್ತು. ಸುಪ್ರಿಂ ಕೋರ್ಟಿನಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯ ವಿಚಾರಣೆಯಲ್ಲಿ ಮೇ 2011ರಲ್ಲಿ ಹಾಜರಾಗಬೇಕಾಗಿ ಬಂದ ಯೋಜನಾ ಆಯೋಗ ಜನಗಳನ್ನು ಬಡತನದ ರೇಖೆಯ ಮೇಲಿಡಲು ದೈನಂದಿನ ಖರ್ಚಿಗೆ ನಗರಪ್ರದೇಶದಲ್ಲಿ 20ರೂ. ಮತ್ತು ಗ್ರಾಮೀಣ ಪ್ರದೇಶದಲ್ಲಿ 15ರೂ. ಸಾಕು ಎಂದು ಹೇಳಿತ್ತು. ಯೋಜನಾ ಆಯೋಗದ ಪ್ರಕಾರ ನಗರಗಳಲ್ಲಿ ಯಾರ ಬಳಿಯಾದರೂ ತಿಂಗಳ ಖರ್ಚಿಗೆ 578ರೂ. ಇದ್ದರೆ ಆತ ಬಡವನಲ್ಲ. ಈ ತಿಂಗಳ ಖರ್ಚಿನಲ್ಲಿ ಬಾಡಿಗೆ ಮತ್ತು ಓಡಾಟಕ್ಕೆ 31ರೂ., ಶಿಕ್ಷಣಕ್ಕೆ 18ರೂ., ಔಷಧಿಗೆ 25ರೂ. ಮತ್ತು ತರಕಾರಿಗೆ 36.50 ಸೇರಿರುತ್ತದೆ. ನಿಜಕ್ಕೂ ಎಷ್ಟು ಅಸಂಬದ್ಧ!

ಅಪಹಾಸ್ಯವೂ ಹೌದು, ಮೋಸಗಾರಿಕೆಯೂ ಹೌದು

ಇದಕ್ಕೆ ಭಾರೀ ಸಾರ್ವಜನಿಕ ಆಕ್ರೋಶ ವ್ಯಕ್ತವಾದಾಗ ಸರಕಾರ ಈ ಹಾಸ್ಯಾಸ್ಪದ ಲೆಕ್ಕಾಚಾರವನ್ನು ಪರಿಷ್ಕರಿಸಬೇಕಾಗಿ ಬಂತು. ಯೋಜನಾ ಆಯೋಗದ ಉಪಾಧ್ಯಕ್ಷರು ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸೆಪ್ಟಂಬರ್ 2011ರ ಅಂತ್ಯದ ವೇಳೆಗೆ ತಮ್ಮ ನಡುವೆಯೇ ಒಂದು ಸರಿಯಾದ 'ಅಂದಾಜಿ'ಗೆ ತಲುಪಿದ್ದಾರೆ ಎಂದು ಹೇಳಲಾಯಿತು. ಇದು ತುಸು ಹೆಚ್ಚಿನ ಮಟ್ಟದ ಆದಾಯವನ್ನು ಆಧರಿಸಿದ ಅಂದಾಜಂತೆ. ಇದರ ಪ್ರಕಾರ ಗ್ರಾಮೀಣ ಭಾರತದಲ್ಲಿ 26ರೂ. ಮತ್ತು ನಗರ ಭಾರತದಲ್ಲಿ 32ರೂ. ದಿನದ ಆದಾಯ ಹೊಂದಿರುವ ಯಾವುದೇ ವ್ಯಕ್ತಿ ನಮ್ಮೀ ದೇಶದಲ್ಲಿ ಬಡವನಲ್ಲ! ಇನ್ನು ಮುಂದೆ ಬಡತನದ ಅಂದಾಜುಗಳು ಒಂದು ಹೊಸ ವಿಧಾನವನ್ನು ಆಧರಿಸಿರುತ್ತವೆ ಎಂದು ಸರಕಾರ ಪ್ರಕಟಿಸಿತು. ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ವಸತಿ ಮತ್ತು ನಗರ ಬಡತನ ನಿವಾರಣಾ ಸಚಿವಾಲಯ ಸೇರಿಕೊಂಡು ಬಡತನದ ರೇಖೆಯ(ಬಿಪಿಎಲ್) ಕೆಳಗಿರುವ ಜನರ ಗಣತಿ ಮಾಡುವುದಾಗಿ ಹೇಳಲಾಯಿತು.

ವರದಿಗಳ ಪ್ರಕಾರ, ಕೇಂದ್ರ ಸಂಪುಟ ಮಂಜೂರಾತಿ ನೀಡಿರುವ ವಿಧಾನದಲ್ಲಿ ಐದು ದುಡಿಯುವ ಸದಸ್ಯರಿರುವ ಒಂದು ಕುಟುಂಬದ ವಾರ್ಷಿಕ ಆದಾಯ 27,000ರೂ.ಗಿಂತ ಹೆಚ್ಚಿದ್ದರೆ ಅದು ತಂತಾನೇ ಬಿಪಿಎಲ್ ಪಟ್ಟಿಯಿಂದ ಹೊರಗೆ ಹೋಗುತ್ತದೆ. ಬಡವರು ಅಲ್ಲ ಎಂದು ಪರಿಗಣಿಸಲು ತಲಾ ತಿಂಗಳ ಆದಾಯ 447ರೂ.ಗಳಷ್ಟು ಇದ್ದರೆ ಸಾಕು ಎಂಬ ಆಧಾರದಲ್ಲಿ ಮಾಡಿರುವ ಈ ಲೆಕ್ಕಾಚಾರ ಯೋಜನಾ ಆಯೋಗದ ಕನಿಷ್ಟ ಮಟ್ಟದ ಪ್ರತಿಬಿಂಬವಷ್ಟೇ ಅಲ್ಲ. ವಾಸ್ತವವಾಗಿ ಅದಕ್ಕಿಂತಲೂ ಕೆಳ ಮಟ್ಟದ್ದು.

ಈಗ ಯೋಜನಾ ಆಯೋಗ ಇಂತಹ ಹಾಸ್ಯಾಸ್ಪದ ಮಟ್ಟವನ್ನು ಇನ್ನಷ್ಟು ಕೆಳಗಿಳಿಸಿದೆ. ಈ ಕಪಟ ಕಸರತ್ತು ಒಂದು ಅಪಹಾಸ್ಯವೂ ಹೌದು, ಮೋಸಗಾರಿಕೆಯೂ ಹೌದು. ಒಬ್ಬ ವ್ಯಕ್ತಿ ಬದುಕುಳಿಯಲು ಪ್ರತಿದಿನ ಕನಿಷ್ಟ 2400 ಕ್ಯಾಲರಿ ಆಹಾರ ಬೇಕು ಎಂದು ಯೋಜನಾ ಆಯೋಗವೇ ಹೇಳುತ್ತದೆ. 2010ರಲ್ಲಿ ಇಷ್ಟು ಆಹಾರಕ್ಕೆ 44ರೂ.ಖರ್ಚಾಗುತ್ತಿತ್ತು. ಇಂದು ಇದು ಇನ್ನೂ ಹೆಚ್ಚು. ಈ ಜಿಪುಣ ಸರಕಾರ ಪ್ರಕಟಿಸಿರುವ ಇತ್ತೀಚಿನ ಅಂಕಿ-ಅಂಶದ ದುಪ್ಪಟ್ಟಾದರೂ ಅಗುತ್ತದೆ.

ಯೋಜನಾ ಆಯೋಗ, ತನ್ನ ತರ್ಕದ ಪ್ರಕಾರ ಬಡತನದ ಅನುಪಾತ 2004-05ರಲ್ಲಿ 37.2ಶೇ. ಇದ್ದದ್ದು 2009-10ರಲ್ಲಿ 29.8ಶೇ.ಕ್ಕೆ ಇಳಿದಿದೆ ಎಂದು ಪರಿಗಣಿಸಿದೆ. ರಾಷ್ಟ್ರೀಯ ಸಲಹಾ ಮಂಡಳಿ ಸೂಚಿಸಿರುವ ಅನುಪಾತ 45ಶೇ. ಈ ಎರಡೂ ಅಂದಾಜುಗಳು ದಿವಂಗತ ಅರ್ಜುನ್ ಸೆನ್‌ಗುಪ್ತ ಮಾಡಿರುವ ಅಂದಾಜಿಗಿಂತ ಎಷ್ಟೋ ಕೆಳಗಿವೆ. ಅವರ ಪ್ರಕಾರ ಸದ್ಯ ನಮ್ಮ ಜನಸಂಖ್ಯೆಯ 77ಶೇ. ಮಂದಿ ದಿನಕ್ಕೆ 20ರೂ.ಗಿಂತ ಕಡಿಮೆ ಆದಾಯದ ಮೇಲೆ ಬದುಕಿದ್ದಾರೆ. ಇದು ಸುಮಾರು ಐದು ವರ್ಷಗಳ ಹಿಂದಿದ್ದ ವಾಸ್ತವ ಪರಿಸ್ಥಿತಿಗಳನ್ನು ಆಧರಿಸಿತ್ತು. ಅಂದಿನಿಂದ ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳಲ್ಲಿ ನಿರಂತರವಾಗಿ ಆಗಿರುವ ಏರಿಕೆಗಳಿಂದಾಗಿ ಪರಿಸ್ಥಿತಿ ಖಂಡಿತವಾಗಿಯೂ ಇನ್ನಷ್ಟು ಹದಗೆಟ್ಟಿದೆ.

ಏಕೀ ಮೋಸದ ಲೆಕ್ಕಾಚಾರ?

ಅಸಮಾನತೆಗಳು ಹೆಚ್ಚುತ್ತಿವೆಯಷ್ಟೇ ಅಲ್ಲ, ಜೀವನಾಧಾರದ ಪರಿಸ್ಥಿತಿಗಳು ವಾಸ್ತವವಾಗಿ ಹದಗೆಟ್ಟಿರುವುದು ಬೇಸರದ ಸಂಗತಿ. ಉತ್ಸಾ ಪಟ್ನಾಯಕ್ ಅವರ ಮಹಾಕೃತಿ "ದಿ ರಿಪಬ್ಲಿಕ್ ಆಫ್ ಹಂಗರ್"(ಹಸಿವಿನ ಗಣರಾಜ್ಯ) ನಮ್ಮ ಜನತೆಯ ಈ ದುರದೃಷ್ಟಕರ ವಾಸ್ತವತೆಯ ವಿವರಗಳನ್ನು ಕೊಡುತ್ತದೆ. ಪಿ.ಸಾಯಿನಾಥ್ ಅವರ ಇತ್ತೀಚಿನ ಅಧ್ಯಯನ (ದಿ ಹಿಂದೂ, ಮಾರ್ಚ್ 25, 2012) 1972ರಿಂದ 1991ರ ನಡುವೆ ತಲಾ ಧಾನ್ಯಗಳು ಮತ್ತು ಬೇಳೆಕಾಳುಗಳ ದೈನಂದಿನ ಸರಾಸರಿ ಲಭ್ಯತೆ 434 ಗ್ರಾಂಗಳಿಂದ 480 ಗ್ರಾಂ ಗಳಿಗೇರಿತು. 1992ರಿಂದ 2010ರ ನಡುವೆ ಇದು 440 ಗ್ರಾಂಗಿಳಿಯಿತು. ಇದಕ್ಕೆ ಕಾರಣ ಜನಸಂಖ್ಯೆಯಲ್ಲಿ ಹೆಚ್ಚಳ ಎಂಬ ತರ್ಕವನ್ನೂ ಕೊಡುವಂತಿಲ್ಲ. ಏಕೆಂದರೆ, 1981ರಿಂದ 1991ರ ನಡುವೆ ಜನಸಂಖ್ಯೆಯ ಹೆಚ್ಚಳದ ದರ 2.16ಶೇ. ಮತ್ತು ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳದ ದರ 3.13ಶೇ.

ಪುಟ 14ಕ್ಕೆ ......

ಗೀತೋಪದೇಶ

ವೋಟನ್ನು ನೀಡುವುದು ದುಡಿಯುವುದು ಮಾತ್ರ
ಈ ನಮ್ಮಭಾರತದಿ ಬಡಜನರ ಪಾತ್ರ
ಕರಿ ಕೃಷ್ಣ, ನಾಚ್ಣೆಯೇ ಹೀಗುಂಟು ನೋಡು
ಫಲದಾಸೆ ಕೈ ಬಿಟ್ಟು ದುಡಿತವನು ಮಾಡು
- ವಿಡಂಬಾರಿ

ಪ್ರಸಕ್ತ ಪರಿಸ್ಥಿತಿಯಲ್ಲಿ ಮುನ್ನಡೆಗೆ ಸದವಕಾಶ

ಭಾರತದ ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ದುಡಿಯುವ ಜನರ ಚಳುವಳಿಯನ್ನು, ದೇಶದ ಪ್ರಜಾಸತ್ತಾತ್ಮಕ ಆಂದೋಲನವನ್ನು ಮುಂದಕ್ಕೆ ಕೊಂಡೊಯ್ಯುವ ಮಹತ್ವದ ಅವಕಾಶ ಒದಗಿ ಬಂದಿದೆ ಎಂದಿದ್ದಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು. ಅದು ಹೇಗೆ ಸಾಧ್ಯ ? ಈ ವಿಶ್ಲೇಷಣೆಗೆ ಆಧಾರವೇನು ? ಓದಿ ಲೇಖನ ನಿಮಗಾಗಿ.

ಪ್ರಕಾಶ್ ಕಾರಟ್

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಮೇಲೆ ನೇರ ಪರಿಣಾಮ ಬೀರುತ್ತದೆ. ಈ ಫಲಿತಾಂಶ ರಾಜಕೀಯ ಪರಿಸ್ಥಿತಿಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ವಿಭಿನ್ನ ರೀತಿಯ ವಿಶ್ಲೇಷಣೆ ಹಾಗೂ ವಿಚಾರ ವಿಮರ್ಶೆಗಳು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ, ಸಿಪಿಐ(ಎಂ) ಈ ಫಲಿತಾಂಶವನ್ನು ಯಾವ ರೀತಿ ವಿಶ್ಲೇಷಿಸುತ್ತಿದೆ ಎಂಬುದರ ಕುರಿತು ನಾವು ವಿಚಾರ ವಿಮರ್ಶೆ ಮಾಡಿಕೊಳ್ಳೋಣ.

ಈ ವಿಧಾನಸಭಾ ಚುನಾವಣೆ ಫಲಿತಾಂಶ ಕಾಂಗ್ರೆಸ್ ಮತ್ತು ಬಿಜೆಪಿಗೆ ಎರಡಕ್ಕೂ ದೊಡ್ಡ ಹಿನ್ನಡೆಯೇ ಸರಿ. ಈ ಪೈಕಿ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶ ಅತಿ ಮಹತ್ವದ್ದು. ರಾಜ್ಯದ 403 ಸಂಖ್ಯಾಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ ಕೇವಲ 28 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರೆ, ಬಿಜೆಪಿ 47ರಲ್ಲಿ ಜಯ ಗಳಿಸಿದೆ. ಗೋವಾದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡರೆ, ಉತ್ತರಾಖಂಡ್‌ನಲ್ಲಿ ಬಿಜೆಪಿ ಸರ್ಕಾರವನ್ನು ಜನ ತಿರಸ್ಕರಿಸಿದ್ದಾರೆ. ಪಂಜಾಬ್‌ನಲ್ಲಿ ಅಕಾಲಿ-ಬಿಜೆಪಿ ಸರ್ಕಾರದ ವಿರುದ್ಧ ಪ್ರಬಲ ಜನಾಕ್ರೋಶ ಇದ್ದಾಗ್ಯೂ ಕಾಂಗ್ರೆಸ್ ಜನರ ಮನಗೆಲ್ಲಲು ವಿಫಲವಾಗಿದೆ. ಮಣಿಪುರದಲ್ಲಿ ಅಲ್ಲಿನ ಪರಿಸ್ಥಿತಿಯ ಲಾಭ ಪಡೆದುಕೊಂಡು ಕಾಂಗ್ರೆಸ್ ಜಯ ಗಳಿಸಿದ್ದರೂ ರಾಷ್ಟ್ರೀಯ ರಾಜಕಾರಣದಲ್ಲಿ ಅದು ಅಷ್ಟೊಂದು ಮಹತ್ವ ಪಡೆದಿಲ್ಲ.

ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷ ನಿರ್ಣಾಯಕ ಯಶಸ್ಸು ಪಡೆದಿದೆ. ಇದು ಕೇಂದ್ರ ಸರ್ಕಾರದ ಮೈತ್ರಿಕೂಟದಲ್ಲಿ ಸಮತೋಲನ ಹಾಗೂ ತನ್ನ ರಾಜಕೀಯ ಬಲವನ್ನು ಮತ್ತಷ್ಟು ಗಟ್ಟಿಗೊಳಿಸುವ ಕಾಂಗ್ರೆಸ್‌ನ ಆಶಾವಾದಕ್ಕೆ ಇಂಬು ನೀಡಿದೆ. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ, ಕಾಂಗ್ರೆಸ್ ಕೇವಲ ಒಂದು ಲೋಕಸಭಾ ಕ್ಷೇತ್ರದಲ್ಲಿ ಗೆಲುವನ್ನು ಸಾಧಿಸಲು ಶಕ್ತವಾಗಿದೆ. ಇದರ ಜೊತೆಗೆ ತನ್ನ ಸಾಂಪ್ರದಾಯಿಕ ಕ್ಷೇತ್ರವಾದ ಗಾಂಧಿ ಕುಟುಂಬದ ನೆಲೆ ಎನ್ನಲಾದ ಕ್ಷೇತ್ರಗಳಲ್ಲಿ ದಯನೀಯ ಸೋಲು ಕಂಡಿರುವುದು ನಿಜಕ್ಕೂ ಆ ಪಕ್ಷ ಆತಂಕಗೊಳ್ಳುವಂತೆ ಮಾಡಿದೆ.

ಯುಪಿಎ ದುರ್ಬಲಗೊಂಡಿದೆ

ಈ ಫಲಿತಾಂಶದ ತಕ್ಷಣದ ಪರಿಣಾಮ ಎಂದರೆ ಯುಪಿಎ ಸರ್ಕಾರ ತನ್ನ ರಾಜಕೀಯ ಸಾಮರ್ಥ್ಯದಲ್ಲಿ ದೊಡ್ಡ ಇಳಿಕೆ ಕಂಡಿದೆ. ಸರ್ಕಾರವನ್ನು ಮುನ್ನಡೆಸುವಲ್ಲಿ ಕಾಂಗ್ರೆಸ್‌ಗೆ ಇದು ಮತ್ತಷ್ಟು ದೊಡ್ಡ ಸಮಸ್ಯೆಗಳನ್ನು ತಂದೊಡ್ಡಿದೆ.

ಚುನಾವಣೆಗೂ ಮುನ್ನ, ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಘರ್ಷಣೆ ಬಹಿರಂಗಗೊಂಡಿತ್ತು. ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಯುಪಿಎ ಸರ್ಕಾರ ತೆಗೆದುಕೊಂಡ ನಿಲುವಿಗೆ ವಿರುದ್ಧವಾದ ನಿಲುವನ್ನು ತೃಣಮೂಲ ಕಾಂಗ್ರೆಸ್ ತೆಗೆದುಕೊಂಡಿತ್ತು. ಈ ವೈರುಧ್ಯಗಳು ಚುನಾವಣೆಗಳ ಬಳಿಕ ಮತ್ತಷ್ಟು ತೀವ್ರಗೊಂಡಿವೆ.

ಬಜೆಟ್ ಮಂಡನೆ ನಡೆಸಿದ ರೈಲ್ವೇ ಸಚಿವ ದಿನೇಶ್ ತ್ರಿವೇದಿ ಬಳಿಕ ಮಮತಾ ಬ್ಯಾನರ್ಜಿ ಪಟ್ಟಿಗೆ ಬಲಿಯಾಗಿ ರಾಜೀನಾಮೆ ನೀಡಿದ ಪ್ರಹಸನ ಯುಪಿಎ ಸರ್ಕಾರದೊಳಗಿನ ಪರಿಸ್ಥಿತಿಗೆ ಕೈಗನ್ನಡಿಯಾಗಿದೆ. ಸರ್ಕಾರದ ಒಳಗಿನ ತಾಕಲಾಟಗಳು, ಘರ್ಷಣೆಗಳು ಈ ಘಟನೆಯಿಂದ ಮತ್ತಷ್ಟು ಆಳಕ್ಕಿಳಿದಿವೆ. ಉಭಯ ಸದನಗಳ ಕಲಾಪದ ವೇಳೆ ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಮರ್ಪಿಸುವ ಗೊತ್ತುವಳಿಗೆ ಅನುಮೋದನೆ ಕೊಡುವ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸ್‌ನ ಸಂಸದರು ಮತ್ತದರ ಸಚಿವರು ಸದನದಿಂದ ಹೊರನಡೆದದ್ದೂ ಮತ್ತೊಂದು ಗಮನಾರ್ಹ ಅಂಶ. ಇದೆಲ್ಲ ಮಮತಾ ಬ್ಯಾನರ್ಜಿ ಮತ್ತು ಅವರ ಪಕ್ಷದ ದ್ವಂದ್ವ ನಿಲುವು ಹಾಗೂ ಧೂರ್ತತನಕ್ಕೆ ಒಂದು ಉತ್ತಮ ಉದಾಹರಣೆಯಾಯಿತು. ಪಶ್ಚಿಮ ಬಂಗಾಳಕ್ಕೆ ಕೇಂದ್ರದಿಂದ ವಿಶೇಷ ಆರ್ಥಿಕ ನೆರವು ನೀಡಬೇಕೆಂಬ ಆಕೆಯ ಬೇಡಿಕೆ ಮೇಲೆ ಮತ್ತಷ್ಟು ದೊಡ್ಡ ಪ್ರಮಾಣದಲ್ಲಿ ನಾಟಕ ನಡೆಯಿತು.

ಯುಪಿಎ ಸರ್ಕಾರದ ಭವಿಷ್ಯ ಮತ್ತಷ್ಟು ಮಂಕಾಗಿದೆ. ಈಗ ಇದು ಕೇವಲ ತನ್ನ ಸರ್ಕಾರದ ಅಸ್ತಿತ್ವಕ್ಕಾಗಿ ಹೋರಾಟ ನಡೆಸಬೇಕಾಗಿ ಬಂದಿದೆ. ರಾಷ್ಟ್ರಪತಿಯವರ ಭಾಷಣದ ಸಂದರ್ಭದಲ್ಲಿ ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿ ವಹಿಸಿದ ಪಾತ್ರದಿಂದ ಗೊತ್ತುವಳಿ ಅಂಗೀಕಾರವಾಗಿ ಸಂಭಾವ್ಯ ಮುಖಭಂಗ ತಪ್ಪಿದಂತಾಯಿತು. ಈಗ ಇದೇ ಮಾದರಿಯಾಗಿ ಹೋಗಿದೆ. ಪ್ರತೀ ಬಾರಿಯೂ ಪ್ರಮುಖ ಕಾಯ್ದೆ, ಗೊತ್ತುವಳಿಯ ಅನುಮೋದನೆಗೆ ಸರ್ಕಾರ ಇತರರೊಂದಿಗೆ ಚೌಕಾಸಿ ಮಾಡಬೇಕಾಗಿ ಬಂದಿದೆ.



ಕಾಂಗ್ರೆಸ್-ಬಿಜೆಪಿಗೆ ಹಿನ್ನಡೆ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಎರಡು ಪ್ರಮುಖ ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ಸೋಲು ನಿಜಕ್ಕೂ ಸಂತೃಪ್ತಿಗೆ ಕಾರಣವಾಗಿದೆ. ಈ ಸೋಲಿನಿಂದಾಗಿ ನವ ಉದಾರೀಕರಣದ ಅಜೆಂಡಾ ಹಾಗೂ ನೀತಿಗಳನ್ನು ಜಾರಿಗೆ ತರುವುದು ಮತ್ತಷ್ಟು ಕಷ್ಟಕರವಾಗುತ್ತದೆ.

ನವ ಉದಾರೀಕರಣದ ನೀತಿಗಳು ದೊಡ್ಡ ಪ್ರಮಾಣದಲ್ಲಿ ಅಸಮಾಧಾನ ಮತ್ತು ಪ್ರತಿರೋಧವನ್ನು ಪಡೆಯುತ್ತಿದೆ ಎಂಬುದನ್ನು ಕಂಡುಕೊಳ್ಳಲು ಮತ್ತು ಈ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಲು ಕಾಂಗ್ರೆಸ್ ನಾಯಕತ್ವ ಅಸಮರ್ಥವಾಗಿದೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪರ ಪ್ರಚಾರ ನಡೆಸಿದ ರಾಹುಲ್ ಗಾಂಧಿ ಚಿಲ್ಲರೆ ವ್ಯಾಪಾರವನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತವಾಗಿಡುವ ಪರವಾದ ನಿಲುವನ್ನು ತಳೆದರು. ಇದು ಕಾಂಗ್ರೆಸ್ ನಾಯಕತ್ವ ವಾಸ್ತವ ಪರಿಸ್ಥಿತಿಗೆ ಎಷ್ಟು ವಿರುದ್ಧವಾಗಿದೆ ಎಂಬುದನ್ನು ತೋರಿಸಿತು.

ಪಂಜಾಬ್‌ನಲ್ಲಿ ಅಕಾಲಿದಳ- ಬಿಜೆಪಿ ಸರ್ಕಾರದ ವಿರುದ್ಧದ ಜನಾಕ್ರೋಶ ಹಾಗೂ ಉತ್ತರಾಖಂಡ್‌ನ ಬಿಜೆಪಿ ಸರ್ಕಾರದ ವಿರುದ್ಧ ವಿರೋಧವನ್ನು ಕಾಂಗ್ರೆಸ್ ಮತವಾಗಿ ಪರಿವರ್ತಿಸಲು ವಿಫಲವಾಯಿತು. ಏಕೆಂದರೆ, ಬೆಲೆ ಏರಿಕೆ ಮತ್ತು ಭ್ರಷ್ಟಾಚಾರದಿಂದ ಕೂಡಿದ ಯುಪಿಎ ಸರ್ಕಾರದ ವರ್ಚಸ್ಸು ಜನರು ಕಾಂಗ್ರೆಸ್ ಮೇಲಿನ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿತು.

ಬಿಜೆಪಿ ಇದಕ್ಕಿಂತ ಭಿನ್ನವಾಗೇನಿಲ್ಲ. ಬಲಪಂಥೀಯ ಆರ್ಥಿಕ ನೀತಿಗಳು ಹಾಗೂ ಭ್ರಷ್ಟಾಚಾರದಿಂದ ತುಂಬಿರುವ ಅದು ಈ ಎರಡು ವಿಚಾರಗಳಲ್ಲಿ ಕಾಂಗ್ರೆಸ್ ಜೊತೆ ಪೈಪೋಟಿಗೆ ಇಳಿದಿದೆ. ಭ್ರಷ್ಟಾಚಾರದ ಆರೋಪ ಹೊತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಧಿಕಾರ ದಾಹದಿಂದ ಬಿಜೆಪಿ ಕರ್ನಾಟಕದಲ್ಲಿ ಅದೇ ಸಮಸ್ಯೆಯನ್ನು ಎದುರಿಸುತ್ತಿದೆ.

ಹೋರಾಟಗಳು ಇನ್ನಷ್ಟು ತೀವ್ರಗೊಳ್ಳಬೇಕು

ನವ ಉದಾರೀಕರಣದ ನೀತಿಗಳ ವಿರುದ್ಧ ಹೋರಾಟವನ್ನು ಇನ್ನಷ್ಟು ಪ್ರಬಲವಾಗಿ ಮುಂದುವರಿಸಲು ಇದು ಉತ್ತಮ ಅವಕಾಶ. ದೇಶದಲ್ಲಿ ಬ್ಯಾಂಕಿಂಗ್ ಕ್ಷೇತ್ರವನ್ನು, ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಡುವ ಕಾಯ್ದೆಗೆ ಮುಂದಾಗಿದೆ. ಅದರ ಜೊತೆಗೆ ಪಿಂಚಣಿ ಕಾಯ್ದೆ, ವಿದೇಶಿ ಶಿಕ್ಷಣ ಸಂಸ್ಥೆಗೆ ಅವಕಾಶ ಮಾಡಿಕೊಡುವ ಕಾಯ್ದೆಗಳೂ ಸಾಲುಗಟ್ಟಿ ನಿಂತಿವೆ. ಇವೆಲ್ಲಕ್ಕೂ ಪ್ರತಿರೋಧ ತೋರಿಸಿ ಜನವಿರೋಧಿ ಕಾಯಿದೆಗಳನ್ನು ತಿರಸ್ಕರಿಸಬೇಕಾಗಿದೆ.

ಆಹಾರ ಭದ್ರತೆ ಕಾಯಿದೆ, ಭೂಸ್ವಾಧೀನ ಮತ್ತು ಪುನರ್‌ವಸತಿ ಕಾಯಿದೆ ಹಾಗೂ ಲೋಕಪಾಲ ಮಸೂದೆಗಳನ್ನು ಮತ್ತಷ್ಟು ಪರಿಣಾಮಕಾರಿಯನ್ನಾಗಿ ಮಾಡಲು ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಒತ್ತಡ ಹಾಕಬೇಕಾಗಿದೆ.

ಸಿಪಿಐ(ಎಂ) ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿ ವಿಶಾಲವಾದ ಜನಾಂದೋಲವನ್ನು ನಡೆಸಬೇಕಾಗಿದೆ. ಕೇಂದ್ರ ಬಜೆಟ್‌ನಲ್ಲಿ ರಸಗೊಬ್ಬರಗಳಿಗೆ ಸಬ್ಸಿಡಿ ಕಡಿತಗೊಳಿಸಿರುವುದರ ವಿರುದ್ಧ ಧ್ವನಿ

ಪುಟ 15ಕ್ಕೆ.........

ನ್ಯಾಯಕ್ಕಾಗಿ

ಇಲ್ಲಿಂದ ಆ ದೆಹಲಿವರೆಗೂ ಕೇಳು
ಕೇಳುವವ ಯಾರಿಲ್ಲ ನೊಂದವರ ಗೋಳು
ಹಸಿದವರು ದೊರಕಿಸಲು ಒಂದು ಹಿಡಿ ಅನ್ನ
ಸಿಡಿದೆದ್ದು ಗುಡುಗದಿರೆ ದೊರಕಮೋ ಅಣ್ಣ

– ವಿಡಂಬಾರಿ



ಸ್ವಯಂ ಸೇವಕರು ಮೆಡಿಕಲ್ ಕಾಲೇಜ್ ಹತ್ತಿರ ಸ್ವಚ್ಛತೆಯಲ್ಲಿ ತೊಡಗಿರುವುದು

ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯದ ಪ್ರಸಕ್ತ ಘಟ್ಟದಲ್ಲಿ ಕೋಝಿಕ್ಕೋಡಿನಲ್ಲಿ ಸಿಪಿಐ(ಎಂ)ನ 20ನೇ ಮಹಾಧಿವೇಶನ ಅಂಗೀಕರಿಸುವ ಮೂರು ದಸ್ತಾವೇಜುಗಳು ಸಮಸ್ತ ಜನತೆಗಾಗಿ ಜಗತ್ತನ್ನು ಬದಲಾಯಿಸಿ ಉತ್ತಮಗೊಳಿಸುವ ಹೋರಾಟಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿರುವ ಪಕ್ಷದ ಸಮಸ್ತ ಸದಸ್ಯರ ಕೈಗಳಲ್ಲಿ ಮಹತ್ವದ ಉಪಕರಣಗಳಾಗುತ್ತವೆ.

ವಿ.ಬಿ.ಕೆ.ನಾಯರ್

ಕೋಝಿಕ್ಕೋಡ್ ಮಹಾಧಿವೇಶನದತ್ತ

ಕೋಝಿಕ್ಕೋಡ್ ನಲ್ಲಿ ಎಪ್ರಿಲ್ 3ರಿಂದ 9ರ ವರೆಗೆ ನಡೆಯಲಿರುವ ಸಿಪಿಐ(ಎಂ)ನ 20ನೇ ಮಹಾಧಿವೇಶನ ಹಲವು ರೀತಿಗಳಲ್ಲಿ ಚಾರಿತ್ರಿಕವಾಗಲಿದೆ. ಕೇರಳದಲ್ಲಿ ಸಿಪಿಐ(ಎಂ) ನ ಮಹಾಧಿವೇಶನ ನಡೆಯುತ್ತಿರುವುದು ಇದು ಮೂರನೇ ಬಾರಿಯಾದರೂ ಕೋಝಿಕ್ಕೋಡಿನಲ್ಲಿ ನಡೆಯುತ್ತಿರುವುದು ಇದೇ ಮೊದಲ ಬಾರಿ; 1968ರಲ್ಲಿ ಎಂಟನೇ ಮಹಾಧಿವೇಶನ ಕೊಚ್ಚಿಯಲ್ಲಿ ನಡೆದಿತ್ತು ಮತ್ತು 1988ರಲ್ಲಿ ಹದಿಮೂರನೇ ಮಹಾಧಿವೇಶನ ತಿರುವನಂತಪುರದಲ್ಲಿ ನಡೆದಿತ್ತು. ಅವಿಭಜಿತ ಸಿಪಿಐನ 4ನೇ ಮಹಾಧಿವೇಶನ 1954ರಲ್ಲಿ ಪಾಲ್ಘಾಟ್‌ನಲ್ಲಿ ನಡೆದಿತ್ತು. ಕೋಝಿಕ್ಕೋಡ್ ಭಾರತಕ್ಕೆ ಬಂದ ಮೊದಲ ಯುರೋಪಿಯನ್, ವಾಸ್ಕೋದ ಗಾಮ 1499ರಲ್ಲಿ ಬಂದಿಳಿದ ನಗರ ಮತ್ತು ಕೇರಳದ ಮೊದಲ ಕಮ್ಯುನಿಸ್ಟ್ ಪಕ್ಷದ ಘಟಕ ಸಂಘಟಿಸಲ್ಪಟ್ಟದ್ದು ಇಲ್ಲಿಯೇ.

ಅರವತ್ತು ವರ್ಷಗಳ ಹಿಂದೆ ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಮಹಾಧಿವೇಶನ ಮುಂಬೈಯಲ್ಲಿ ನಡೆದಿತ್ತು. ಅದರ ನಂತರ ಎರಡನೇ ಮಹಾಧಿವೇಶನ 1948ರಲ್ಲಿ ಕಲ್ಕತ್ತಾದಲ್ಲಿ ನಡೆಯಿತು. ಮಧುರೈನಲ್ಲಿ ನಡೆದ ಮೂರನೇ ಮಹಾಧಿವೇಶನದಲ್ಲಿ ಮೊದಲ ಬಾರಿಗೆ ಕೇಂದ್ರ ಸಮಿತಿಯಲ್ಲಿ ಕರ್ನಾಟಕದ ಸದಸ್ಯರು ಅಂದರೆ ಕಾಂ. ಎನ್.ಎಲ್. ಉಪಾಧ್ಯಾಯರು ಸ್ಥಾನ ಪಡೆದರು. ಅವರು 8ನೇ ಮಹಾಧಿವೇಶನದ ವರೆಗೆ ಕೇಂದ್ರ ಸಮಿತಿ ಸದಸ್ಯರಾಗಿ ಮುಂದುವರೆದರು.

ಪಾಲ್ಘಾಟಿನಲ್ಲಿ ನಡೆದ ನಾಲ್ಕನೇ ಮಹಾಧಿವೇಶನ, ಡಾಂಗೆಯವರ ಎರಡು ಸ್ತಂಭಗಳ ಸಿದ್ಧಾಂತದ ಮೂಲಕ ಪರಿಷ್ಕರಣವಾದದ ಪ್ರವೃತ್ತಿಗೆ ಸಾಕ್ಷಿಯಾಯಿತು ಎಂಬ ಕಾರಣಕ್ಕೆ ಚಾರಿತ್ರಿಕವಾಯಿತು. 5ನೇ ಮಹಾಧಿವೇಶನ ಅಮೃತಸರದಲ್ಲಿ ನಡೆಯಿತು. ಆಗ ಕೇರಳದಲ್ಲಿ ಇಎಂಎಸ್ ಮಂತ್ರಿ ಮಂಡಳವಿತ್ತು. ಆರನೇ ಮಹಾಧಿವೇಶನ ರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಜನತಾ ಪ್ರಜಾಪ್ರಭುತ್ವ ದಾರಿಗಳ ನಡುವೆ ಬಹಿರಂಗ ಚರ್ಚೆಯನ್ನು ಕಂಡಿತು. ಅಂತಿಮವಾಗಿ ಪಕ್ಷ ವಿಭಜನೆಗೊಂಡು 1964ರಲ್ಲಿ ಕಲ್ಕತ್ತೆಯಲ್ಲಿ 7ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ) ರಚನೆಗೊಂಡಿತು.

ದೇಶದ ಸಮಗ್ರತೆಗೆ ಬದ್ಧತೆ

9ನೇ ಮಹಾಧಿವೇಶನವನ್ನು ಮೂಲತಃ ಮಧುರೈಯಲ್ಲಿ 1971ರಲ್ಲಿ ನಡೆಸುವ ಯೋಜನೆಯಿತ್ತು. 1971ರ ಯುದ್ಧದಲ್ಲಿ ಪೂರ್ವ ಪಾಕಿಸ್ತಾನದ ಸೋಲಿನ ನಂತರ ಬಾಂಗ್ಲಾದೇಶದ ವಿಮೋಚನೆಯ ಹಿನ್ನೆಲೆಯಲ್ಲಿ ಅದು ವಿಳಂಬಗೊಂಡು 1972ರಲ್ಲಿ ನಡೆಯಿತು. ಇದು ಚಾರಿತ್ರಿಕವಾದದ್ದು ದೇಶೀಯ ಪ್ರಶ್ನೆಗೆ ಸಂಬಂಧಪಟ್ಟಂತೆ ಪಕ್ಷದ ಕಾರ್ಯಕ್ರಮದಲ್ಲಿ ತಿದ್ದುಪಡಿ ತಂದುದರಿಂದಾಗಿ.

9ನೇ ಮಹಾಧಿವೇಶನದ ಈ ತಿದ್ದುಪಡಿಯ ಮೊದಲು ನಮ್ಮ ಕಾರ್ಯಕ್ರಮದಲ್ಲಿ ಭಾರತದ ಪ್ರತಿಯೊಂದು ದೇಶೀಯತೆಗೆ ಸ್ವಯಂ ನಿರ್ಧಾರದ ಹಕ್ಕು ನೀಡುವ ಒಂದು ಕಲಮು ಇತ್ತು. ಸ್ವಯಂ ನಿರ್ಧಾರದ ಅಥವ ಪ್ರತ್ಯೇಕಗೊಳ್ಳುವ ಹಕ್ಕು ಒಂದು ಸಾಮ್ರಾಜ್ಯದ ವಿರುದ್ಧ ನಿರ್ದೇಶಿತವಾದ ಹಕ್ಕು, ಆದರೆ ಭಾರತ




ತಾನಾಗಿ ಒಂದು ಸಾಮ್ರಾಜ್ಯವಲ್ಲ, ಭಾರತೀಯ ಗಣತಂತ್ರದಲ್ಲಿ ಯಾವುದೇ ಒಂದು ದೇಶೀಯತೆ ಆಳ್ವಿಕೆ ನಡೆಸುತ್ತಿಲ್ಲ, ಬದಲಾಗಿ ಇಡೀ ದೇಶದ ಬಂಡವಾಳಶಾಹಿ-ಭೂಮಾಲಕ ವರ್ಗದ ಆಳ್ವಿಕೆಯಿದೆ ಎಂಬುದನ್ನು ಈ ತಿದ್ದುಪಡಿ ಎತ್ತಿ ಹಿಡಿಯಿತು. ಪಕ್ಷದ ಕಾರ್ಯಕ್ರಮದಲ್ಲಿ 9ನೇ ಮಹಾಧಿವೇಶನದ ಈ ತಿದ್ದುಪಡಿ ಬರದಿರುತ್ತಿದ್ದರೆ ನಂತರ ಬಂದ ಸವಾಲುಗಳನ್ನು ಎದುರಿಸಲಾಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು. ಈ ಸವಾಲು ಮೊದಲಿಗೆ 1980ರ ದಶಕದಲ್ಲಿ ಅಸ್ಸಾಂ ಸ್ವರೂಪದಲ್ಲಿ ಬಂತು. ನಂತರ ಪಂಜಾಬಿನಲ್ಲಿ ಖಾಲಿಸ್ತಾನ ಆಂದೋಲನ ಬಂತು. ಇದು ದೇಶವನ್ನು ಮುರಿಯುವ ಅಂಚಿಗೆ ತಂದು ನಿಲ್ಲಿಸಿತು, ಅಂತಿಮವಾಗಿ ಇಂದಿರಾ ಗಾಂಧಿಯವರ ಹತ್ಯೆಗೆ ಮತ್ತು 1984ರ ಸಿಖ್-ವಿರೋಧಿ ಗಲಭೆಗಳಿಗೆ ಕಾರಣವಾಯಿತು. ಸಿಪಿಐ(ಎಂ) ಕಾರ್ಯಕರ್ತರು ಪ್ರತ್ಯೇಕವಾದಿಗಳ ವಿರುದ್ಧ ಅಸ್ಸಾಂನಲ್ಲಿ, ಪಂಜಾಬಿನಲ್ಲಿ ಮತ್ತು ಇತರ ಹಲವೆಡೆ ಸೆಣಸಿದರು. ಸಿಪಿಐ(ಎಂ) ದೇಶದ ಸಮಗ್ರತೆಗೆ ಬದ್ಧವಾದ ಪಕ್ಷವಾಗುಳಿಯಿತು.

ಎಡ ಪ್ರಜಾಪ್ರಭುತ್ವ ರಂಗ

1972ರ 9ನೇ ಮಹಾಧಿವೇಶನ ಮತ್ತು ಜಾಲಂಧರ್‌ನಲ್ಲಿ 1978ರಲ್ಲಿ 10ನೇ ಮಹಾಧಿವೇಶನದ ನಡುವಿನ ಅವಧಿ ದೇಶದ ಇತಿಹಾಸದಲ್ಲಿ ವಿಶಿಷ್ಟವಾದದ್ದು. ಇಂದಿರಾಗಾಂಧಿಯವರ ಗರೀಬಿ ಹಠಾವೋ ಘೋಷಣೆಯ ಪೊಳ್ಳುತನ, ಪಶ್ಚಿಮ ಬಂಗಾಲದಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ಮತ್ತು 1975-77ರ ಆಂತರಿಕ ತುರ್ತು ಪರಿಸ್ಥಿತಿ ಈ ಅವಧಿಯಲ್ಲಿ ಕಾಣ ಬಂತು. 10ನೇ ಮಹಾಧಿವೇಶನ ಹಲವು ರೀತಿಗಳಲ್ಲಿ ಚಾರಿತ್ರಿಕವಾಗಿತ್ತು. ಈ ಮಹಾಧಿವೇಶನದಲ್ಲಿ ಗಂಭೀರವಾದ ಚರ್ಚೆಗಳು ನಡೆದವು, ದೇಶದಲ್ಲಿ ನಾಗರಿಕ ಸ್ವಾತಂತ್ರ್ಯಗಳನ್ನು ಅಮಾನತುಗೊಳಿಸಿದ್ದಾಗ ಸಮಸ್ತ ದೇಶಕ್ಕೆ ನಾಯಕತ್ವ ನೀಡುವಲ್ಲಿ ಪಕ್ಷ ವಿಫಲವಾಗಲು ಕಾರಣವಾದ ರಾಜಕೀಯ ತಪ್ಪುಗಳ ವಿಮರ್ಶೆ ನಡೆಯಿತು. ಆಗ ಆಳ್ವಿಕೆ ನಡೆಸುತ್ತಿದ್ದ ಪಕ್ಷ (ಜನತಾ ಪಕ್ಷ) ಕಾಂಗ್ರೆಸ್ ಪಕ್ಷದ ಬಗ್ಗೆ ಹೇಳುತ್ತಿದ್ದಂತೆ ಯಾವುದೇ ಒಂದು ಆಳುವ ವರ್ಗದ ಪಕ್ಷ ಮಾತ್ರ ಸರ್ವಾಧಿಕಾರಶಾಹಿ ಎನ್ನುವಂತಿಲ್ಲ ಎಂದು ಮಹಾಧಿವೇಶನ ಸಾರಿತು. ಸರ್ವಾಧಿಕಾರಶಾಹಿ ಎಂದರೆ ಪ್ರಜಾಪ್ರಭುತ್ವ ಹಕ್ಕುಗಳ ನಿರಾಕರಣೆ. ಈ ಪ್ರಜಾಪ್ರಭುತ್ವ ಹಕ್ಕುಗಳು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯ ವಿರುದ್ಧ ಹೋರಾಡಲು ಶೋಷಿತ ವರ್ಗಗಳಿಗೆ ಅತ್ಯಗತ್ಯ. ಕಾಂಗ್ರೆಸಾಗಲೀ, ಜನತಾವಾಗಲೀ (ಅಥವ ನಂತರ ರಚನೆಗೊಂಡ ಬಿಜೆಪಿಯಾಗಲೀ) ಈ

ಪುಟ 10ಕ್ಕೆ....





ಕೋಝಿಕ್ಕೋಡ್ ಮಹಾಧಿವೇಶನದತ್ತ

ಪುಟ 9ರಿಂದ.....

ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯಲ್ಲಿಯೇ ಬರುತ್ತವೆ. ಎಡ ಪ್ರಜಾಪ್ರಭುತ್ವವಾದೀ ರಂಗ ಒಂದು ಹೋರಾಟಶೀಲ ರಂಗ, ಯಾವ ಪಕ್ಷ ಎಡಪಂಥೀಯ ಅಥವ ಪ್ರಜಾಪ್ರಭುತ್ವವಾದಿ ಎಂಬುದಕ್ಕೆ ವಿವಿಧ ಚುನಾವಣೆಗಳಲ್ಲಿ ಮಾಡಿಕೊಂಡ ಮೈತ್ರಿಗಳು ಆಧಾರವಾಗುವುದಿಲ್ಲ ಎಂದು 10ನೇ ಮಹಾಧಿವೇಶನ ಸಾರಿತು. ನಂತರ 10ನೇ ಮಹಾಧಿವೇಶನ ರೂಪಿಸಿದ ಈ ದಾರಿಯನ್ನು ಸಾಲ್ಕಿಯಾದಲ್ಲಿ ನಡೆದ ಸಂಘಟನಾ ಪ್ಲೀನಂ ಅಂಗೀಕರಿಸಲು ಯತ್ನಿಸಿತು.



ವಿಜಯವಾಡದಲ್ಲಿ 1981ರಲ್ಲಿ ನಡೆದ ಹನ್ನೊಂದನೇ ಮಹಾಧಿವೇಶನ 1980ರಲ್ಲಿ ಜನತಾಪಕ್ಷಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದುಕೊಂಡ ಜುಲೈ ಬಿಕ್ಕಟ್ಟಿನ ಪ್ರಶ್ನೆಯನ್ನು ವಿಮರ್ಶಿಸಿತು. ಈ ಮಹಾಧಿವೇಶನದ ನಂತರದ ಅವಧಿ ನಮ್ಮ ಪಕ್ಷ ಮತ್ತು ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಹಾಗೂ ಚೀನಾ ಕಮ್ಯುನಿಸ್ಟ್ ಪಕ್ಷದ ನಡುವಿನ ಸಂಬಂಧಗಳಲ್ಲಿ ತುಸು ಪಲ್ಲಟವನ್ನು ಕಂಡಿತು. ಸಿಪಿಐ(ಎಂ)ನ ಸ್ವತಂತ್ರ ನಿಲುವನ್ನು ಎತ್ತಿ ಹಿಡಿಯುತ್ತಲೇ ಪಕ್ಷಗಳ ನಡುವೆ ಸಂಬಂಧಗಳನ್ನು ಪೋಷಿಸುವ ಅಗತ್ಯವನ್ನು ಅದು ಅನುಮೋದಿಸಿತು.

1984ರಲ್ಲಿ ಕೊಲ್ಕತಾದಲ್ಲಿ ನಡೆದ ಹನ್ನೆರಡನೇ ಮಹಾಧಿವೇಶನ ಪಶ್ಚಿಮ ಬಂಗಾಳದ ಮರು ಕೈಗಾರೀಕರಣಕ್ಕಾಗಿ ಜಂಟಿ ಉದ್ಯಮಗಳ ಪ್ರಶ್ನೆಯನ್ನು ಚರ್ಚಿಸಿತು. 1988ರಲ್ಲಿ ತಿರುವನಂತಪುರದಲ್ಲಿ ನಡೆದ ಹದಿಮೂರನೇ ಮಹಾಧಿವೇಶನದಲ್ಲಿ ಕೇಂದ್ರೀಯ ಕಾರ್ಯದರ್ಶಿ ಮಂಡಳಿ ರಚನೆಗೊಂಡಿತು. ಮುಂದೆ 14ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಇವರು ಪಕ್ಷದ ಮುಖಂಡರಾದರು. ಚೆನ್ನೈಯಲ್ಲಿ 1992ರಲ್ಲಿ ನಡೆದ ಹದಿನಾಲ್ಕನೇ ಮಹಾಧಿವೇಶನ ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳ ಪತನದ ಹಿನ್ನೆಲೆಯಲ್ಲಿ ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಒಂದು ದಸ್ತಾವೇಜನ್ನು ಅಂಗೀಕರಿಸಿತು. 14ನೇ ಮಹಾಧಿವೇಶನದಿಂದ 19ನೇ ಮಹಾಧಿವೇಶನದ (ಚಂಡೀಗಡದಲ್ಲಿ 15ನೇ, ಕೊಲ್ಕತಾದಲ್ಲಿ 16ನೇ, ಹೈದರಾಬಾದಿನಲ್ಲಿ 17ನೇ ಮತ್ತು ನವದೆಹಲಿಯಲ್ಲಿ 18ನೇ ಮಹಾಧಿವೇಶನ) ವರೆಗಿನ ಅವಧಿ ಒಂದೆಡೆ ನವ-ಉದಾರವಾದ ಮತ್ತು ಇನ್ನೊಂದೆಡೆ ದೇಶದಲ್ಲಿ ಕೋಮುವಾದಿ ರಾಜಕೀಯದ ಬೆಳವಣಿಗೆಯ ಅವಧಿ. 18ನೇ ಮಹಾಧಿವೇಶನ ಧೋರಣೆಯ ಕಣ್ಣೋಟಗಳ ಮೇಲೆ ಒಂದು ದಸ್ತಾವೇಜನ್ನು ಮತ್ತು 19ನೇ ಮಹಾಧಿವೇಶನ ಎಡರಂಗ ಸರಕಾರಗಳ ಮೇಲೆ ಒಂದು ದಸ್ತಾವೇಜನ್ನು ಅಂಗೀಕರಿಸಿತು.

ಕೊಯಮತ್ತೂರಿನಲ್ಲಿ ನಡೆದ 19ನೇ ಮಹಾಧಿವೇಶನ ಮತ್ತು ಕೋಝಿಕ್ಕೋಡಿನಲ್ಲಿ ನಡೆಯಲಿರುವ 20ನೇ ಮಹಾಧಿವೇಶನದ ನಡುವಿನ ಅವಧಿಯಲ್ಲಿ ಪಕ್ಷ ಕೇರಳದಲ್ಲೂ ಮತ್ತು ಪಶ್ಚಿಮ ಬಂಗಾಲದಲ್ಲೂ ಎಡರಂಗ ಸರಕಾರಗಳನ್ನು ಕಳೆದುಕೊಳ್ಳುವ ಸನ್ನಿವೇಶವನ್ನು ಎದುರಿಸಬೇಕಾಗಿ ಬಂದಿದೆ. ಹೀಗೆ 20ನೇ ಮಹಾಧಿವೇಶನದಲ್ಲಿ ಅಂಗೀಕರಿಸುವ ರಾಜಕೀಯ ಲೈನು ಒಂದು ಮಹತ್ವದ ದಸ್ತಾವೇಜು ಆಗುತ್ತದೆ, ಅದು ಹೊಸ ದಾರಿಯನ್ನು ಕಂಡುಕೊಳ್ಳಬೇಕಾಗಿದೆ.

ಮೂರು ಮಹತ್ವದ ದಸ್ತಾವೇಜುಗಳು

ಈಗಾಗಲೇ ಚರ್ಚೆಗೆ ಬಿಡುಗೆಯಾಗಿರುವ ರಾಜಕೀಯ ನಿರ್ಣಯದ ಜೊತೆಗೆ ಕೇಂದ್ರ ಸಮಿತಿ ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಒಂದು ದಸ್ತಾವೇಜನ್ನೂ ಅಂಗೀಕರಿಸಿದೆ. ಈ ದಸ್ತಾವೇಜು ಕಳೆದ ಒಂದು ಶತಮಾನದಲ್ಲಿ ಸಾಮ್ರಾಜ್ಯಶಾಹಿಯ ವಿಭಿನ್ನ ಘಟ್ಟಗಳ ಅನುಭವಗಳ ಮೌಲ್ಯಮಾಪನ ಮಾಡಲು ಪ್ರಯತ್ನಿಸಿರುವುದರಿಂದ ಚಾರಿತ್ರಿಕವಾಗುತ್ತದೆ. ಪ್ರಸಕ್ತ ಘಟ್ಟ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಘಟ್ಟ ಎಂದು ಅದು ಗುರುತಿಸಿದೆ. ಈ ಘಟ್ಟದಲ್ಲಿ ಅದು ಕಾರ್ಮಿಕ ವರ್ಗ ಸೃಷ್ಟಿಸುವ ಮಿಗುತಾಯ ಮೌಲ್ಯವನ್ನು(ಇದೇ ಅಪಾರವಾಗಿದೆ) ಕಬಳಿಸಿ ಅಪಾರ ಸಂಪತ್ತನ್ನು ರಾಶಿ ಹಾಕುವುದಲ್ಲದೆ, ಸಮಸ್ತ ಜನತೆಯಿಂದ- ಅವರು ರಕ್ಷಣೆಯಿಲ್ಲದ ಶ್ರಮಿಕರಾಗಿರಬಹುದು, ರೈತಾಪಿ ಜನಗಳಾಗಿರಬಹುದು ಮತ್ತು ಒಟ್ಟಾರೆಯಾಗಿ ಎಲ್ಲ ಜನತೆಯಿರಬಹುದು- ಕಸಿದುಕೊಳ್ಳುವ ಸಂಪತ್ತು ಕೂಡ ಬೃಹತ್ ಪ್ರಮಾಣದ್ದಾಗಿದೆ. ಇದು ಎಂತಹ ಸನ್ನಿವೇಶವನ್ನು ಸೃಷ್ಟಿಸಿದೆಯೆಂದರೆ, ಜಾಗತಿಕವಾದ ಕೈಗಾರಿಕಾ ಹಣಕಾಸು ಬಂಡವಾಳ ಮತ್ತು ಸಮಸ್ತ ಜಗತ್ತಿನ ಜನತೆಯ ನಡುವಿನ ವೈರುಧ್ಯಗಳು ತೀಕ್ಷ್ಣಗೊಳ್ಳುತ್ತಿವೆ. 'ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ' ಎಂಬಂತಹ ಬಂಡಾಯದ ಹೊಸ ಸ್ವರೂಪಗಳು ಭುಗಿಲೇಳುತ್ತಿವೆ. ಇಂತಹ ಸಂದರ್ಭದಲ್ಲಿ ಸೈದ್ಧಾಂತಿಕ ದಸ್ತಾವೇಜಿನ ಅಂಗೀಕಾರ ಖಂಡಿತವಾಗಿಯೂ ನಮ್ಮ ದೇಶದ ಜನತೆಗೆ ನೇತೃತ್ವ ನೀಡುತ್ತದಷ್ಟೇ ಅಲ್ಲ, ಜಗತ್ತಿನಾದ್ಯಂತ ಜನತೆ ನಡೆಸಿರುವ ಚುಕ್ಕಾಣಿಯಿಲ್ಲದ ಬಂಡಾಯಗಳಿಗೆ ಪ್ರಯೋಜನಕಾರಿಯಾಗುತ್ತದೆ.

ಇವೆರಡು ದಸ್ತಾವೇಜುಗಳಲ್ಲದೆ 20ನೇ ಮಹಾಧಿವೇಶನ ಮೂರನೇ ದಸ್ತಾವೇಜೊಂದನ್ನೂ ಅಂಗೀಕರಿಸಲಿದೆ- ಅದೆಂದರೆ ರಾಜಕೀಯ-ಸಂಘಟನಾತ್ಮಕ ದಸ್ತಾವೇಜು. ಇದು 19ನೇ ಮಹಾಧಿವೇಶನದ ನಿರ್ಣಯಗಳ ಜಾರಿಯ ಪರಾಮರ್ಶೆ ನಡೆಸುವುದಲ್ಲದೆ ಸಮಸ್ತ ದೇಶದಲ್ಲಿ ಪಕ್ಷದ ಅಸಮ ಬೆಳವಣಿಗೆಯ ಪ್ರಶ್ನೆಯನ್ನು ಮೊನಚಾಗಿ ಮುಂದಿಡುತ್ತದೆ.

ಹೀಗೆ 20ನೇ ಮಹಾಧಿವೇಶನದ ದಸ್ತಾವೇಜುಗಳ ಅಂಗೀಕಾರದ ನಂತರ ಅವು ಸಮಸ್ತ ಪಕ್ಷದ ಸದಸ್ಯರು ಸಮಸ್ತ ಜನತೆಗಾಗಿ ಜಗತ್ತನ್ನು ಬದಲಾಯಿಸಿ ಉತ್ತಮಗೊಳಿಸುವ ಕ್ರಿಯೆಗಾಗಿ ತಮ್ಮನ್ನು ಸಮರ್ಪಿಸಿಕೊಳ್ಳುವಲ್ಲಿ, ಅವರ ಕೈಗಳಲ್ಲಿರುವ ಮಹತ್ವದ ಉಪಕರಣಗಳಾಗುತ್ತವೆ. ●

ಬಿಜೆಪಿ ದರ್ಬಾರ್......

ಮಾಜಿ ಶಾಸಕರ ಭತ್ಯೆ ಏರಿಕೆ

ರಾಜ್ಯದ ಬರಪೀಡಿತ ಜನರಿಗೆ ಕುಡಿಯುವ ನೀರು ಕೊಡದಿದ್ದರೂ, ಬತ್ತಕ್ಕೆ, ತೊಗರಿಗೆ, ರೇಷ್ಮೆಗೆ ಬೆಂಬಲ ಬೆಲೆ ಕೊಡದಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಮಾಜಿ ಶಾಸಕರಿಗೆ ನೀಡುವ ಭತ್ಯೆಯನ್ನು ಏರಿಸಿದೆ. ಇದರಿಂದ ಸ್ಫೂರ್ತಿ ಪಡೆದ ಬಿಜೆಪಿ ಹಾಗೂ ಜೆಡಿ(ಎಸ್) ಶಾಸಕರು ಹಾಲಿ ಶಾಸಕರ ಭತ್ಯೆ ಏರಿಕೆ ಮಾಡಿರೆಂದು ಸಹಿ ಸಂಗ್ರಹ ಆಂದೋಲನ ಕೈಗೊಂಡಿದ್ದಾರಂತೆ. ಆಹಾ !! ಏನು ಸೊಗಸಾದ ಆಡಳಿತವಪ್ಪ ಬಿಜೆಪಿ ಸರ್ಕಾರದ್ದು. ದೂರಾಲೋಚನೆ, ಮುಂದಾಲೋಚನೆ. ಹೇಗೂ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ... ಈ ಸರ್ಕಾರ ಎಷ್ಟು ದಿನ ಬಾಳುತ್ತದೋ ಗೊತ್ತಿಲ್ಲ. ಹಾಗಾಗಿ ಆದಷ್ಟೂ ಬೇಗ ಏನೇನು ಗುಂಜಿಕೊಳ್ಳಲು ಸಾಧ್ಯವೋ ಗುಂಜಿ ಕೊಂಡು ಬಿಡೋಣ ಅಂತ ಇರಬೇಕು ಇವರ ಆತುರ. ನೀವು ಏನಂತೀರ ??

ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ

ಡಿ.ವೈ.ಎಫ್.ಐ ನ ಅಖಿಲ ಭಾರತ ಸಮ್ಮೇಳನ

ಸಿದ್ಧತೆಗೆ ಚಾಲನೆ: ಏಪ್ರಿಲ್ 1 ರಂದು ಸ್ವಾಗತ ಸಮಿತಿ ರಚನಾ ಸಭೆ

ಭಾರತವೆಂದರೆ ಯುವಭಾರತವೆಂದೇ ಇಂದು ಕರೆಯಲಾಗುತ್ತಿದೆ. ಇಲ್ಲೀಗ ಯುವಜನರ ಸಂಖ್ಯೆಯೇ ಒಟ್ಟು ಜನ ಸಂಖ್ಯೆಯ ಶೇ.52.5 . ಅಂದರೆ ಸುಮಾರು 60 ಕೋಟಿ. ಇಂತಹ ಯುವ ಜನತೆಯನ್ನು ಪ್ರಗತಿಪರ, ಧರ್ಮ ನಿರಪೇಕ್ಷಿತ, ಪ್ರಜಾಸತ್ತಾತ್ಮಕ ಆಂದೋಲನವನ್ನಾಗಿ ಸಂಘಟಿಸಲು ಡಿವೈಎಫ್ಐ ತೊಡಗಿದೆ. ದೇಶದಲ್ಲಿ 1 ಕೋಟಿ 36 ಲಕ್ಷ ಸದಸ್ಯರನ್ನು ಹೊಂದಿ, ಪ್ರಪಂಚದಲ್ಲೇ ಎರಡನೆಯ ಅತಿ ದೊಡ್ಡ ಯುವಜನ ಸಂಘಟನೆಯಾದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನ 9ನೇ ಅಖಿಲ ಭಾರತ ಸಮ್ಮೇಳನವನ್ನು ಕರ್ನಾಟಕದ ರಾಜಧಾನಿ, ಪ್ರಖ್ಯಾತ ಬೆಂಗಳೂರು ಮಹಾ ನಗರದಲ್ಲಿ ನಡೆಸಲು ಅದರ ಕೇಂದ್ರ ಸಮಿತಿಯು ಉದ್ದೇಶಿಸಿದೆ. ಇದೇ ಮಾರ್ಚ್ 2 ಮತ್ತು 3ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಬಂದಿದ್ದ ಆಹ್ವಾನವನ್ನು ಡಿವೈಎಫ್ಐ ರಾಜ್ಯ ಸಮಿತಿಯು ಒಪ್ಪಿದೆ. ತನ್ನ ಸದಸ್ಯರ, ಕಾರ್ಯಕರ್ತರ ವಿಶೇಷವಾಗಿ ವಿವಿಧ ಪ್ರಗತಿಪರ, ಪ್ರಜಾಸತ್ತಾತ್ಮಕ ಸಂಘಟನೆಗಳು,ಎಡ ಶಕ್ತಿಗಳು, ವಿವಿಧ ವಿಭಾಗಗಳ ಪ್ರಮುಖರು, ಹಿತೈಷಿಗಳ ಸಕ್ರಿಯ ಸರ್ವ ಸಹಕಾರಗಳಿಂದ ಚಾರಿತ್ರಿಕ ಘಟನೆಯನ್ನು ಯಶಸ್ವಿಗೊಳಿಸುವ ವಿಶ್ವಾಸವನ್ನು ಸಂಘಟನೆ ವ್ಯಕ್ತಪಡಿಸಿದೆ.

ಈ ರಾಷ್ಟ್ರ ಸಮ್ಮೇಳನ ವು ಇದೇ ಸೆಪ್ಟಂಬರ್ ತಿಂಗಳ ಎರಡನೇ ವಾರದಲ್ಲಿ ಜರುಗಬೇಕಿದೆ. ಡಿವೈಎಫ್ಐ ನ ರಾಷ್ಟ್ರ ಸಮ್ಮೇಳನವನ್ನು ಕರ್ನಾಟಕದಲ್ಲಿ ಸಂಘಟಿಸುತ್ತಿರುವುದು ಪ್ರಪ್ರಥಮವಾಗಿದೆ. ಇಂತಹ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಲು ವಿಶಾಲ ನೆಲೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗುತ್ತಿದ್ದು ಇದೇ ಏಪ್ರಿಲ್ 1 ರಂದು ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಹಾಲ್ ನಲ್ಲಿ ಬೆಳಿಗ್ಗೆ 10.30ಕ್ಕೆ ' ಕರೆಯಲಾಗಿದೆ. ಇದರಲ್ಲಿ ಅಖಿಲ ಭಾರತ ಅದ್ಯಕ್ಷರಾದ ಶಾಸಕ ಶ್ರೀರಾಮ ಕೃಷ್ಣನ್, ಪ್ರಧಾನ ಕಾರ್ಯದರ್ಶಿ ತಪಸ್‌ಸಿನ್ಹಾ, ಸಂಸದ, ಉಪಾದ್ಯಕ್ಷ ಎಂ.ಬಿ.ರಾಜೇಶ್ ಆಗಮಿಸಲಿದ್ದಾರೆ. ಸರ್ವರೂ ಸಮ್ಮೇಳನದ ಯಶಸ್ವಿಗೆ ಕೈ ಜೋಡಿಸಬೇಕೆಂದು ವಿನಂತಿಸಿ ಸ್ವಾಗತ ಸಮಿತಿಯ ಸಭೆಗೆ ಆಹ್ವಾನಿಸಲಾಗಿದೆ.

ಮುದಕ, ಮುದುಕಿಯಾಗುವುದಕ್ಕೆ, ವಿಧವೆಯರಾಗುವುದಕ್ಕೆ ಮೊದಲು ಬಿಜೆಪಿ ಸರ್ಕಾರದ ಪರ್ಮಿಶನ್ ತೆಗೆದುಕೊಳ್ಳಿ !!

ಅಬ್ಬಬ್ಬ !! ರಾಜ್ಯ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಈ ಹಿಂದೆ ಎಲ್ಲೂ ಇಲ್ಲದ ಹೊಸ ಹೊಸ ಅಪೂರ್ವ ಕ್ರಮಗಳನ್ನು ಜಾರಿಗೆ ತರುತ್ತಾ ರಾಜ್ಯದ ಆಡಳಿತವನ್ನು ಒಂದು ಹೊಸ ಔನತ್ಯಕ್ಕೆ ಕೊಂಡೊಯ್ಯಲಾಗುತ್ತಿದೆ. ವಯೋವೃದ್ಧರು, ವಿಧವೆಯರೂ ಮುಂತಾದ ಸಮಾಜದ ದುರ್ಬಲ ವರ್ಗಗಳ ಕಲ್ಯಾಣ ಯೋಜನೆಗಳ ಜಾರಿಯ ವಿಷಯದಲ್ಲಿ ಸದಾನಂದಗೌಡರ ನೇತೃತ್ವದ ಬಿಜೆಪಿ ಸರ್ಕಾರ ಜಾರಿಗೆ ತರುತ್ತಿರುವ ವಿನೂತನ ಕ್ರಮದ ಈ ಉದಾಹರಣೆಯನ್ನು ನೋಡಿ.

ವೃದ್ಧಾಪ್ಯ ವೇತನ, ವಿಧವಾ ವೇತನಗಳು, ಅಂಗವಿಕಲರ ವೇತನಗಳು ಅನರ್ಹ ವ್ಯಕ್ತಿಗಳ ಪಾಲಾಗುತ್ತಿದೆಯಂತೆ. ಅದಕ್ಕೆ ಸರ್ಕಾರ ಉಪಾಯವೊಂದನ್ನು ಕಂಡುಕೊಂಡಿದೆಯಂತೆ. ಪ್ರತಿ ಜಿಲ್ಲೆಗೂ ಸಹ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಪಡೆಯುವವರ ಸಂಖ್ಯೆಗೆ ಗರಿಷ್ಠ ಮಿತಿ ನಿಗದಿ ಮಾಡಿದೆ ಸರ್ಕಾರ. ಹೀಗೆಂದು ಸರ್ಕಾರ ಲಿಖಿತ ಆದೇಶ ಹೊರಡಿಸಿದೆ.

ಈ 'ಗರಿಷ್ಟ ಮಿತಿ' ಎಂದರೆ ಅದು ಎಷ್ಟಿರಬಹುದು ? ಹಾಂ, ಇಲ್ಲೇ ಇರೋದು ನೋಡಿ ಸ್ವಾರಸ್ಯ. ಒಂದೆರಡು ಉದಾರಹರಣೆ ನೋಡಿ.

ಸುಮಾರು 70–80 ಲಕ್ಷ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ ಜಾಸ್ತಿ ಅಂದರೆ 2,000 ವಿಧವೆಯರು ಮಾತ್ರ ವಿಧವಾ ವೇತನ ಪಡೆಯಬಹುದು. ಇಡೀ ಗದಗ್ ಜಿಲ್ಲೆಗೆ ಈ ಮಿತಿ 300 ಮಾತ್ರ ಇದೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ 800, ಉಡುಪಿ 600, ಕೋಲಾರ 650, ಚಿಕ್ಕಬಳ್ಳಾಪುರ 550, ಹೀಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಈಗ ವಿಧವಾ ವೇತನ ಪಡೆಯುತ್ತಿರುವವರ ಸಂಖ್ಯೆ 25,014. ಜಿಲ್ಲೆಗೆ ಸರ್ಕಾರ ನಿಗದಿ ಪಡಿಸಿರುವ ಗರಿಷ್ಟ ಮಿತಿ- 500. ಅಂದರೆ ಈಗ ವಿಧವಾ ವೇತನ ಪಡೆಯುತ್ತಿರುವ ವಿಧವೆಯರಲ್ಲೇ 24,514 ಜನ ವಿಧವೆಯರು ವಿಧವಾ ವೇತನ ಸೌಕರ್ಯದಿಂದ ವಂಚಿತರಾಗುತ್ತಾರೆ. ಜಿಲ್ಲೆಯಲ್ಲಿ 18,576 ಜನ ಅಂಗವಿಕಲರು ವೇತನ ಪಡೆಯುತ್ತಿರುವ ಕಡೆ ಕೋಟಾ ಮಿತಿ ಜಾರಿಗೆ ಬಂದರೆ ಆ ಸಂಖ್ಯೆ 600 ಇಳೀಯುತ್ತದೆ. 14,175 ಜನ ವೃದ್ಧಾಪ್ಯ ವೇತನ ಪಡೆಯುತ್ತಿರುವ ಕಡೆ ಗರಿಷ್ಟ ಮಿತಿ ಜಾರಿಗೆ ಬಂದರೆ ಆ ಸಂಖ್ಯೆ 1,200 ಆಗಲಿದೆ.

ಇದೇ ರೀತಿಯಾಗಿ ವಿವಿಧ ಜಿಲ್ಲೆಗಳಿಗೆ 300, 500, .600, ಕೋಟಾ ನೀಡಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅಂಗವಿಕಲರ ವೇತನ ಪಡೆಯುವವರ ಕೋಟಾದ ಗರಿಷ್ಟ ಮಿತಿ 900 ಇದೆ. (ಎಂಥಾ ಮಹಾನಗರಕ್ಕೆ) ಆಹಾ ! ಎಂಥಾ ಸರ್ಕಾರವಪ್ಪ. ಸುಳ್ಳು ಮಾಹಿತಿ ಕೊಟ್ಟು ಸೌಲಭ್ಯ ಪಡೆಯುವದನ್ನು ತಪ್ಪಿಸುವುದಕ್ಕೆ ಈ ಕ್ರಮ ಎಂದು ಸರ್ಕಾರ ಕ್ರಮವನ್ನು ಸಮರ್ಥಿಸುತ್ತಿರುವುದು ಶುದ್ದ ಸುಳ್ಳು. ಬೇಡ ಬೇಡದ್ದಕ್ಕೆಲ್ಲಾ ನೂರಾರು ಕೋಟಿ ರೂಪಾಯಿಗಳನ್ನು ಸುರಿಯಲು ತಯಾರಿರುವ ಬಿಜೆಪಿ ಸರ್ಕಾರ ಸಮಾಜದ ದುರ್ಬಲ ವಿಭಾಗಗಳು ಎರಡು ಹೊತ್ತು ಗಂಜಿ ಕುಡಿಯಲು ಸಹಾಯ ಮಾಡುವ ವೇತನವನ್ನು ಕಿತ್ತುಕೊಳ್ಳಲು ಹೊರಟಿದೆ ಎಂಬುದು ಈ ಕ್ರಮದಿಂದ ಸ್ಪಷ್ಟವಾಗಿದೆ. ಚಿಕ್ಕ ಮಗಳೂರು ಲೋಕಸಭಾ ಕ್ಷೇತ್ರದ ಜನತೆ ಮೊನ್ನೆ ತಾನೆ ಕೊಟ್ಟಿರುವ ಎಚ್ಚರಿಕೆಯನ್ನು ಬಿಜೆಪಿ ಸರ್ಕಾರ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬುದು ಈ ಕ್ರಮದ ಅರ್ಥ. ಹೋಗಲಿ ಬಿಡಿ. ಸೆಮಿಫೈನಲ್‌ನಲ್ಲಿ ಪಾಠ ಕಲಿಯದಿದ್ದವರಿಗೆ ಫೈನಲ್‌ನಲ್ಲಿಯಾದರೂ ಪಾಠ ಕಲಿಸುವ ಅವಕಾಶ ಜನಕ್ಕಿದೆಯಲ್ಲ.

ಆನೆ ಸತ್ತಿದೆ ಬಿಬಿಎಂಪಿ ಕಛೇರಿಯೊಳಗೆ

ಭ್ರಷ್ಟಾಚಾರ, ಹಗರಣಗಳ ವಿಷಯ ಬಂದಾಗ 'ಇಲಿ ಸತ್ತಿದೆ.... ಹೆಗ್ಗಣ ಸತ್ತಿದೆ' ಎಂಬಿತ್ಯಾದಿ ಮಾತುಗಳು ಬಳಕೆಯಾಗುವುದು ಸಹಜ. ಆದರೆ ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ಬಗೆಗೆ ಹಾಗೂ ಬಿಜೆಪಿ ಅಧಿಕಾರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಹಗರಣಗಳ ಬಗೆಗೆ ಹೇಳುವಾಗ ಇಲಿ, ಹೆಗ್ಗಣಗಳ ಪ್ರತಿಮೆಯನ್ನು ಬಿಟ್ಟು ಆನೆ, ತಿಮಿಂಗಿಲಗಳ ಪ್ರತಿಮೆಗಳ ಮೂಲಕ ಮಾತನಾಡಬೇಕಾಗುತ್ತದೆ. ನಾವು ಈ ಪತ್ರಿಕೆಯಲ್ಲಿ ಪಟ್ಟಿ ಮಾಡಲಾಗದಷ್ಟು ಹಗರಣ, ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಸಿಯೂ ಹಗರಣಕೋರರು ನಿರಾತಂಕವಾಗಿ ನಿರುಮ್ಮಳವಾಗಿದ್ದಾರೆ.

ಸುಮ್ಮನೇ ಉದಾಹರಣೆಗೆಂದು ಈ ಒಂದು ಪ್ರಕರಣವನ್ನು ನೋಡಿ. ಬೆಂಗಳೂರಿನ ಹೃದಯ ಭಾಗದಲ್ಲಿ ಬರುವ ಚಿಕ್ಕಪೇಟೆ ಕ್ಷೇತ್ರವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಮಾಡದೇ ಹಾಗೇ ಹಣ ಬಿಡುಗಡೆ ಮಾಡಿಸಿಕೊಳ್ಳಲಾಗಿದೆ ಅಂತ ಕ್ಷೇತ್ರದ ಬಿಜೆಪಿ ಶಾಸಕ ಹೇಮಚಂದ್ರ ಸಾಗರ್ ಅವರೇ ಸ್ವತಃ ಬಿಬಿಎಂಪಿ ಆಯುಕ್ತರಿಗೆ ಒಂದೆ ದೂರು ಕೊಡುತ್ತಾರೆ. ಅದರ ಆಧಾರದ ಮೇಲೆ ತನಿಖೆ ನಡೆದು ತನಿಖಾ ಸಮಿತಿಯು... ನವಾಬ್ ಆಲಿ ಖಾನ್ ರಸ್ತೆ, ವಾಣಿ ವಿಲಾಸ ರಸ್ತೆ, ಎ.ವಿ. ರಸ್ತೆಗಳಲ್ಲಿ ರಸ್ತೆ ಡಾಂಬರೀಕರಣವೇ ಆಗದೇ ಕಾಮಗಾರಿ ಹೆಸರಿನಲ್ಲಿ 4.76 ಕೋಟಿ ರೂ. ಹಣ ಬಿಡುಗಡೆ ಮಾಡಿಸಿಕೊಳ್ಳಲಾಗಿದೆ. ಅದೂ ಅಲ್ಲದೇ ಯೋಜಿತ ಕಾಮಗಾರಿಗೆ ನೀಡಬೇಕಾದುದಕ್ಕಿಂತ ಅಧಿಕವಾಗಿ 1.85 ಕೋಟಿ ರೂ. ಹಣ ಬಿಡುಗಡೆ ಮಾಡಿಸಿಕೊಳ್ಳಲಾಗಿದೆ.... ಇತ್ಯಾದಿ ಇತ್ಯಾದಿ ಅಂಶಗಳಿರುವ ವರದಿಯನ್ನು ಮಾ 12,2012ರಂದು ಸಲ್ಲಿಸುತ್ತದೆ. ಇಷ್ಟಾಗುವಾಗ ಎರಡು ವರ್ಷ ದಾಟಿದೆ.

ಈ ಎರಡು ವರ್ಷಗಳ ಅವಧಿಯಲ್ಲಿ ಏನೇನೂ ಮಾಯಾಜಾಲ, ಇಂದ್ರಜಾಲಗಳು ನಡೆದು ಹೋಗಿವೇಯೋ ಏನೋ? ಅಕ್ರಮದ ಬಗೆಗೆ ದೂರು ಸಲ್ಲಿಸಿದ್ದ ಬಿಜೆಪಿ ಶಾಸಕರೇ ಅಕ್ರಮದ ಆರೋಪಗಳ ಕುರಿತ ಪರಿಶೀಲನೆ ಅಗತ್ಯವಿಲ್ಲ ಅಂತ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿದ್ದಾರಂತೆ. ಇದಕ್ಕೆ ಏನು ಆಧಾರ ಅಂದರೆ ಸಂಬಂಧಿಸಿದ ಬಿಬಿಎಂಪಿ ವಾರ್ಡ್‌ನ ಕಾರ್ಪೊರೇಟರ್–ಬಿಜೆಪಿ ಕಾರ್ಪೊರೇಟರ್ ಧನರಾಜ್ ಅವರು ತನಿಖಾ ವರದಿ ಸಲ್ಲಿಕೆಯನ್ನು ತಡೆ ಹಿಡಿಯಲು ಕೋರಿ ಮಾರ್ಚ್ 10, 2012 ರಂದು ಬಿಜೆಪಿ ಶಾಸಕರಿಗೆ ಬರೆದ ಪತ್ರ.


ಈ ಒಟ್ಟು ಪ್ರಕರಣಗಳಲ್ಲಿ ಎರಡು–ಎರಡೂವರೆ ವರ್ಷಗಳಲ್ಲಿ ಏನೇನೆಲ್ಲ ನಡೆದಿರಬಹುದು ಎಂಬುದು ಓದುಗರ ಊಹೆಗೆ ಬಿಟ್ಟ ವಿಚಾರ.

ಬಾಲಂಗೋಚಿ...

ಹೆಗ್ಗಣ ಸತ್ತ ಕೂಡಲೇ ವಾಸನೆ ಬರುತ್ತದೆಯೇ?

ಮೊನ್ನೆ ಮೊನ್ನೆ ಸದಾನಂದ ಗೌಡರ ಕುರ್ಚಿ ಅಲುಗಾಡಿದಾಗ ಒಂದಷ್ಟು ಜನ ಸದಾನಂದ ಗೌಡರ ಜಾತಿ ಬಾಂಧವರು ಬೆಂಗಳೂರಿನ ಪುರಭವನದ ಮುಂದೆ ಸೇರಿ ಸ.ಗೌಡರ ಪರ ಪರಾಕು ಹಾಕಿ ಕುರ್ಚಿ ಉಳಿಸಲು ಯತ್ನಿಸಿದರಲ್ಲ.... ಆಗ ಯಾರೋ ಒಬ್ಬ 'ಪುಣ್ಯಾತ್ಮರು' "ಸದಾನಂಧ ಗೌಡರು ಆರೆಸ್ಸೆಸ್ ಕಾರ್ಯಕರ್ತರು. ಹೀಗಾಗಿ ಅವರು ಭ್ರಷ್ಟಾಚಾರವಿಲ್ಲದ ಆಡಳಿತ ಕೊಡುತ್ತಿದ್ದಾರೆ.... ಅವರು ಮುಂದುವರಿಯಬೇಕು...." ಎಂದೆಲ್ಲಾ ತಮ್ಮ ಚಿಂತನ ಚಿಲುಮೆಯಿಂದ ವಿಚಾರ ಕಾರಂಜಿಯನ್ನು ಅಡ್ಡಾದಿಡ್ಡಿ ಚಿಮ್ಮಿಸುತ್ತಿದ್ದರು. ಅವರಿಗೆ ತತ್ ಕ್ಷಣಕ್ಕೆ ಈ ಎರಡು ಪ್ರಶ್ನೆ ಕೇಳಬೇಕಾಗಿದೆ.

* ಭ್ರಷ್ಟಾಚಾರದ ಹೊಲಸು ಹೊಂಡದಲ್ಲಿ ಮುಳುಗಿ ಏಳುತ್ತಿರುವ ಯಡಿಯೂರಪ್ಪ ಮತ್ತು ಅವರ ಹಲವಾರು ಹಲವು 'ಸಂಘಡಿಗ' ಸಚಿವರು ಬಂದದ್ದು ಎಲ್ಲಿಂದ ? ಆರೆಸ್ಸೆಸ್‌ನಿಂದಲ್ಲವೇ ?
* ಸದಾನಂದ ಗೌಡರ ಸರ್ಕಾರ ಬಳ್ಳಾರಿಯ ಗಣಿ ಹಗರಣದ ಕುರಿತ ಲೋಕಾಯುಕ್ತ ವರದಿಯನ್ನು ಒಪ್ಪಿಕೊಂಡಿದೆಯೇ ? ಇಲ್ಲ ತಿರಸ್ಕರಿಸಿದೆಯೇ ? ಹೇಳುವಿರಾ ?
* ಗೌಡರ ಸರ್ಕಾರ ಭ್ರಷ್ಟಾಚಾರ ರಹಿತ ಅಂತ ಈಗಲೇ ಹೇಗೆ ಹೇಳಲು ಸಾಧ್ಯ ? ಹೆಗ್ಗಣ ಸತ್ತ ತಕ್ಷಣ ವಾಸನೆ ಬರುತ್ತದೆಯೇ ?



ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ



ಕೃಪೆ: ಪ್ರಜಾವಾಣಿ

ಪಿಯುಸಿ ಪ್ರಶ್ನೆ ಪತ್ರಿಕೆ ಬಯಲು ಬಿಜೆಪಿ ಆಡಳಿತ ಭ್ರಷ್ಟ ಅಸಲು

ಪದವಿಪೂರ್ವ ಶಿಕ್ಷಣ ಎಂಬುದು ವಿದ್ಯಾರ್ಥಿಗಳ ಜೀವನದಲ್ಲಿ ಬಹಳ ಮಹತ್ವದ ಹಂತ. ಮತ್ತು ವಿದ್ಯಾರ್ಥಿ ಪೋಷಕರ ಮೇಲೆ ಈ ಹಂತದಲ್ಲಿ ನಾನಾ ರೀತಿಯ ಒತ್ತಡಗಳಿರುತ್ತವೆ. ಆಳುವ ಸರ್ಕಾರಗಳು ಈ ಪರಿಸ್ಥಿತಿಯಲ್ಲಿ ತುಂಬಾ ಜವಾಬ್ದಾರಿಯಿಂದ ವರ್ತಿಸಬೇಕು.

ಆದರೆ ಇಲ್ಲಿ ಏನಾಗಿದೆ. ಪರೀಕ್ಷೆಯ ಸನಿಹದಲ್ಲಿ ಪ್ರಶ್ನೆಪತ್ರಿಕೆಗಳು ಸೋರಿ ಹೊಗಿ ಪರೀಕ್ಷೆಗಳನ್ನು ಮುಂದೆ ಹಾಕಲಾಗಿದೆ. ಮೊದಲೇ ಒತ್ತಡಗಳಲ್ಲಿದ್ದವರಿಗೆ ಇನ್ನಷ್ಟು ಚಿಂತೆಯ ಹೊರೆ. ಇಲ್ಲಿ ಯಾಕೆ ವಿಗ್ನಾನ ವಿಷಯದ ಪತ್ರಿಕೆಗಳೆ ಬಯಲಾದವು ? ಇದರ ಹಿಂದೆ ಖಾಸಗಿ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಗಳ ಲಾಬಿ ಇದೆ ಅಂತ ಅರೋಪಗಳು ಕೇಳಿ ಬಂದಿವೆ. ಸರ್ಕಾರಕ್ಕೆ ಇಷ್ಟವಾಗದ ಪಿಯು ಮಂಡಳಿಯ ದಕ್ಷ ಅಧಿಕಾರಿಯೊಬ್ಬರ ಎತ್ತಂಗಡಿಗಾಗಿ ಇವೆಲ್ಲಾ ನಡೆದಿವೆ ಎಂಬ ಗುಸುಗುಸುಗಳೂ ಕೂಡ ಕೇಳಿ ಬರುತ್ತಿವೆ. ಯಾವುದು ನಿಜ ? ಎರಡೂ ನಿಜವಾ ?

ಪ್ರಶ್ನ ಪತ್ರಿಕೆಗಳು ಈ ಹಿಂದೆಯೂ ಸೋರಿ ಬಯಲಾಗುತ್ತಿದ್ದವು. ಆದರೆ ಇಷ್ಟೊಂದು ಸಂಖ್ಯೆಯಲ್ಲಿ ಆಗಿರಲಿಲ್ಲ. ರಾಜ್ಯ ಬಿಜೆಪಿ ಸರ್ಕಾರದ ದರ್ಬಾರ್‌ನಲ್ಲಿ ಗಣಿ ಲೂಟಿ, ಭೂಗಳ್ಳತನ ಮುಂತಾದವುಗಳಲ್ಲಿ ವಿಶೇಷ ಪ್ರಗತಿ ಸಾಧಿಸಲಾಗಿರುವಂತೆ ಪ್ರಶ್ನ ಪ್ರತ್ರಿಕೆ ಬಯಲು ಹಗರಣದಲ್ಲಿಯೂ ವಿಶೇಷ ಪ್ರಗತಿ. ಶಹಬ್ಬಾಸ್ !! ಕಾಗೇರಿಯವರೇ !! ಶಹಬ್ಬಾಸ್ ಸದಾನಂದ ಗೌಡರೇ. !!!

ಸದ್ದಿಲ್ಲದೆ ಬದಲಾದ ತುಮಕೂರು ವಿವಿ ಲಾಂಛನ–ಮರೆಯಾದ ಜಿಲ್ಲೆಯ ಐತಿಹಾಸಿಕ ಚಿಹ್ನೆಗಳು

ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಉದಯವಾದ ತುಮಕೂರು ವಿಶ್ವವಿದ್ಯಾಲಯದ ಲಾಂಚನ ಮತ್ತು ಘೋಷ ವಾಕ್ಯ ಸದ್ದಿಲ್ಲದೆ ಬದಲಾಗಿದೆ. ಪ್ರಾದೇಶಿಕ ಚಿಹ್ನೆಗಳಿಗೆ ಬದಲಿಗೆ ಆಧ್ಯಾತ್ಮಿಕ ಅರ್ಥವನ್ನು ನೀಡುವಂತಹ ಚಿಹ್ನೆ ಮತ್ತು ಘೋಷ ವಾಕ್ಯ ಕಂಡು ಬಂದಿದೆ.

ಬೆಂಗಳೂರು ವಿವಿಯ ಮೇಲಿನ ಹೊರೆಯನ್ನು ಕಡಿಮೆ ಮಾಡುವ ದೃಷ್ಠಿಯಿಂದ ತುಮಕೂರನ್ನು ಕೇಂದ್ರವಾಗಿಟ್ಟುಕೊಂಡು 2004ರಲ್ಲಿ ತುಮಕೂರು ವಿವಿ ಆರಂಭಿಸಲಾಯಿತು. ಇದಕ್ಕೆ ಅಂದಿನ ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ.ಜಿ.ಪರಮೇಶ್ವರ್ ಅವರು ಸಾಕಷ್ಟು ಶ್ರಮ ವಹಿಸಿದ್ದರು.

ವಿವಿಗೆ ಮೊದಲ ಕುಲಪತಿಯಾಗಿ ನೇಮಕಗೊಂಡ ತುಮಕೂರು ಜಿಲ್ಲೆಯವರೇ ಆದ ಡಾ. ಓ.ಅನಂತರಾಮಯ್ಯ ಮತ್ತು ಜಿಲ್ಲೆಯ ಶಿಕ್ಷಣ ತಜ್ಞರು, ಚಿಂತಕರು, ಜನಸಾಮಾನ್ಯರು ಸೇರಿ ಜಿಲ್ಲೆಯ ಇತಿಹಾಸ, ಭೌಗೋಳಿಕ ಪರಿಸರ, ಸಂಸ್ಕೃತಿ, ಪ್ರಸಿದ್ಧ ಸ್ಥಳ ಹಾಗೂ ಪ್ರಮುಖ ಬೆಳೆಯನ್ನು ಕೇಂದ್ರವಾಗಿಟ್ಟುಕೊಂಡು ವಿವಿಯ ಲಾಂಛನವೊಂದನ್ನು ಸಿದ್ದಪಡಿಸಿದ್ದರು. ಅದರಲ್ಲಿ ಜ್ಞಾನದ ಸಂಕೇತವಾಗಿ ಜ್ಯೋತಿ, ತೆಂಗು, ಮಧುಗಿರಿ ಏಕಶಿಲಾ ಬೆಟ್ಟ, ತುಮಕೂರು ಎಂಬ ಹೆಸರು ಬರಲು ಕಾರಣ ಎರದು ಹೇಳಲಾಗುವ ತುಂಬೆ ಹೂವು, 'ಟುಮುಕಿ ಚಿಹ್ನೆಗಳನ್ನೊಳಗೊಂಡ ಲಾಂಛನ ಸಿದ್ದಪಡಿಸಿ ಘೋಷ ವಾಕ್ಯವಾಗಿ "ಜ್ಞಾನವೇ ಅನಂತ"(ಏಟಿಂತಿಟಜಜರಿಜ ಇಣಜಡಿಟಿಚಿಟ) ಎಂಬ ಪದವನ್ನು ಬಳಕೆ ಮಾಡಿಕೊಳ್ಳಲಾಗಿತ್ತು. 2007ರ ಜನವರಿ ತಿಂಗಳ ಮೊದಲ ವಾರದಲ್ಲಿ ಅಂದಿನ ರಾಜ್ಯಪಾಲ ರಾಮೇಶ್ವರ ಠಾಕೂರ್ ಅಧಿಕೃತವಾಗಿ ವಿವಿಯನ್ನು ಲಾಂಛನದ ಸಮೇತ ಉದ್ಘಾಟನೆಗೊಳಿಸಿದ್ದರು.

ಜಿಲ್ಲೆಯ ಪ್ರಾದೇಶಿಕ ಇತಿಹಾಸ ಬಿಂಬಿಸುವ ತುಮಕೂರು ವಿವಿ ಲಾಂಛನ ಇದೀಗ ಬದಲಾಗಿದ್ದು ಯಾರ ಗಮನಕ್ಕೂ ಬಾರದಂತೆ ಹೊಸ ಲಾಂಛನ ವಿವಿಯ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಆದರೆ ವಿವಿಯ ಹೊರ ಭಾಗದಲ್ಲಿ ನಲ್ಲಿಸಲಾಗಿರುವ ಸ್ವಾಗತ ಕಮಾನುಗಳಲ್ಲಿ, ವಿವಿ ಕುಲಪತಿ ಸೇರಿದಂತೆ ವಿವಿಯ ಇತರೆ ಕಚೇರಿಗಳಲ್ಲಿ ಇನ್ನೂ ಹಳೆಯ ಲಾಂಛನವೇ ಬಳಕೆಯಲ್ಲಿದೆ. ಆದರೂ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ಏಕೆ ಹೊಸ ಲಾಂಛನ ಬಳಸಲಾಗುತ್ತಿದೆ ಎಂಬುದಕ್ಕೆ ವಿವಿ ಯಾವುದೇ ಸ್ಪಷ್ಟೀಕರಣ ನೀಡಿಲ್ಲ. ಇದು ಸಾಕಷ್ಟು ಚರ್ಚೆಗೆ ಗ್ರಾಸ ಮಾಡಿಕೊಟ್ಟಿದೆ.

ಹೊಸ ಲಾಂಛನ ಪಿರಮಿಡ್ ಆಕೃತಿಯಲ್ಲಿದ್ದು, ಅದರ ಒಳ ಭಾಗದಲ್ಲಿ ಅರಳಿ ನಂತಿರುವ ಕಮಲದ ಹೂವಿನ ಮೇಲೆ ಉದಯಿಸುತ್ತಿರುವ ಸೂರ್ಯ, ಅದರ ಮೇಲೆ ಜ್ಯೋತಿ ಇದ್ದು ಮತ್ತೂ ಮೇಲ್ಭಾಗದಲ್ಲಿ ಅಣುಶಕ್ತಿಯ ಸಂಕೇತ ಬಳಸಲಾಗಿದೆ. ಘೋಷ ವಾಕ್ಯವಾಗಿ "ಸೇವಾಸ್ತು ಮೇ ಜ್ಞಾನ ವಿಜ್ಞಾನ ಧಾರಾ" ಎಂಬ ಸಂಸ್ಕೃತ ವಾಕ್ಯವನ್ನು ಬಳಸಲಾಗಿದೆ. ಇದೆಲ್ಲವನ್ನೂ ನೋಡಿದರೆ ಕಮಲದ ಹೂ ಬಿಜೆಪಿ ಪಕ್ಷದ ಚಿಹ್ನೆಯಾಗಿ, ಉದಯಿಸುತ್ತಿರುವ ಸೂರ್ಯ ರಾಜ್ಯದಲ್ಲಿ ಬಿಜೆಪಿ ಹಾಗೂ ಹಿಂದೂ ಧರ್ಮ ಪ್ರವರ್ಧಮಾನಕ್ಕೆ ಬರುತ್ತಿದೆ ಎಂಬ ಅರ್ಥ ಬರುವಂತೆ ಬಳಸಲಾಗಿದೆ ಎಂಬ ಅನುಮಾನಗಳನ್ನು ಹುಟ್ಟು ಹಾಕಿದೆ. ಹಾಗೆಯೇ ಭಾರತ ಅಣುಶಕ್ತಿಯಲ್ಲಿ ಮುಂಚೂಣಿಯಲ್ಲಿದೆ ಎನ್ನುವುದನ್ನು ಇಲ್ಲಿ ಬಳಸಿರುವ ಚಿಹ್ನೆಯಿಂದ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದ್ದನ್ನು ಇಲ್ಲಿ ಪರೋಕ್ಷವಾಗಿ ಹೇಳಲಾಗಿದೆ.

ಭವಿಷ್ಯನಿಧಿ ಪಿಂಚಣಿದಾರರಿಂದ ಪಾರ್ಲಿಮೆಂಟು ಎದುರು ಸತ್ಯಾಗ್ರಹ

ಭವಿಷ್ಯನಿಧಿ ಪಿಂಚಣಿ ಪರಿಷ್ಕರಣೆ ಮಾಡಬೇಕು, ತಿಂಗಳಿಗೆ ಕನಿಷ್ಠ ರೂ.3000/ ಪಿಂಚಣಿ ನಿಗದಿಗೊಳಿಸಬೇಕು. ಪಿಂಚಣಿಗೆ ತುಟ್ಟಿಭತ್ತೆ ಅನ್ವಯಗೊಳಿಸಬೇಕು ಇತ್ಯಾದಿ 8 ಬೇಡಿಕೆಗಳನ್ನು ಮುಂದಿಟ್ಟು ಮಾರ್ಚ್ 13 ರಂದು ಪಾರ್ಲಿಮೆಂಟು ಮುಂದೆ ಒಂದು ದಿನದ ಅನ್ನಸತ್ಯಾಗ್ರಹ ನಡೆಯಿತು.

ಪಿಂಚಣಿದಾರರ ಬೇಡಿಕೆಗಳನ್ನು ಬೆಂಬಲಿಸಿ ವಿವಿಧ ರಾಜಕೀಯ ಪಕ್ಷಗಳ ಹತ್ತು ಸಂಸತ್ ಸದಸ್ಯರು ಸತ್ಯಾಗ್ರಹದಲ್ಲಿ ಭಾಗವಹಿಸಿ ಬಜೆಟ್ ಅಧಿವೇಶನದಲ್ಲಿಯೇ ಪಿಂಚಣಿ ಪ್ರಸ್ತಾಪ ಎತ್ತುವುದಾಗಿ ಭರವಸೆ ನೀಡಿದರು. ಸಂಸತ್ ಸದಸ್ಯರುಗಳಾದ ಕಾಂಗ್ರೆಸಿನ ಡಾ.ಸಂಜೀವ ರೆಡ್ಡಿ, ಎಂ.ಕೆ.ರಾಘವನ್, ರಾಜೇಶ್, ಸುರೇಶ್, ಸಿಪಿಐ(ಎಂ)ನ ಸಂಸತ್ ಸದಸ್ಯರುಗಳಾದ ಕೆ.ಕರುಣಾಕರನ್, ಸಂಪತ್, ಬಿಜು, ಟಿ.ಕೆ.ರಂಗರಾಜನ್, ಸಿಪಿಐನ ರಾಜ್ಯ ಸಭಾ ಸದಸ್ಯರಾದ ಅಚ್ಯುತ, ಮುಸ್ಲಿಂ ಲೀಗಿನ ಸಂಸತ್ ಸದಸ್ಯರಾದ ಮೊಹಮ್ಮದ್ ಬಶೀರ್, ನಾಮ ನಿರ್ದೇಶಿತ ಸಂಸತ್ ಸದಸ್ಯ ಚಾರ್ಲ್ಸ್ ಡಯಾಸ್ ಅಲ್ಲದೆ ಸಿಐಟಿ ಸದಸ್ಯರುಗಳಾದ ಸಿಐಟಿಯುನ ದೀಪಾಂಕರ್ ಮುಖರ್ಜಿ, ಬಿಎಂಎಸ್‌ನ ಪವನ್ ಕುಮಾರ್, ಎಐಟಿಯುಸಿನ ಸಚ್‌ದೇವ್ ಇವರು ಪಿಂಚಣಿದಾರರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಪಾರ್ಲಿಮೆಂಟ್ ಮುಂದೆ ನಡೆದ ಈ ಸತ್ಯಾಗ್ರಹದಲ್ಲಿ ಕರ್ನಾಟಕ ರಾಜ್ಯದಿಂದಲೂ ಪಿಂಚಣಿದಾರರು ಭಾಗವಹಿಸಿದ್ದು, ನಿವೃತ್ತ ಬೀಡಿ ಕಾರ್ಮಿಕರೇ ಹೆಚ್ಚಾಗಿರುವ 50ಕ್ಕೂ ಮೀರಿದ ದಕ್ಷಿಣ ಕನ್ನಡ ಜಿಲ್ಲೆಯ ತಂಡವೂ ಭಾಗವಹಿಸಿತ್ತು. ಕರ್ನಾಟಕ ರಾಜ್ಯ ಭವಿಷ್ಯನಿಧಿ ಪಿಂಚಣಿದಾರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಸುಕುಮಾರ್ ತೊಕ್ಕೋಟು ಇವರು ತಂಡದ ನೇತೃತ್ವ ವಹಿಸಿದ್ದರು.

ಪಿಂಚಣಿ ನಿಧಿಗೆ ಸರಕಾರದ ಪಾಲನ್ನು 5%ಕ್ಕೂ ಮಾಲಕರ ಪಾಲನ್ನು 10%ಕ್ಕೂ ಏರಿಸಿದರೆ ಪಿಂಚಣಿ ಸುಧಾರಣೆ ಮಾಡಬಹುದು. ಬದಲಾಗಿ ಕಾರ್ಮಿಕರ ಹಣವನ್ನೇ ಮುರಿದು ಕಾರ್ಮಿಕರಿಗೆ ಪಿಂಚಣಿ ಕೋರುವ ಯೋಜನೆಯನ್ನು ಉನ್ನತ ಅಧಿಕಾರಿಗಳು ರೂಪಿಸಿದ್ದಾರೆ. ಅದನ್ನು ಹೋರಾಟದ ಮೂಲಕ ಸೋಲಿಸಬೇಕೆಂದು ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದ ಮುಖಂಡರು ಕರೆ ನೀಡಿದರು.

ಪಿಂಚಣಿದಾರರು ಅಲ್ಲದೆ ಭವಿಷ್ಯನಿಧಿಯ ಚಂದಾದಾರರು ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಸತ್ಯಾಗ್ರಹಿಗಳನ್ನುದ್ದೇಶಿಸಿ ಕೇರಳದಿಂದ ಪವಿತ್ರನ್, ಉನ್ನಿಕುಟ್ಟು, ಬಾಲಕೃಷ್ಣನ್, ಕರ್ನಾಟಕದಿಂದ ಸುಕುಮಾರ್ ತೊಕ್ಕೋಟು, ದೆಹಲಿಯಿಂದ ರಾಜೀವ್ ದಿಮ್ರಿ, ತಮಿಳುನಾಡಿನಿಂದ ಅಲಂಗಾರು ಸ್ವಾಮಿ, ಮಹಾರಾಷ್ಟ್ರದಿಂದ ಉದಯಭಟ್, ಉತ್ತರಪ್ರದೇಶದಿಂದ ಅಮರ್‌ಗುಪ್ತಾ ಮತ್ತು ಭೂಧರ್ ನಾರಾಯಣ ಮಿಶ್ರ ಮಾತನಾಡಿದರು. 7 ರಾಜ್ಯಗಳಿಂದ ಬಂದಿದ್ದ ಸಾವಿರಕ್ಕೂ ಮಿಕ್ಕಿ ಪಿಂಚಣಿದಾರರು ಅನ್ನಸತ್ಯಾಗ್ರಹದಲ್ಲಿ ಭಾಗವಹಿಸಿದರು.

ವರದಿ:ಸುಕುಮಾರ್ ತೊಕ್ಕೋಟು

ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನಕ್ಕೆ ಸ್ವಾಗತ ಸಮಿತಿ ರಚನೆ

ಸಿಐಟಿಯುಗೆ ಸಂಯೋಜನೆಗೊಂಡಿರುವ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್‌ನ 4ನೇ ರಾಜ್ಯ ಸಮ್ಮೇಳನವು ಮೇ 8 ಮತ್ತು 9 ರಂದು ಮಂಗಳೂರಿನಲ್ಲಿ ನಡೆಯಲಿದೆ. ಈ ಸಂಬಂಧವಾದ ಸಮ್ಮೇಳನ ಸ್ವಾಗತ ಸಮಿತಿ ರಚನಾ ಸಭೆಯನ್ನು ಬೀಡಿ ಕಾರ್ಮಿಕರ ಫೆಡರೇಶನ್ನಿನ ದ.ಕ.ಜಿಲ್ಲಾ ಸಮಿತಿಯು ಮಾರ್ಚ್ 19ರಂದು ಮಂಗಳೂರಿನ ಸಿಐಟಿಯು ಮೈದಾನ್ ಕಚೇರಿಯಲ್ಲಿ ಏರ್ಪಡಿಸಿತ್ತು.

ಅಖಿಲ ಭಾರತ ಬೀಡಿ ಕಾರ್ಮಿಕರ ಫೆಡರೇಶನ್ನಿನ ಅಧ್ಯಕ್ಷರಾದ ಬಿ.ಮಾಧವ ಅವರು ರಾಜ್ಯ ಸಮ್ಮೇಳನವನ್ನು ಮಂಗಳೂರಿನಲ್ಲಿ ಹಮ್ಮಿಕೊಂಡಿರುವ ಹಿನ್ನೆಲೆಯನ್ನು ಸಭಿಕರಿಗೆ ವಿವರಿಸಿದರು. ಫೆಡರೇಶನ್ನಿನ ಜಿಲ್ಲಾಧ್ಯಕ್ಷರಾದ ಬಿ.ಎಂ.ಭಟ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಸಿಐಟಿಯು ಹಿರಿಯ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ರನ್ನು ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ಜೆ.ಬಾಲಕೃಷ್ಣ ಶೆಟ್ಟಿ, ಕೋಶಾಧಿಕಾರಿಯಾಗಿ ಬಿ.ಎಂ.ಭಟ್ ಆಯ್ಕೆಯಾಗಿದ್ದಾರೆ. ವಿವಿಧ ಉಪಸಮಿತಿಗಳನ್ನು ಇದೇ ಸಂದರ್ಭದಲ್ಲಿ ರಚಿಸಲಾಯ್ತು.

ಬೀಡಿ ಕಾರ್ಮಿಕರ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಕೋಶಾಧಿಕಾರಿ ಜಯಂತ ನಾಯಕ್ ವಂದಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಮಿಕ ಮುಖಂಡರಾದ ಯು.ಬಿ.ಲೋಕಯ್ಯ, ಸುನಿಲ್ ಕುಮಾರ್ ಬಜಾಲ್, ಸಂಜೀವ ಬಂಗೇರ, ಬಾಬು ದೇವಾಡಿಗ, ಪದ್ಮಾವತಿ ಶೆಟ್ಟಿ, ರಾಮಣ್ಣ ವಿಟ್ಲ, ರೈತ ಮುಖಂಡರಾದ ಯಾದವ ಶೆಟ್ಟಿ, ಖ್ಯಾತ ನ್ಯಾಯವಾದಿ ಯಶವಂತ ಮರೋಳಿ, ಮಹಾನಗರ ಪಾಲಿಕೆ ಸದಸ್ಯೆ ಜಯಂತಿ ಬಿ.ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಕುಡಿಯಯುವ ನೀರಿಗಾಗಿ ಹರೇಕಳ ಗ್ರಾಮ ಪಂಚಾಯತ್‌ಗೆ ಮುತ್ತಿಗೆ

ಹರೇಕಳ ಗ್ರಾಮದ ಬೈತಾರ್, ಕೊಜಪಾಡಿ ಸೈಟ್, ನ್ಯೂಪಡ್ಪು, ಮಲಾರ್‌ಕೋಡಿ, ನಾಗಮೂಲೆ ದಲಿತ ಕಾಲೊನಿ, ಮಲೆಕೆದು, ಬಾವಲಿಗುರಿ ಮುಂತಾದ ಪರಿಸರದಲ್ಲಿ 15 ದಿನಗಳಿಂದ ನೀರಿನ ಸರಬರಾಜು ಆಗಿರಲಿಲ್ಲ. ಅಧಿಕಾರಿಗಳಿಗೆ ಮನವಿ ಮಾಡಿ ಬೇಸತ್ತ ನಾಗರಿಕರು ಮಾರ್ಚ್ 20 ರಂದು ಡಿವೈಎಫ್‌ಐ ನೇತೃತ್ವದಲ್ಲಿ ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಿ ಧರಣಿ ನಡೆಸಿದರು. ಪಂಚಾಯತ್ ಅಧ್ಯಕ್ಷರು ಹಾಗೂ ಮೂವರು ಸದಸ್ಯರು ಆಗಮಿಸಿ ಪೋಲೀಸರ ಸಮ್ಮುಖ ಮಾತುಕತೆ ಭರವಸೆ ನೀಡುವವರೆಗೂ ದಿಗ್ಬಂಧನವನ್ನು ಮುಂದುವರೆಸಲಾಯಿತು. ಬರಿಗೊಡಗಳೊಂದಿಗೆ ಮಹಿಳೆಯರೂ ಮುತ್ತಿಗೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ದ.ಕ. ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಪ್ರತಿಭಟನೆಯಲ್ಲಿ ಡಿವೈಎಫ್‌ಐ ಗ್ರಾಮ ಸಮಿತಿ ಅಧ್ಯಕ್ಷ ಇಸ್ಮಾಯಿಲ್, ಪ್ರಧಾನ ಕಾರ್ಯದರ್ಶಿ ರಫೀಕ್, ಇಮ್ರಾನ್, ಮಾಜಿ ಪಂಚಾಯತ್ ಸದಸ್ಯೆ ಯಮುನಾ ಮುಂತಾದವರು ಭಾಗವಹಿಸಿದ್ದರು.


ಕಲ್ಲಿದ್ದಲು ಗಣಿಗಳ ಅಂದಾದುಂದಿ ಹಂಚಿಕೆ

ಮತ್ತೊಂದು ಹಗರಣ-ಮತ್ತೊಂದು ನಿರಾಕರಣೆ



ವೇದರಾಜ ಎನ್.ಕೆ.

ಯುಪಿಎ-2 ಎದುರಿಸುತ್ತಿರುವ ಹಗರಣಗಳಿಗೆ ಕೊನೆಯೇ ಇದ್ದಂತಿಲ್ಲ-ಒಂದಾದ ಮೇಲೆ ಒಂದು ಬಯಲಾಗುತ್ತಲೇ ಇವೆ. 1.76ಲಕ್ಷ ಕೋಟಿ ರೂ.ಗಳ 2ಜಿ ತರಂಗಾಂತರ ಹಂಚಿಕೆ ಹಗರಣ ನಿಜವಾಗಿಯೂ ದೊಡ್ಡ ಹಗರಣವೇ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ತೀರ್ಪಿತ್ತು ಆ ಹಂಚಿಕೆಯನ್ನೇ ರದ್ದು ಮಾಡಿದೆ. ಆ ತೀರ್ಪಿನ ಪುನರ್ವಿಮರ್ಶೆಯನ್ನು ಯುಪಿಎ ಸರಕಾರ ಕೇಳಲು ಮುಂದಾಗಿರುವಂತೆಯೇ ಈಗ ಅದರ ಆರು ಪಟ್ಟು ದೊಡ್ಡದಾದ ಇನ್ನೊಂದು ಹಗರಣ ಬೆಳಕಿಗೆ ಬರುತ್ತಿದೆ.



2004 ಮತ್ತು 2009ರ ನಡುವೆ 155 ಕಲ್ಲಿದ್ದಲು ಬ್ಲಾಕುಗಳನ್ನು ಸ್ಪರ್ಧಾತ್ಮಕ ಹರಾಜು ಇಲ್ಲದೆ ನೀಡಲಾಗಿದ್ದು ಇದರಿಂದ ಸರಕಾರದ ಬೊಕ್ಕಸಕ್ಕೆ 10.67 ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ, ಇದರ ಫಲವಾಗಿ ಹಲವು ಖಾಸಗಿ ಕಂಪನಿಗಳು ಇದ್ದಕ್ಕಿದ್ದಂತೆ 4.79ಲಕ್ಷ ಕೋಟಿ ರೂ.ಗಳನ್ನು ಗಳಿಸಿವೆ ಎಂಬುದು ಭಾರತದ ಮಹಾಲೆಕ್ಕ ಪರಿಶೋಧನಾಧಿಕಾರಿ ಕಚೇರಿಯ ಗಮನಕ್ಕೆ ಬಂದಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಜತೆಗೇ 2ಜಿ ಹಗರಣದಲ್ಲಿ ಆದಂತೆಯೇ, ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಇಂತಹ ಒಂದು ಹಗರಣ ನಡೆದೇ ಇಲ್ಲ, ಇದು ಕೇವಲ ಕಾಲ್ಪನಿಕ ಎಂದು ಹೇಳಿಕೆ ನೀಡಿದ್ದಾರೆ. ಪ್ರಧಾನಮಂತ್ರಿಗಳ ಕಚೇರಿ ತಮಗೆ ಸಿಎಜಿ ಬರೆದ ಪತ್ರವನ್ನು ಭಾಗಶಃ ಬಿಡುಗಡೆ ಮಾಡಿ ಸ್ವತಃ ಸಿಎಜಿಯವರೇ ಈ ಬಗ್ಗೆ ಮುಜುಗರ ಹಾಗೂ ಆಳವಾದ ಆತಂಕ ವ್ಯಕ್ತಪಡಿಸಿದ್ದು, ಅಧ್ಯಯನ ಇನ್ನೂ ನಡೆಯುತ್ತಿದ್ದು, ಅಂತಿಮ ವರದಿ ಬೇರೆಯೇ ಆಗಿರುವ ಸಾಧ್ಯತೆ ಇದೆ ಎಂದು ಹೇಳಿರುವುದಾಗಿ ತಿಳಿಸಿದೆ. ಇದನ್ನೇ ಕಲ್ಲಿದ್ದಲು ಮಂತ್ರಿಗಳು ತಮ್ಮ ಸಮರ್ಥನೆಗೆ ಬಳಸಿದ್ದಾರೆ. ಆದರೆ 'ಭಾಗಶಃ' ಎಂದರೇನು, ಅವರಿಗೆ ಅನುಕೂಲಕರವೆನಿಸುವ 'ಭಾಗ' ಎಂದಿರಬಹುದೇ ಎಂಬ ಸಂದೇಹ ಹಲವರಿಗೆ ಉಂಟಾಗಿದೆ. 2ಜಿಯ ಅನುಭವವಂತೂ ಇದ್ದೇ ಇದೆ.

2004ರಲ್ಲಿಯೇ ಪ್ರಧಾನ ಮಂತ್ರಿಗಳು ಸ್ಪರ್ಧಾತ್ಮಕ ಹಂಚಿಕೆಗೆ ತಾತ್ವಿಕವಾಗಿ ಒಪ್ಪಿದ್ದರೂ ಇದೊಂದು ಕ್ಲಿಷ್ಟ ಸಂಗತಿಯಾದ್ದರಿಂದ ತಕ್ಷಣವೇ ಇದಕ್ಕೇ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವುದು ಸಾಧ್ಯವಿರಲಿಲ್ಲವಾದ್ದರಿಂದ ಹಾಗೆಯೇ ಹಂಚಲಾಗಿತ್ತು, ಆದರೆ ಇದರಿಂದ ಸರಕಾರೀ ಬೊಕ್ಕಸಕ್ಕೆ ನಷ್ಟವೇನೂ ಆಗಿಲ್ಲ ಎಂದಿರುವ ಮಂತ್ರಿಗಳು ಇನ್ನೆರಡು ಮೂರು ತಿಂಗಳಲ್ಲಿ (8ವರ್ಷಗಳ ನಂತರ!) ಇದು ಸಿದ್ಧವಾಗಿರುತ್ತದೆ, ಆಮೇಲೆ ಸ್ಪರ್ಧಾತ್ಮಕ ಹಂಚಿಕೆಯಿರುತ್ತದೆ ಎಂದಿದ್ದಾರೆ. ಆದರೆ ಹೀಗೆ ಪಡೆದ ಖಾಸಗೀ ಕಂಪನಿಗಳು ಇದ್ದಕ್ಕಿದ್ದಂತೆ 4.79 ಲಕ್ಷ ಕೋಟಿ ಲಾಭ ಮಾಡಿಕೊಂಡಿರುವ ಬಗ್ಗೆ ಅವರೇನೂ ಹೇಳಿಲ್ಲ.

ಕಲ್ಲಿದ್ದಲು ಒಂದು ನೈಸರ್ಗಿಕ ಸಂಪನ್ಮೂಲವಾಗಿದ್ದು ಅದನ್ನು ಖಾಸಗಿ ಕಂಪನಿಗಳಿಗೆ ಅತ್ಯಂತ ಅಗ್ಗದಲ್ಲಿ ಮಾರಲು ಸಾಧ್ಯವಿಲ್ಲ. ಈ ನೀತಿಯನ್ನು ಇತ್ತೀಚೆಗೆ ಸುಪ್ರಿಂ ಕೋರ್ಟ್ ತನ್ನ 2ಜಿ ತೀರ್ಪಿನಲ್ಲಿ ಪುನರುಚ್ಚರಿಸಿದೆ, ಇಂತಹ ಸಂಪನ್ಮೂಲಗಳ ರಕ್ಷಕನಾಗಿ ಸರಕಾರ ಅವನ್ನು ಒಂದು ಪಾರದರ್ಶಕ ಸ್ಪರ್ಧಾತ್ಮಕ ಹರಾಜಿಲ್ಲದೆ ಮಾರುವಂತಿಲ್ಲ ಎಂದು ಹೇಳಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ಸಂದರ್ಭದಲ್ಲಿ ನೆನಪಿಸಿದೆ.

ಈ ಕಲ್ಲಿದ್ದಲು ಬ್ಲಾಕುಗಳಲ್ಲಿ ಕೆಲವನ್ನು ಸಾರ್ವಜನಿಕ ವಲಯದ ಕಂಪನಿಗಳಿಗೂ ಕೊಡಲಾಗಿದೆಯಲ್ಲಾ ಎಂದು ನವ-ಉದಾರವಾದಿಗಳು ಕ್ಯಾತೆ ತೆಗೆಯುತ್ತಿದ್ದಾರೆ. ಆದರೆ ಅವು ಈ ಮೂಲಕ ವಿದ್ಯುತ್ತನ್ನು ತರ್ಕಪೂರ್ಣ ಬೆಲೆಗಳಲ್ಲಿ ಒದಗಿಸಲು ನೆರವಾಗಿ ತಮ್ಮ ಸಾಮಾಜಿಕ ಪಾತ್ರವನ್ನು ವಹಿಸುತ್ತಿವೆ, ಆದರೆ ಖಾಸಗೀ ಕಂಪನಿಗಳು ಮಾತ್ರ ಇದರಿಂದ ಸ್ವಂತಕ್ಕೇ ಅಪಾರ ಲಾಭ ಗಿಟ್ಟಿಸಿಕೊಂಡಿವೆ. ಇದು ಬೃಹತ್ ಹಗರಣವಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಹೇಳಿದೆ. ಇದು ಕೂಡ 2ಜಿ, ಕಾಮನ್ವೆಲ್ತ್ ಕ್ರೀಡೆಗಳು, ಕೆಜಿ ಅನಿಲ, ಏರ್ ಇಂಡಿಯಾ ಹಗರಣಗಳಂತೆ ನವ-ಉದಾರವಾದಿ ವ್ಯವಸ್ಥೆಯಲ್ಲಿ ಸೊಂಪಾಗಿ ಹರಡಿರುವ ದೊಡ್ಡ ಬಂಡವಾಳಶಾಹಿ-ರಾಜಕಾರಣಿ-ಅಧಿಕಾರಶಾಹಿ ದುಷ್ಟಕೂಟದ ದುಷ್ಫಲವಾಗಿದ್ದು ಸಿಎಜಿ ವರದಿಯನ್ನು ವಿಳಂಬವಿಲ್ಲದೆ ಸಂಸತ್ತಿನಲ್ಲಿ ಮಂಡಿಸಿ, ಬೊಕ್ಕಸಕ್ಕಾಗಿರುವ ನಷ್ಟವನ್ನು ಭರಿಸಲು ಕ್ರಮಗಳನ್ನು ವಹಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ●

ಅಂಬಾನಿ ಅನಿಲ ಕಂಪನಿ ಪರವಾಗಿ ಪ್ರಧಾನ ಮಂತ್ರಿ ಕಚೇರಿ ಮಧ್ಯಪ್ರವೇಶ ?

ಕೃಷ್ಣಾ-ಗೋದಾವರಿ ಬೇಸಿನ್ ಅನಿಲ ಬೆಲೆಗಳನ್ನು ಏರಿಸಬೇಕು ಎಂಬ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್) ಬೇಡಿಕೆಯನ್ನು ಅಸಮರ್ಥನೀಯ ಎಂದು ಯುಪಿಎ-2 ಸರಕಾರದ ಪೆಟ್ರೋಲಿಯಂ ಇಲಾಖೆ ತಿರಸ್ಕರಿಸಿತ್ತು. ಆದರೆ ಈ ವಿಷಯದಲ್ಲಿ ಈಗ ಪ್ರಧಾನ ಮಂತ್ರಿಗಳ ಕಚೇರಿ ಮಧ್ಯಪ್ರವೇಶಿಸಿ ಅದರ ಬಗ್ಗೆ ಮತ್ತೆ ವಿಚಾರ ಮಾಡುವಂತೆ ಹೇಳಿರುವುದಾಗಿ ವರದಿಯಾಗಿದೆ. ಇದು ನಿಜವಾಗಿದ್ದರೆ ನಿಜಕ್ಕೂ ಆತಂಕಕಾರಿ ಎಂದು ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೆನ್ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ, ಇಂತಹ ಮಧ್ಯಪ್ರವೇಶದ ಅಗತ್ಯವಾದರೂ ಏನು ಎಂದು ಅವರು ಪ್ರಶ್ನಿಸಿದ್ದಾರೆ.

ಈ ಹಿಂದೆ 2010ರಲ್ಲಿ ವಿಶೇಷಾಧಿಕಾರ ಹೊಂದಿದ ಮಂತ್ರಿಗಳ ಗುಂಪು ಕೂಡ ಇಂತಹುದೇ ಬೇಡಿಕೆಯನ್ನು ತಿರಸ್ಕರಿಸಿತ್ತು. ಕೆಜಿ ಡಿ6 ದರ ನಿಗದಿಯೇ ತರ್ಕಬದ್ಧವಾಗಿರಲಿಲ್ಲ. ಪ್ರತಿ ಮಿಲಿಯ ತಾಪ ಘಟಕಗಳಿಗೆ 4.2 ಡಾಲರ್ ಎಂಬ ದರ ನಮ್ಮ ಜಗತ್ಪ್ರಸಿದ್ಧ ಸಾರ್ವಜನಿಕ ವಲಯದ ಕಂಪನಿ ಎನ್‌ಟಿಪಿಸಿ ಯ ಹಿತಕ್ಕೆ ಧಕ್ಕೆ ತರುವಂತದ್ದಾಗಿತ್ತು. ಇವೆಲ್ಲ ಪ್ರಧಾನ ಮಂತ್ರಿಗಳಿಗೆ ತಿಳಿಯದ ವಿಷಯವೇನಲ್ಲ. ತಪನ್ ಸೆನ್ ಅವರೇ ಹಿಂದೆ ಹಲವು ಬಾರಿ ಅವರಿಗೆ ಬರೆದ ಪತ್ರಗಳಲ್ಲಿ ನೆನಪಿಸಿದ್ದ ಸಂಗತಿಗಳಿವು. ಅದೂ ಅಲ್ಲದೆ ಸಬ್ಸಿಡಿಗಳೆ ಹೊರೆ ವಿಪರೀತವಾಗಿದೆ ಎಂದು ದಿನಬೆಳಗಾದರೆ ಯುಪಿಎ-2 ಸರಕಾರ ಬೊಬ್ಬಿಡುತ್ತಿರುವಾಗ ಇದು ನಿಜಕ್ಕೂ ವಿಲಕ್ಷಣವೇ ಸರಿ. ಏಕೆಂದರೆ ರಿಲಯನ್ಸ್ ಬೇಡಿಕೆಯನ್ನು ಮನ್ನಿಸಿದರೆ ರಸಗೊಬ್ಬರ ಸಬ್ಸಿಡಿ ಹೆಚ್ಚುತ್ತದೆ, ಮತ್ತು ಗ್ರಾಹಕರು ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಆದರೂ ಪ್ರಧಾನ ಮಂತ್ರಿ ಕಚೇರಿ ಮಧ್ಯಪ್ರವೇಶಕ್ಕೆ ಮುಂದಾಗುತ್ತಿದ್ದರೆ ರಿಲಯನ್ಸ್ ಕಂಪನಿಯ ಒತ್ತಡವೇ ಕಾರಣ ಎಂಬುದು ಸ್ಪಷ್ಟ.

ಅಲ್ಲದೆ ಅನಿಲ ಉತ್ಪಾದನೆ/ಪೂರೈಕೆಯ ಒಬ್ಬ ಕಾಂಟ್ರಾಕ್ಟರ್ ಆಗಿ ಈ ಕಂಪನಿಯ ದಾಖಲೆ ಕೆಟ್ಟದಾಗಿದೆ. ಕವಾಸ-2 ಮತ್ತು ಗಾಂಧಾರ-2 ವಿದ್ಯುತ್ ಯೋಜನೆಗಳಿಗೆ ಅನಿಲ ಪೂರೈಕೆಗೆ ರಿಲಯನ್ಸ್ ಕಂಪನಿಯ ಬಿಡ್ ಅನ್ನು ಸ್ವೀಕರಿಸಲಾಗಿತ್ತು. ಆದರೆ ನಿಗದಿತ ದರದಲ್ಲಿ 17 ವರ್ಷಗಳ ಕಾಲ ಅನಿಲ ಪೂರೈಕೆಯ ಒಪ್ಪಂದಕ್ಕೆ ಸಹಿ ಹಾಕಲು ಅದು ನಿರಾಕರಿಸಿದ್ದರಿಂದ ಎನ್‌ಟಿಪಿಸಿ ಮುಂಬೈ ಹೈಕೋರ್ಟ್ ಮೆಟ್ಟಿಲೇರಬೇಕಾಗಿ ಬಂತು. ಇದರ ಪರಿಣಾಮವೆಂದರೆ 2,600 ಮೆಗಾವಾಟ್ ವಿದ್ಯುತ್ ಇನ್ನೂ ದೂರದ ಕನಸಾಗಿಯೇ ಉಳಿದಿದೆ.

ಈ ಕೆಜಿ ಡಿ6 ಕಾಂಟ್ರಾಕ್ಟಿನಲ್ಲೂ 31 ಅನಿಲ ಬಾವಿಗಳನ್ನು ಅದು ತೋಡಬೇಕಾಗಿತ್ತು. ಆದರೆ ತೋಡಿರುವುದು ಕೇವಲ 22. ಇದರಲ್ಲೂ ಈಗ ಅನಿಲ ಉತ್ಪಾದನೆಯಾಗುತ್ತಿರುವುದು ಕೇವಲ 13 ಬಾವಿಗಳಲ್ಲಿ. ಇದರಿಂದಾಗಿ ಅನಿಲ ಉತ್ಪಾದನೆ ಅರ್ಧಕ್ಕಿಳಿದಿದೆ. ಈ ರೀತಿ ಉತ್ಪಾದನೆ ಕಡಿತ ಮಾಡಿ ಈ ಕಂಪನಿ ದರ ಏರಿಕೆಯ ಒತ್ತಡ ಹಾಕುವ ತಂತ್ರ ಅನುಸರಿಸುತ್ತಿರುವುದು ಸ್ಪಷ್ಟ. ಆದರೂ ಇಂತಹ ಕೆಟ್ಟ ದಾಖಲೆಯ ಕಂಪನಿಯನ್ನು ಶಿಕ್ಷಿಸುವ ಬದಲು, ನಿಜವಾದ ಉತ್ಪಾದನಾ ಖರ್ಚನ್ನು ಪರಿಗಣಿಸದೆ ದರ ಏರಿಕೆಯ ಬಕ್ಷೀಸು ನೀಡಲು ಹೊರಟಿರುವುದು ಯಾವ ಸಾರ್ವಜನಿಕ ಹಿತಕ್ಕಾಗಿ ಎಂದು ಪ್ರಧಾನ ಮಂತ್ರಿಗಳು ದೇಶಕ್ಕೆ ಉತ್ತರಿಸಬೇಕಾಗಿದೆ ಎಂದು ಹೇಳಿರುವ ತಪನ್ ಸೆನ್ ಈ ಹಿನ್ನೆಲೆಯಲ್ಲಿ ಸೂಕ್ತವಾಗಿ ವರ್ತಿಸುವಂತೆ ತಮ್ಮ ಕಚೇರಿಗೆ ಸಲಹೆ ನೀಡಬೇಕು ಎಂದು ಆಗ್ರಹಿಸಿದ್ದಾರೆ. ●

ಯುಪಿಎ ದರ್ಬಾರ್.......

ವಿದೇಶಿ ಹಣಕಾಸು ಸಂಸ್ಥೆಯ ದರ್ಬಾರು

ಕಲ್ಲಿದ್ದಲು ಬ್ಲಾಕುಗಳ ಹಂಚಿಕೆಯ ಬಗ್ಗೆ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಹೇಳಿಕೆಗಳನ್ನು ನೀಡುತ್ತಿರುವ ಇದೇ ಕಲ್ಲಿದ್ದಲು ಮಂತ್ರಿಗಳು ಮತ್ತು ಇಲಾಖೆ ವಿದೇಶಿ ಹಣಕಾಸು ಸಂಸ್ಥೆಯೊಂದು ತನ್ನ ವಲಯದಲ್ಲಿ ನಡೆಸಿರುವ ಅಪಪ್ರಚಾರ, ಅಟಾಟೋಪದ ಬಗ್ಗೆ ದಿವ್ಯಮೌನ ತಳೆದಿದ್ದಾರೆ.

ಟಿಸಿಐ ಎಂಬ ಇಂಗ್ಲೆಂಡಿನ ಪಣಭದ್ರ (ಹೆಡ್ಜ್ ಫಂಡ್)ಸಂಸ್ಥೆ ಭಾರತದ ಸಾರ್ವಜನಿಕ ವಲಯದ ಕಲ್ಲಿದ್ದಲು ಕಂಪನಿ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಹಾಗೂ ಭಾರತದ ಕಲ್ಲಿದ್ದಲು ನಿಯಂತ್ರಣ ವ್ಯವಸ್ಥೆಗೆ ಸವಾಲೊಡ್ಡಿದೆ. 2010ರಲ್ಲಿ ಸಿಐಎಲ್ ನ ಶೇರು ವಿಕ್ರಯದಲ್ಲಿ 1ಶೇ.ವನ್ನು ಖರೀದಿಸಿರುವ ಈ ಸಂಸ್ಥೆ ಇದರಿಂದಾಗಿ ತನಗೆ ಹಣಕಾಸು ನಿರ್ವಹಣೆಯ ಅಧಿಕಾರವಿದೆಯೆಂದು ಹೇಳುತ್ತ ಈ ಕೇವಲ 1ಶೇ. ಪಾಲಿನ ಆಧಾರದಲ್ಲಿ ಭಾರತದ ಕಲ್ಲಿದ್ದಲು ಮತ್ತು ಇಂಧನ ಭದ್ರತೆಯ ಧೋರಣೆಗೇ ಸವಾಲೊಡ್ಡಿದೆ. ಸಿಐಎಲ್ ಆಡಳಿತ ಮಂಡಳಿಯಲ್ಲಿ ತ್ವರಿತ ಬದಲಾವಣೆ ತರಬೇಕು, ಕಲ್ಲಿದ್ದಲು ಬೆಲೆಗಳನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಏರಿಸಬೇಕು ಮತ್ತು ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯ ಮೇಲಿರುವ ನಿಯಂತ್ರಣಗಳನ್ನೆಲ್ಲ ತೆಗೆಯಬೇಕು ಎಂದು ಅದು ಆಗ್ರಹಿಸುತ್ತಿದೆ, ಇಲ್ಲವಾದರೆ ಅಂತರ್ರಾಷ್ಟ್ರೀಯ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆದರಿಸುತ್ತಿದೆ. ಮಾಧ್ಯಮಗಳ ಮೇಲಿರುವ ತನ್ನ ಪ್ರಭಾವವನ್ನು ಬಳಸಿ ಭಾರತದ ಸರಕಾರ ಮತ್ತು ಸಂಸದೀಯ ನಿಯಂತ್ರಣಗಳ ವಿರುದ್ಧವೇ ಅಪಪ್ರಚಾರ ನಡೆಸುತ್ತಿದ್ದರೂ ಯುಪಿಎ-2 ಸರಕಾರ ಮೌನವಾಗಿ ನೋಡುತ್ತಿದೆ ಎಂದು ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮತ್ತು ಸಿಐಟಿಯು ಕಾರ್ಯದರ್ಶಿಗಳಲ್ಲಿ ಒಬ್ಬರಾದ ಜೀಬನ್ ರಾಯ್ ನೀಡಿರುವ ಹೇಳಿಕೆಯಲ್ಲಿ ಆಪಾದಿಸಿದ್ದಾರೆ.

ಇತ್ತೀಚೆಗೆ ಜನವರಿ 31ರಂದು ಕಲ್ಲಿದ್ದಲು ಉದ್ದಿಮೆಯಲ್ಲಿ 9ನೇ ರಾಷ್ಟ್ರೀಯ ಕಲ್ಲಿದ್ದಲು ವೇತನ ಒಪ್ಪಂದ ಏರ್ಪಟ್ಟಿತ್ತು. ಇದು ಜಾರಿಯಾಗದಂತೆ ಮಾಡಲು ಸಿಐಎಲ್ ಆಡಳಿತ ಮಂಡಳಿಯಲ್ಲಿರುವ ಖಾಸಗಿ ವಲಯದ ಪ್ರತಿನಿಧಿಗಳು ಶತಪ್ರಯತ್ನ ನಡೆಸಿದರು. ಅದು ವಿಫಲವಾದ ನಂತರ ಈ ಟಿಸಿಐ ಇಂತಹ ದರ್ಬಾರು ನಡೆಸಲು ಆರಂಭಿಸಿದೆ ಎಂದು ಈ ಹೇಳಿಕೆ ತಿಳಿಸಿದೆ.

ತಮ್ಮ ಒಕ್ಕೂಟ ಸಿಐಎಲ್ ನ ನಿರ್ವಹಣೆಯನ್ನು ಉತ್ತಮ ಪಡಿಸಲು, ಕಲ್ಲಿದ್ದಲು ಬ್ಲಾಕುಗಳ ನೀಡಿಕೆಯಲ್ಲಿ, ಬೆಲೆ ನಿಗದಿಯಲ್ಲಿ ನಡೆಯುತ್ತಿರುವ ಅವ್ಯವಹಾರ, ಭ್ರಷ್ಟಾಚಾರಗಳ ವಿರುದ್ಧ ನಿರಂತರ ಪ್ರಚಾರ ನಡೆಸುತ್ತಿರುವಾಗಲೇ ವಿದೇಶಿ ಹಣಕಾಸು ಸಂಸ್ಥೆಯೊಂದು ಇದರ ದುರ್ಲಾಭ ಪಡೆಯಲು ಬಿಡುವುದಿಲ್ಲ, ಭಾರತದ ಇಂಧನ ಭದ್ರತೆಯಲ್ಲಿ ಕಲ್ಲಿದ್ದಲಿನ ಪಾಲು 70ಶೇ.ದಷ್ಟಿದ್ದು, ಇದರಲ್ಲಿ ಬಹುಪಾಲು ಸಾರ್ವಜನಿಕ ವಲಯದಲ್ಲಿದೆ ಯಾದ್ದರಿಂದ ಇದರಲ್ಲಿ ಕೈಯಾಡಿಸಲು ಬಿಡುವುದಿಲ್ಲ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ದುರಾಸೆಗಳಿಗೆ ನಮ್ಮ ದೇಶದ ಇಂಧನ ಭದ್ರತೆ ತುತ್ತಾಗಲು ಬಿಡಬಾರದು ಎಂದು ಅದು ಕಲ್ಲಿದ್ದಲು ಕಾರ್ಮಿಕರಿಗೆ, ಸಮಸ್ತ ಜನತೆಗೆ ಮತ್ತು ಭಾರತ ಸರಕಾರಕ್ಕೆ ಕರೆ ನೀಡಿದೆ.

ಜಗದಗಲ.......

ಶ್ರೀಲಂಕಾ ಸರ್ಕಾರಕ್ಕೆ ವಿಶ್ವ ಮಾನವ ಹಕ್ಕು ಮಂಡಳಿ ದೂಷಣೆ

ಶ್ರೀಲಂಕಾ ಸರ್ಕಾರ ತನ್ನ ಎಲ್.ಟಿ.ಟಿ.ಇ. ವಿರುದ್ಧ ಆಂತರಿಕ ಯುದ್ಧದಲ್ಲಿ, ಅದರಲ್ಲೂ ಪ್ರಮುಖವಾಗಿ ಕೊನೆಯ ಹಂತದಲ್ಲಿ ತೀವ್ರ ಮಾನವ ಹಕ್ಕುಗಳನ್ನು ಉಲ್ಲಂಘಿಸಿದೆ. ಅದರ ಬಗ್ಗೆ ತನಿಖೆಯೂ ಮಾಡಿಲ್ಲ. ಈ ಬಗ್ಗೆ ಅದೇ ನೇಮಿಸಿದ ಕಮಿಶನಿನ ಶಿಫಾರಸುಗಳನ್ನು ಜಾರಿ ಮಾಡಿಲ್ಲ ಎಂದು ಇತ್ತೀಚೆಗೆ ಸಭೆ ಸೇರಿದ್ದ ವಿಶ್ವ ಮಾನವ ಹಕ್ಕುಗಳ ಮಂಡಳಿ ದೂಷಣಾ ನಿರ್ಣಯವನ್ನು ಅಂಗೀಕರಿಸಿದೆ. ಅಮೆರಿಕ ಮಂಡಿಸಿದ ಈ ನಿರ್ಣಯಕ್ಕೆ ಭಾರತ ಬೆಂಬಲಿಸಿತು. ಭಾರತ ಈ ನಿರ್ಣಯವನ್ನು ಬೆಂಬಲಿಸದಂತೆ ಶ್ರೀಲಂಕಾ ಸರ್ಕಾರ ಭಾರೀ ರಾಜತಾಂತ್ರಿಕ ಸರ್ಕಸ್ ಮಾಡಿತ್ತು. ಶ್ರೀಲಂಕಾ ರಾಯಭಾರಿ ತಮಿಳುನಾಡಿನ ಪಾರ್ಲಿಮೆಂಟು ಸದಸ್ಯರು ಎಲ್.ಟಿ.ಟಿ.ಇ. ಭಯೋತ್ಪಾದನೆ ಬೆಂಬಲಿಗರು ಎಂಬ ಹೇಳಿಕೆ ನೀಡಿ ವಿವಾದ ಸೃಷ್ಟಿಸಿ ಆ ಮೇಲೆ ಕ್ಷಮಾಯಾಚನೆ ಮಾಡಬೇಕಾಯಿತು. 'ಹೊರಗಿನ ಮಾರ್ಗದರ್ಶನ-ಉಪದೇಶ ಅಗತ್ಯವಿಲ್ಲ' ಎಂಬ ಹೇಳಿಕೆ ಮೂಲಕ ಶ್ರೀಲಂಕಾ ಅಧ್ಯಕ್ಷರು ಈ ನಿರ್ಣಯಕ್ಕೆ ಸೆಡ್ಡು ಹೊಡೆದಿದ್ದಾರೆ.

ಈ ಮೊದಲು ಬ್ರಿಟಿಷ್ ಟಿವಿ ಚಾನೆಲ್-4, ಎಲ್.ಟಿ.ಟಿ.ಇ. ವಿರುದ್ಧ ಆಂತರಿಕ ಯುದ್ಧದ ಕೊನೆಯ ಹಂತದಲ್ಲಿ ನಡೆದ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಯ ಪ್ರತ್ಯಕ್ಷದರ್ಶಿಗಳ ಮೇಲೆ ಆಧಾರಿತ ಸಾಕ್ಷ್ಯಚಿತ್ರ ಪ್ರಸಾರ ಮಾಡಿತ್ತು. ಅದರಲ್ಲಿ ಎಲ್.ಟಿ.ಟಿ.ಇ. ಮುಖ್ಯಸ್ಥ ಪ್ರಭಾಕರನ್ ಮಗ ಸೇರಿದಂತೆ ಕುಟುಂಬದ ಕಗ್ಗೊಲೆ, ಎಲ್.ಟಿ.ಟಿ.ಇ. ಬೆಂಬಲಿಗರ ವಿಚಾರಣೆ ಹೆಸರಲ್ಲಿ ಅಮಾಯಕ ನಾಗರಿಕರಿಗೆ ಚಿತ್ರಹಿಂಸೆ-ಕೊಲೆ, ಯುದ್ಧ-ರಹಿತ ಪ್ರದೇಶಗಳ ಘೋಷಣೆಯಲ್ಲಿ ದೊಡ್ಡ ಪ್ರಮಾಣದ ನಾಗರಿಕರು ಇರುವ ಹಲವು ಪ್ರದೇಶಗಳನ್ನು ಸೇರಿಸದೆ ಹೋದದ್ದು, ನಿರಾಶ್ರಿತರ ಸಂಖ್ಯೆಯನ್ನು ಬೇಕೆಂತಲೇ ಕಡಿಮೆ ಹೇಳಿ ಸಾಕಷ್ಟು ಆಹಾರ-ಪರಿಹಾರ ಸಾಮಗ್ರಿಗಳು ಇಲ್ಲದಂತೆ ಮಾಡಿದ್ದು - ಇತ್ಯಾದಿ ಸೇರಿವೆ.

ಈ ಹಿನ್ನೆಲೆಯಲ್ಲಿ ಸರ್ಕಾರವೇ ನೇಮಿಸಿದ 'ಜನಾಂಗೀಯ ಸಂಘರ್ಷದಿಂದ ಕಲಿತ ಪಾಠ ಮತ್ತು ಸಮನ್ವಯ ಆಯೋಗ' (ಎಲ್.ಎಲ್.ಆರ್.ಸಿ.) ತನ್ನ ಶಿಫಾರಸುಗಳನ್ನು ನೀಡಿ ಐದು ತಿಂಗಳಾದರೂ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಶ್ರೀಲಂಕಾ ಸರ್ಕಾರ ಈ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಗಳ ಬಗ್ಗೆ ನಿಷ್ಪಕ್ಷಪಾತ ಪ್ರಾಮಾಣಿಕ ತನಿಖೆ ಮಾಡಬೇಕು. ಅಧಿಕಾರಗಳನ್ನು ರಾಜ್ಯಗಳಿಗೆ ವಿಕೇಂದ್ರೀಕರಿಸುವುದು ಸೇರಿದಂತೆ ರಾಜಕೀಯ ಪರಿಹಾರಗಳನ್ನೂ ಒದಗಿಸಬೇಕು ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯುರೋ ಒತ್ತಾಯಿಸಿದೆ.

ನವ-ಉದಾರವಾದ: ಬಡತನದ ತತ್ವಶಾಸ್ತ್ರ

ಪುಟ 7 ರಿಂದ......

ಆದರೆ ಸುಧಾರಣಾ ಪ್ರಕ್ರಿಯೆ ಆರಂಭವಾದ ನಂತರ ಆಹಾಧಾನ್ಯಗಳ ಉತ್ಪಾದನೆ ಇಳಿಯಿತು. 1991-2001ರ ಅವಧಿಯಲ್ಲಿ ಜನಸಂಖ್ಯೆಯ ಹೆಚ್ಚಳದ ದರ 1.95ಶೇ.ವಾದರೆ ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳದ ದರ 1.1ಶೇ. 2001-2011ರ ಅವಧಿಯಲ್ಲಿ ಜನಸಂಖ್ಯಾ ಹೆಚ್ಚಳದ ದರ 1.65ಶೇ.ವಾದರೆ, ಆಹಾರಧಾನ್ಯಗಳ ಉತ್ಪಾದನೆಯ ಹೆಚ್ಚಳದ ದರ 1.03ಶೇ.

ಆದ್ದರಿಂದ ಇಲ್ಲಿರುವ ಪ್ರಶ್ನೆ ಬಡತನ ತುಲನಾತ್ಮಕವಾಗಿ ಹೆಚ್ಚುತ್ತಿದೆ ಎಂಬುದಲ್ಲ, ಒಟ್ಟಾರೆಯಾಗಿಯೂ ಬಡತನ ಹೆಚ್ಚುತ್ತಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಬೇಕಾದರೆ 'ಆಮ್ ಆದ್ಮಿ'ಗೆ ಆಹಾರ ಭದ್ರತೆಯನ್ನು, ಒಂದು ಉತ್ತಮ ಮಟ್ಟದ ಜೀವನ ದೊರೆಯುವಂತೆ ಮಾಡಲು ಅಗತ್ಯವಾದ ಸಬ್ಸಿಡಿಗಳನ್ನು ಒದಗಿಸುವುದೇ ಏಕೈಕ ಮಾರ್ಗ. ಆದರೆ ಈಗ ಹಣಕಾಸು ಕೊರತೆಗೆ ಕಡಿವಾಣ ಹಾಕುವ ಹೆಸರಿನಲ್ಲಿ ಈ ಸಬ್ಸಿಡಿಗಳ ಮೇಲೆಯೇ ಗುರಿಯಿಡಲಾಗಿದೆ. ಪ್ರಸಕ್ತ ಬಜೆಟ್ ದಸ್ತಾವೇಜುಗಳ ಪ್ರಕಾರ ಹಣಕಾಸು ಕೊರತೆಯ ಪ್ರಮಾಣ 5.9ಶೇ. ಅಂದರೆ ಸುಮಾರು 5.22 ಲಕ್ಷ ಕೋಟಿ ರೂ.ಗಳು. ಅದೇ ಅವಧಿಯಲ್ಲಿ ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ನೀಡಿದ ತೆರಿಗೆ ರಿಯಾಯ್ತಿಗಳ ಮೊತ್ತ 5.28ಲಕ್ಷ ಕೋಟಿ ರೂ.ಗಳು. ಹಿಂದಿನ ಬಜೆಟಿನಲ್ಲಿ ಮಂಜೂರಾದ ಈ ನ್ಯಾಯಬದ್ಧ ತೆರಿಗೆಗಳನ್ನು ವಸೂಲಿ ಮಾಡಿದ್ದರೆ, ಹಣಕಾಸು ಕೊರತೆ ಎಂಬುದೇ ಇರುತ್ತಿರಲಿಲ್ಲ. ಬದಲಾಗಿ ಮಿಗುತೆ ಇರುತ್ತಿತ್ತು.

ನಿಜ, ನವ-ಉದಾರವಾದದ ತತ್ವಶಾಸ್ತ್ರ-ಅಂದರೆ ಬಡತನದ ತತ್ವಶಾಸ್ತ್ರ- ಕೊರತೆಯ ಹೊರೆಯನ್ನು ಶ್ರೀಮಂತರಿಗೆ ಕೊಡುವ ಇಂತಹ ರಿಯಾಯ್ತಿಗಳನ್ನು ಬರ್ಖಾಸ್ತು ಮಾಡಿ ಇಳಿಸಬಾರದು ಎಂದು ನಿರ್ದೇಶಿಸುತ್ತದೆ. ಏಕೆಂದರೂ ಇವೆಲ್ಲಾ 'ಬೆಳವಣಿಗೆ'ಗೆ ನೀಡುವ 'ಉತ್ತೇಜಕ'ಗಳು ತಾನೇ! ಈ ಕೊರತೆಯನ್ನು ಬಡಪರಿಗೆಂದು ಇರುವ ಸಬ್ಸಿಡಿಗಳನ್ನು ಬರ್ಖಾಸ್ತು ಮಾಡಿಯೇ ಇಳಿಸಬೇಕು- ಇವು ಆರ್ಥಿಕ ವ್ಯವಸ್ಥೆಯ ಮೇಲಿನ 'ಹೊರೆ'ಗಳಲ್ಲವೇ?

ಈ ಪ್ರಕಾರವೇ, ಪ್ರಸಕ್ತ ಬಜೆಟಿನಲ್ಲಿ ಇಂಧನ ಸಬ್ಸಿಡಿಯಲ್ಲಿ ಇನ್ನೂ 25,000 ಕೋಟಿ ರೂ., ರಸಗೊಬ್ಬರ ಸಬ್ಸಿಡಿಯಲ್ಲಿ 6000 ಕೋಟಿ ರೂ. ಇತ್ಯಾದಿ ಕಡಿತ ಮಾಡಲಾಗಿದೆ. ಹೆಚ್ಚಿನ ಈ ಸಬ್ಸಿಡಿಗಳು ಬಡತನದ ರೇಖೆಯ ಕೆಳಗಿನ(ಬಿಪಿಎಲ್) ಜನತೆಗೆ ತಲುಪುವಂತದ್ದಾದ್ದರಿಂದ, ಇವನ್ನು ಜಾರಿಗೆ ತರುವ ಏಕೈಕ ದಾರಿಯೆಂದರೆ ಬಿಪಿಎಲ್ ಸಂಖ್ಯೆಗಳನ್ನೇ ಕಡಿತಗೊಳಿಸುವುದು. ಯೋಜನಾ ಆಯೋಗದ ಮೋಸದ ಲೆಕ್ಕಾಚಾರಗಳೆಲ್ಲಾ ಇದಕ್ಕಾಗಿಯೇ.

ಪರಿವರ್ತನೆಯ ಕಾರಕ ಅಂಶ

ಪ್ರೌಧೋನ್ ಎಂಬಾತನ ಕೃತಿ "ಬಡತನದ ತತ್ವಶಾಸ್ತ್ರ"ದಲ್ಲಿನ ವಾದಗಳನ್ನು ಖಂಡಿಸುತ್ತಾ ಬರೆದ ತನ್ನ ಪ್ರಖ್ಯಾತ ಕೃತಿ "ತತ್ವಶಾಸ್ತ್ರದ ಬಡತನ"ದಲ್ಲಿ ಕಾರ್ಲ್ ಮಾರ್ಕ್ಸ್ ಜಗತ್ತನ್ನು ಅರಿಯಬೇಕಾಗಿದೆಯಷ್ಟೇ ಅಲ್ಲ, ಅದನ್ನು ಬದಲಾಯಿಸಬೇಕಾಗಿದೆ ಎಂಬ ತನ್ನ ಕಣ್ಣೋಟವನ್ನು ಪ್ರಸ್ತುತ ಪಡಿಸುತ್ತಾ, ಕೊನೆಯಲ್ಲಿ ಹೀಗೆ ಹೇಳಿದ್ದಾರೆ-"ವರ್ಗವೈಷಮ್ಯಗಳ ಮೇಲೆ ನಿಂತಿರುವ ಪ್ರತಿಯೊಂದು ಸಮಾಜದಲ್ಲೂ ಒಂದು ದಮನಿತ ವರ್ಗ ಎಂಬುದು ಜೀವನ್ಮರಣ ಪರಿಸ್ಥಿತಿ. ಹೀಗೆ ದಮನಕ್ಕೊಳಗಾದ ವರ್ಗದ ವಿಮೋಚನೆಯೆಂದರೆ ಒಂದು ಹೊಸ ಸಮಾಜದ ನಿರ್ಮಾಣವೆಂದೇ ಅರ್ಥ. ದಮನಕ್ಕೊಳಗಾದ ವರ್ಗ ತನ್ನನ್ನು ವಿಮೋಚನೆಗೊಳಿಸಿಕೊಳ್ಳಬೇಕಾದರೆ, ಅದಾಗಲೇ ಪಡೆದಿರುವ ಉತ್ಪಾದಕ ಶಕ್ತಿಗಳು ಮತ್ತು ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳು ಇನ್ನು ಮುಂದೆ ಅಕ್ಕ-ಪಕ್ಕದಲ್ಲಿರಲು ಸಾಧ್ಯವಿಲ್ಲ ಎಂದಾಗಬೇಕು. ಉತ್ಪಾದನೆಯ ಸಾಧನಗಳಲ್ಲೆಲ್ಲ ಮಹಾನ್ ಉತ್ಪಾದಕ ಶಕ್ತಿಯೆಂದರೆ ಸ್ವತಃ ಕ್ರಾಂತಿಕಾರಿ ವರ್ಗವೇ. ಕ್ರಾಂತಿಕಾರಿ ಅಂಶಗಳು ಒಂದು ವರ್ಗವಾಗಿ ಸಂಘಟಿತವಾಗಿವೆಯೆಂದರೆ ಹಳೆಯ ಸಮಾಜದ ಎದೆಯಲ್ಲಿ ಉಂಟು ಮಾಡಬಹುದಾದ ಎಲ್ಲ ಉತ್ಪಾದಕ ಶಕ್ತಿಗಳ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪ್ರಸಕ್ತ ಪರಿಸ್ಥಿತಿಯಲ್ಲಿ......

ಟ 8ರಿಂದ.......

ಬೇಕಾಗಿದೆ. ಬಜೆಟ್ ಪ್ರಸ್ತಾಪ ಜಾರಿಗೊಂಡರೆ ಗೊಬ್ಬರ ಬೆಲೆಗಳು ಗಗನಕ್ಕೇರಲಿದ್ದು, ದೇಶಕ್ಕೆ ನ್ನ ಕೊಡುವ ರೈತ ಸಂಕಷ್ಟಕ್ಕೆ ಸಿಲುಕಲಿದ್ದಾನೆ. ರದೊಂದಿಗೆ ಬಹು ವಸ್ತು(ಮಲ್ಟಿಬ್ರಾಂಡ್) ಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ವಕಾಶ ಕೊಡಲು ಮುಂದಾಗಿರುವುದನ್ನೂ ರೋಧಿಸಬೇಕಾಗಿದೆ. ಫೆಬ್ರವರಿ 28ರಂದು ೇಂದ್ರ ಕಾರ್ಮಿಕ ಸಂಘಟನೆಗಳು ನಡೆಸಿದ ಷ್ಟ್ರವ್ಯಾಪಿ ಮುಷ್ಕರಕ್ಕೆ ಸಿಕ್ಕಿದ ಜನಬೆಂಬಲ ಭೂತಪೂರ್ವವಾಗಿದೆ. ಜನಗಳನ್ನು ಬಾಧಿಸುವ ತಿಗಳಿಗೆ ತಡೆ ಹಾಕಲು ಇಂತಹ ಐಕ್ಯ ೋರಾಟಗಳನ್ನು ಮುಂದುವರಿಸಬೇಕಾಗಿದೆ.

ಕ್ಕೂಟ ತತ್ವದ ರಕ್ಷಣೆ

ಇತ್ತೀಚಿನ ದಿನಗಳಲ್ಲಿನ ಒಂದು ಸಕಾರಾತ್ಮಕ ಳವಣಿಗೆಯೆಂದರೆ ವಿವಿಧ ಕಾಂಗ್ರೆಸ್ಸೇತರ ುಖ್ಯಮಂತ್ರಿಗಳಿಂದ ರಾಜ್ಯಗಳ ಹಕ್ಕುಗಳ ಮರ್ಥನೆ ಮತ್ತು ಒಕ್ಕೂಟ ತತ್ವಗಳ ಪ್ರತಿಪಾದನೆ ಲಗೊಂಡಿರುವುದು. ರಾಷ್ಟ್ರೀಯ ಯೋತ್ಪಾದನಾ ವಿರೋಧಿ ಕೇಂದ್ರ ಎನ್‌ಸಿಟಿಸಿ)ಗಳ ವಿಷಯದಲ್ಲಿ (ಕೇಂದ್ರ ಕರ್ಾರಕ್ಕೆ) ಮಾಡಿಕೊಡಲಾಗಿರುವ ವಕಾಶಗಳು ಆರಕ್ಷಣೆ(ಪೋಲಿಸಿಂಗ್) ಷಯದಲ್ಲಿ ಮತ್ತು ರಾಜ್ಯಗಳ ಅಧಿಕಾರ ್ಯಾಪ್ತಿಯ ಮೇಲೆ ನೇರವಾದ ಅತಿಕ್ರಮಣ ಮಾಡುತ್ತವೆ. ಕಾನೂನುಬಾಹಿರ ಚಟುವಟಿಕೆಗಳ ಡೆ ಕಾಯ್ದೆಯು ಈಗಾಗಲೇ ಅಂತಹ ಅತಿಕ್ರಮಣಕ್ಕೆ ದಾರಿ ಮಾಡಿಕೊಟ್ಟಿದೆ.

ಹತ್ತು ರಾಜ್ಯಗಳ ಮುಖ್ಯಮಂತ್ರಿಗಳು ಈ ಅವಕಾಶಗಳ ವಿರುದ್ಧ ನಿಲುವು ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಈಗ ರೈಲ್ವೆ ಸಂರಕ್ಷಣಾ ಪಡೆ ಕಾಯ್ದೆಗೆ ಸೂಚಿಸಲಾಗಿರುವ ತಿದ್ದುಪಡಿ, ಬಿಎಸ್‌ಎಫ್ ಕಾಯ್ದೆ ಸಹ ರಾಜ್ಯಗಳ ಆರಕ್ಷಣೆಯ ಅಧಿಕಾರವನ್ನು ಕೇಂದ್ರ ಅರೆಮಿಲಿಟರಿ ಪಡೆಗಳಿಗೆ ವರ್ಗಾಯಿಸುತ್ತವೆ. ಈ ಎಲ್ಲವುಗಳು ತ್ರಿಪುರ ರಾಜ್ಯದ ಮುಖ್ಯಮಂತ್ರಿಗಳು ಸೇರಿದಂತೆ ಕಾಂಗ್ರೆಸೇತರ ಮುಖ್ಯಮಂತ್ರಿಗಳ ವಿರೋಧಕ್ಕೆ ಗುರಿಯಾಗಿವೆ. ದೊಡ್ಡ ಬಂಡವಾಳಿಗರ ಒಂದು ಪ್ರಧಾನ ಪಕ್ಷವಾಗಿ ಕಾಂಗ್ರೆಸ್ ಪಕ್ಷವು ಯಾವತ್ತು ಕೂಡ ಒಕ್ಕೂಟ ತತ್ವಕ್ಕೆ ಹಗೆತನ ತೋರುತ್ತಲೇ ಬಂದಿದೆ.

ಹಲವಾರು ರೀತಿಗಳಲ್ಲಿ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಅತಿಕ್ರಮಿಸುವ ಶಾಸನಗಳನ್ನು ಈಗಾಗಲೇ ಶಿಕ್ಷಣ ರಂಗದಲ್ಲಿ ಜಾರಿಗೆ ತರಲಾಗಿದೆ. ಒಕ್ಕೂಟ ತತ್ವಕ್ಕೆ ವಿರೋಧಿಯಾದ ಇಂತಹ ಕ್ರಮಗಳ ವಿರುದ್ಧ ಪ್ರತಿರೋಧ ಬೆಳೆದು ಬರುತ್ತಿರುವುದು ಒಂದು ಸ್ವಾಗತಾರ್ಹವಾದ ಬೆಳವಣಿಗೆಯಾಗಿದೆ. ರಾಜ್ಯ-ಕೇಂದ್ರಗಳ ನಡುವಿನ ಸಂಬಂಧಗಳನ್ನು ಪರಿಣಾಮಕಾರಿಯಾಗಿ ಪುನರ್ ಸಂರಚಿಸುವುದು ಸಾಧ್ಯವಾಗುವಂತೆ ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವೆ ಒಂದು ವಿಶಾಲವಾದ ತಿಳುವಳಿಕೆಯನ್ನು ರೂಪಿಸುವ ನಿಟ್ಟಿನಲ್ಲಿ ಪ್ರತಿರೋಧವನ್ನು ಮುಂದಕ್ಕೊಯ್ಯುವುದು ಅವಶ್ಯಕವಾಗಿದೆ.

ವಿದೇಶಾಂಗ ಧೋರಣೆ ಒತ್ತಡಕ್ಕೆ ಬಲಿಯಾಗಿರುವುದು

ದೇಶದ ಗಮನವು ಆಂತರಿಕ ರಾಜಕೀಯ ಬೆಳವಣಿಗೆಗಳ ಕಡೆಗೆ ಇರುವಾಗ ಯುಪಿಎ ಸರ್ಕಾರವು ಒಂದು ಸ್ವತಂತ್ರ ವಿದೇಶಾಂಗ ಧೋರಣೆಯಿಂದ ದೂರ ಸರಿಯುವ ಧೋರಣೆಯನ್ನು ತಳೆಯುತ್ತಿತ್ತು.

ಕಳೆದ ಫೆಬ್ರವರಿಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸಿರಿಯಾದ ವಿರುದ್ಧ ಭಾರತವು ಅಮೆರಿಕ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಸೇರಿ ಮತ ಚಲಾಯಿಸಿದ್ದು ಒಂದು ಇತ್ತೀಚಿನ ನಿದರ್ಶನ. ಈ ಗೊತ್ತುವಳಿಯು ಲಿಬಿಯಾದಲ್ಲಿ ಆದಂತೆ(ಮಿಲಿಟರಿ) ಮಧ್ಯಪ್ರವೇಶಕ್ಕೆ ಅವಕಾಶವನ್ನು ತೆರೆದಿಡುವಂತಾಹದ್ದಾಗಿತ್ತು. ರಷ್ಯಾ ಹಾಗೂ ಚೀನಾಗಳು ಈ ಗೊತ್ತುವಳಿ ವಿರುದ್ಧ ವೀಟೋ ಚಲಾಯಿಸಿ ಗೊತ್ತುವಳಿಯನ್ನು ತಡೆದವು. ಭಾರತವು ಈ ಹಿಂದೆ ಲಿಬಿಯಾದ ವಿರುದ್ಧದ ನಿರ್ಣಯದ ಸಂದರ್ಭದಲ್ಲಿ ಹಾಗೂ ಅದರ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸಿರಿಯಾದ ವಿರುದ್ಧದ ನಿರ್ಣಯದ ಸಂದರ್ಭದಲ್ಲಿ ಮತದಾನದಿಂದ ದೂರವುಳಿದಿತ್ತು. ಆದರೆ ಈಗ ಅಮೆರಿಕ ಮತ್ತು ಸೌದಿ ಆರೆಬಿಯಾದಂತಹ ದೇಶಗಳ ಒತ್ತಡದಿಂದ ಭಾರತ ತನ್ನ ನೀತಿಯನ್ನು ತಿರುಗುಮುರುಗು ಮಾಡಿದೆ. ತಾನು ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ಮತ್ತು ಇಸ್ರೇಲ್‌ನ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುವೆನೆಂಬ ಸಂದೇಶವನ್ನು ಭಾರತವು ನೀಡುತ್ತಿದೆ.

ಭಾರತವು ಇರಾನ್‌ನಿಂದ ತೈಲ ಖರೀದಿಯನ್ನು ಮುಂದುವರಿಸುತ್ತದೆ ಎಂಬ ಅಧಿಕೃತ ಘೋಷಣೆಗಳ ನಡುವೆಯೂ ಇರಾನ್‌ನಿಂದ ತೈಲ ಖರೀದಿಸಬಾರದೆಂಬ ಅಮೆರಿಕದ ಒತ್ತಡ ಕೆಲಸ ಮಾಡುತ್ತಿರುವಂತೆ ತೋರುತ್ತದೆ. ಭಾರತವು ಇರಾನ್‌ನಿಂದ ತೈಲ ಖರೀದಿಯನ್ನು ಕಡಿತಗೊಳಿಸಿದೆ. ಮತ್ತು ದಿಗ್ಭಂಧನವನ್ನು ಹೇರುವ ಅಮೆರಿಕ ಮತ್ತು ಯೂರೋಪಿಯನ್ ಒಕ್ಕೂಟದ ಬೆದರಿಕೆಯನ್ನು ಎದುರಿಸಲು ತಯಾರಿಲ್ಲ.

ಇರಾನ್ ವಿರೋಧಿಯಾದ ಉದ್ರಿಕ್ತತೆಯನ್ನು ಬಡಿದೆಬ್ಬಿಸಿರುವಾಗಲೇ ಅಂತರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ತೈಲ ಬೆಲೆಯು ಬ್ಯಾರೆಲ್ ಒಂದಕ್ಕೆ 120 ಡಾಲರ್‌ಗೇರಿದೆ. ಇರಾನ್‌ನಿಂದ ತೈಲ ಆಮದು ಕಡಿತಗೊಳಿಸುವ ಮೂಲಕ ಭಾರತವು ತನ್ನ ಕಾಲನ್ನು ತಾನೇ ತುಂಡರಿಸಿಕೊಳ್ಳುತ್ತಿದೆ. ಇದು ಅಮೇರಿಕದ ಒತ್ತಡದ ಅಡಿಯಲ್ಲಿ ಇರಾನ್-ಪಾಕಿಸ್ತಾನ್-ಭಾರತ ಅನಿಲ ಕೊಳವೆ ಯೋಜನೆಯನ್ನು ರದ್ದು ಮಾಡುವ ಮೂಲಕ ತೋರಿದ ಹೇಡಿತನದ ಭಾಗವೇ ಆಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು, ವಿದೇಶಾಂಗ ನೀತಿಯು ಹೇಗೆ ಅಮೆರಿಕದ ಒತ್ತಡಕ್ಕೆ ಒಳಗಾಗುವುದು ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ ಎಂಬುದನ್ನು ಹಾಗೂ ವಿದೇಶಾಂಗ ನೀತಿಗಳನ್ನು ನಿರಂತರವಾಗಿ ಎತ್ತುತ್ತಿರುವ ಏಕೈಕ ಶಕ್ತಿಗಳಾಗಿವೆ. ಸಿಪಿಐ(ಎಂ) ಪಕ್ಷವು ಸಮ್ರಾಜ್ಯಶಾಹಿ ಶಕ್ತಿಗಳಿಗೆ ಶರಣಾಗುವ ಈ ನೀತಿಗಳ ವಿರುದ್ಧ ತನ್ನ ಪ್ರಚಾರಾಂದೋಲನವನ್ನು ಮುಂದುವರಿಸಲಿದೆ.

ಪಕ್ಷವನ್ನು ಬಲಪಡಿಸುವುದು

ಐದು ರಾಜ್ಯಗಳ ಚುನಾವಣಾ ಫಲಿತಾಂಶ, ಅದರಲ್ಲೂ ನಿರ್ದಿಷ್ಟವಾಗಿ ಉತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳ ಚುನಾವಣಾ ಫಲಿತಾಂಶವು ಈ ರಾಜ್ಯಗಳಲ್ಲಿ ಸಿಪಿಐ(ಎಂ)ನ ಸ್ವತಂತ್ರ ಸಾಮರ್ಥ್ಯದಲ್ಲಿನ ದೌರ್ಬಲ್ಯವನ್ನು ತೋರಿಸಿಕೊಟ್ಟಿದೆ. ಈ ಎರಡು ವಿಧಾನ ಸಭೆಗಳಿಗೆ ಯಾವುದೇ ಒಂದು ಸ್ಥಾನವನ್ನೂ ಗೆಲ್ಲಲಾರದ ವಿಫಲತೆಯು ಪಕ್ಷ ಹೊಂದಿರುವ ದುರ್ಬಲ ರಾಜಕೀಯ ನೆಲೆಯನ್ನು ತೋರಿಸುತ್ತಿದೆ.

ಜಾತಿ ರಾಜಕಾರಣ, ಎಗ್ಗಿಲ್ಲದ ಹಣಬಲದ ಬಳಕೆ ಹಾಗೂ ಮಾಧ್ಯಮ ಮತ್ತು ಇತರ ಸಂಪನ್ಮೂಲಗಳ ಬಳಕೆ ಇವುಗಳು ನವ ಉದಾರೀಕರಣ ನೀತಿಗಳ ಅಡಿಯಲ್ಲಿ ಚುನಾವಣೆಗಳ ಪ್ರಧಾನ ಲಕ್ಷಣಗಳಾಗಿವೆ. ಗ್ರಾಮೀಣ ಬಡವರು ಮತ್ತು ನಗರಗಳ ಕಾರ್ಮಿಕ ವರ್ಗಗಳ ಹೋರಾಟಗಳನ್ನು ಕಟ್ಟಿ ಬೆಳೆಸವುದು ಮತ್ತು ಸಂಘಟಾನಾತ್ಮಕವಾಗಿ ಅವನ್ನು ಕ್ರೋಡೀಕರಿಸುವುದು... ಇದರಿಂದ ಮಾತ್ರವೇ ಪಕ್ಷವು ಮುನ್ನಡೆಯನ್ನು ಸಾಧಿಸಲು ಸಾಧ್ಯ.

20 ನೇ ಮಹಾಧಿವೇಶನದಲ್ಲಿ ಚರ್ಚಿಸಲಾಗುವ ಕರಡು ರಾಜಕೀಯ-ಸಂಘಟನಾ ನಿರ್ಣಯವು ಪ.ಬಂಗಾಳ, ಕೇರಳ, ತ್ರಿಪುರಗಳ ಹೊರಗೆ ಪಕ್ಷದ ಸ್ವತಂತ್ರ ಪಾತ್ರ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಅಂಶಕ್ಕೆ ಒತ್ತು ನೀಡಿದೆ. ಮೂಲಭೂತ ವರ್ಗಗಳ ಮೇಲೆ ನವ-ಉದಾರೀಕರಣ ನೀತಿಗಳು ಉಂಟು ಮಾಡಿರುವ ಪರಿಣಾಮಗಳ ವಿರುದ್ಧ ಮತ್ತು ಮತ್ತು ಸಾಮಾಜಿಕ ದಮನದ ವಿರುದ್ಧ ನಿರಂತರವಾದ ಹೋರಾಟಗಳನ್ನು ಪಕ್ಷ ಸಂಘಟಿಸಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುವ ನವ-ಉದಾರೀಕರಣ ನೀತಿಗಳ ವಿರುದ್ಧದ ಆಂದೋಲನ, ಚಳುವಳಿಗಳೊಂದಿಗೇ ಇದು ಸಹ ನಡೆಯಬೇಕಾಗಿದೆ. ಈ ಹೋರಾಟಗಳ ಮೂಲಕ ಗಳಿಸಲಾಗುವ ಪ್ರಭಾವವನ್ನು ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಕ್ರೋಢಿಕರಿಸುವುದು ಅವಶ್ಯಕ. ಪಕ್ಷದ ಸಂಘಟನೆಯನ್ನು ಬಲಪಡಿಸಲು ಮತ್ತು ಸಾಮೂಹಿಕ ಸಂಘಟನೆಗಳ ಪ್ರಭಾವವನ್ನು ವಿಸ್ತರಿಸಲು ಕ್ರಮಗಳನ್ನು ಕೈಗೊಳ್ಳಬೇಕು.

ಪಕ್ಷವನ್ನು ವಿಸ್ತರಿಸದೇ ಮತ್ತು ಎಲ್ಲ ಎಡ ಶಕ್ತಿಗಳನ್ನು ಒಂದು ಸಾಮಾನ್ಯ ವೇದಿಕೆಗೆ ತಂದು ಎಡಪಕ್ಷಗಳ ಐಕ್ಯತೆಯನ್ನು ಬಲಪಡಿಸದೇ ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಒದಗಿ ಬಂದಿರುವ ಅವಕಾಶವನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ. ●

⇨

ಅಸ್ತಿತ್ವವಿದೆ ಎಂದರ್ಥ."

ಹೀಗೆ, ಕಾರ್ಮಿಕ ವರ್ಗದ ವಿಮೋಚನೆಯನ್ನು, ಆಮೂಲಕ ಎಲ್ಲ ಶೋಷಿತ ವರ್ಗಗಳ ವಿಮೋಚನೆಯನ್ನು ಸಾಧಿಸುವಲ್ಲಿ ಮಹತ್ವದ ಸಂಗತಿಯೆಂದರೆ "ಒಂದು ವರ್ಗವಾಗಿ ಕ್ರಾಂತಿಕಾರಿ ಅಂಶಗಳ ಸಂಘಟನೆ". ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇದು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಶೋಷಿತ ವರ್ಗಗಳ ರಾಜಕೀಯ ಶಕ್ತಿ- ಕಾರಕ ಅಂಶ; ಇದು ಮನುಷ್ಯನಿಂದ ಮನುಷ್ಯನ ಶೋಷಣೆಯಿಲ್ಲದ ಒಂದು ಸಮಾಜದ ನಿರ್ಮಾಣಕ್ಕೆ ಅಗತ್ಯವಾದ ಮತ್ತು ಸಾಕಾಗುವ ಅಂಶ.

ಭಾರತದ ಮೂರ್ತ ಪರಿಸ್ಥಿತಿಗಳಲ್ಲಿ ಈ ಕಾರಕ ಅಂಶವನ್ನು ಬಲಪಡಿಸುವುದೇ ಮುಂಬರುವ ಸಿಪಿಐ(ಎಂ) 20ನೇ ಮಹಾಧಿವೇಶನದ ಮುಂದಿರುವ ಪ್ರಶ್ನೆ. ಭಾರತದ ಸಮಾಜವಾದಿ ಪರಿವರ್ತನೆಗೆ ನಾಂದಿಯಾಗಿ ಒಂದು ಯಶಸ್ವಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ವ್ಯೂಹಾತ್ಮಕ ಗುರಿಯನ್ನು ಸಾಧಿಸಲು ಪಕ್ಷ ಅಂಗೀಕರಿಸಬೇಕಾದ ಸರಿಯಾದ ತಂತ್ರಾತ್ಮಕ ಮಾರ್ಗ ಈ ಮಹಾಧಿವೇಶನದ ಅಜೆಂಡಾದ ತಿರುಳು. ಇದು ಸಾಧ್ಯವಾಗಬೇಕಾದರೆ ಈ ಗುರಿಸಾಧನೆಗೆ ಅಗತ್ಯವಾದ ಕಾರಕ ಅಂಶವನ್ನು ಬಲಪಡಿಸಲು ಇರುವ ಅಡೆ-ತಡೆಗಳ ಸವಾಲುಗಳನ್ನು ಎದುರಿಸಿ, ಮೀರಿ ನಿಲ್ಲಬೇಕಾಗಿದೆ.

ಹೀಗೆ ಸಿಪಿಐ(ಎಂ) 20ನೇ ಮಹಾಧಿವೇಶನ, ಭಾರತದ ಮತ್ತು ಅದರ ಜನತೆಯ ಹಿತದೃಷ್ಟಿಯಿಂದ ಈ ಚಾರಿತ್ರಿಕ ಕರ್ತವ್ಯವನ್ನು ಈಡೇರಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ರೂಪಿಸಿ, ಅಗತ್ಯ ಸಂಘಟನಾ ಕ್ರಮಗಳನ್ನು ವಹಿಸುವ ಜವಾಬ್ದಾರಿ ಹೊಂದಿದೆ. ●

ಮರ್ಯಾದಾ ಹತ್ಯ

ಹತ್ಯೆಗೂ ಕಟುಕ ಜನ ಮರ್ಯಾದೆ ಹೆಸರು
ಬಳಸುತ್ತಾ ಮಾನಕ್ಕೆ ಬಳಿದರೋ ಕೆಸರು
ಕಾರಣವು ನೆತ್ತರೇ ಈ ಜನಕೆ ಮೊಸರು
ಕಟ್ಟಿದರು ಸ್ವಾರ್ಥಕ್ಕೆ ನೈತಿಕತೆ ಉಸಿರು

- ವಿಡಂಬಾರಿ

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಜಗದಗಲ


ಸ್ಲೋವಾಕಿಯ ಎಡ ಪಕ್ಷಕ್ಕೆ ಪ್ರಚಂಡ ಜಯ

ಮಾರ್ಚ್ ಎರಡನೇ ವಾರದಲ್ಲಿ ನಡೆದ ಸ್ಲೋವಾಕಿಯಾ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಎಡ ಪಂಥೀಯ ಸ್ಮೇರ್-ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿಗೆ ನಿಚ್ಚಳ ಬಹುಮತ ದೊರಕಿದೆ. ಶೇ.44 ಮತ ಗಳಿಸಿದ ಸ್ಮೇರ್ ಪಕ್ಷ 150 ಸೀಟುಗಳಲ್ಲಿ 83 ಸೀಟು ಗಳಿಸಿದೆ. 1989 ರಲ್ಲಿ ಸಮಾಜವಾದಿ ವ್ಯವಸ್ಥೆ ಪತನದ ನಂತರ ನಡೆದ ಚುನಾವಣೆಗಳಲ್ಲಿ ಇದೇ ಮೊದಲ ಬಾರಿಗೆ ಯಾವುದೇ ಪಕ್ಷಕ್ಕೆ ನಿಚ್ಚಳ ಬಹುಮತ ದೊರಕಿರುವುದು. ಎರಡನೇ ಅತಿ ಹೆಚ್ಚು ಮತಗಳಿಸಿದ (ಹೊಸ) ಪಕ್ಷ ಕೇವಲ ಶೇ.9 ಮತಗಳಿಸಿತು. ಅಷ್ಟು ಮಾತ್ರವಲ್ಲದೆ ಹಿಂದಿನ ಸರ್ಕಾರ ರಚಿಸಿದ ಆಳುವ ಕೂಟದ ಪಕ್ಷಗಳು ಪರಾಭವ ಅನುಭವಿಸಿವೆ. ಈ ಮೂರು ಬಲಪಂಥೀಯ ಪಕ್ಷಗಳು 29 ಸೀಟು ಕಳೆದುಕೊಂಡಿವೆ. ಮಿತವ್ಯಯದ ಹೆಸರಲ್ಲಿ ಸಾರ್ವಜನಿಕ ಮತ್ತು ಕಲ್ಯಾಣ ವೆಚ್ಚಗಳಲ್ಲಿ ಭಾರೀ ಕಡಿತ ಮಾಡಿದ, ಮತ್ತು ಭಾರೀ ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿದ್ದ ಈ ಪಕ್ಷಗಳ ಮೇಲೆ ತೀವ್ರ ಆಕ್ರೋಶ ಇತ್ತು ಎಂಬುದು ಸ್ಪಷ್ಟ. ಸಾಲಬಾಧೆಯಲ್ಲಿ ಸಿಲುಕಿದ ಯುರೋ ದೇಶಗಳ ನೆರವಿಗೆ ಹೋಗುವ ನಿಧಿಯಲ್ಲಿ ಎರಡನೇ ಅತಿ ಹೆಚ್ಚು ಬಡದೇಶವಾದ ಸ್ಲೋವಾಕಿಯ ಭಾಗವಹಿಸಬೇಕೆ ಎಂಬ ಬಗ್ಗೆ ಉಂಟಾದ ಭಿನ್ನಾಭಿಪ್ರಾಯದಲ್ಲಿ, ಅವಧಿಗಿಂತ ಎರಡು ವರ್ಷ ಮೊದಲೇ ಸಮ್ಮಿಶ್ರ ಕೂಟ ಸರ್ಕಾರ ಬಿದ್ದು ಹೋಗಿತ್ತು. ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಹುಡುಕಿಕೊಂಡು ವಲಸೆ ಹೋಗಿದ್ದರೂ ದೇಶದ ನಿರುದ್ಯೋಗದ ಪ್ರಮಾಣ ಶೇ.14 ಇದೆ. 2008 ಬಿಕ್ಕಟ್ಟಿನ ಫಲವಾಗಿ ಒಟ್ಟು ಉತ್ಪನ್ನ (ಜಿಡಿಪಿ) ಮೊದಲ ವರ್ಷದಲ್ಲೇ (ಸ್ಥಿರ ಬೆಲೆಗಳಲ್ಲಿ) ಶೇ. 5 ರಷ್ಟು ಕುಗ್ಗಿದೆ.

ತೀವ್ರಗಾಮಿ ರಾಷ್ಟ್ರೀಯವಾದಿ ಸ್ಲೋವಾಕಿಯನ್ ನ್ಯಾಶನಲ್ ಪಾರ್ಟಿ 1989 ರ ನಂತರ ಮೊದಲ ಬಾರಿಗೆ, ಕನಿಷ್ಟ ಶೇ.5 ಮತ ಗಳಿಸದೆ ಪಾರ್ಲಿಮೆಂಟಿನಿಂದ ಹೊರ ಬಿದ್ದಿದೆ. ಈ ಪಕ್ಷ ಹಿಂದೆ 9 ಸೀಟುಗಳನ್ನು ಹೊಂದಿದ್ದು, ರೋಮಾನಿಯನ್ ಮತ್ತು ಹಂಗೇರಿಯನ್ ಮೂಲದವರನ್ನು ಟ್ಯಾಂಕುಗಳನ್ನು ಬಳಸಿ ಹೆದರಿಸಿ ದೇಶದಿಂದ ಹೊರಗಟ್ಟಬೇಕೆಂದು ಒತ್ತಾಯಿಸುತ್ತಿತ್ತು. ಸ್ಲೋವಾಕಿಯದಲ್ಲೇ ಹುಟ್ಟಿ ಬೆಳೆದು ನೆಲೆಸಿರುವ ರೋಮಾನಿಯನ್ ಮತ್ತು ಹಂಗೇರಿಯನ್ ಮೂಲದ ಜನ ಶೇ. 15 ಜನ ತೀವ್ರ ನಿರುದ್ಯೋಗಕ್ಕೆ ಕಾರಣ ಎಂದು ಅದು ಪ್ರಚಾರ ಮಾಡುತ್ತಿತ್ತು. ಹಲವು ಹೊಸ ಹಳೆಯ ಸಣ್ಣ ಪಕ್ಷಗಳು ಸೀಟು ಗಳಿಸಲು ಬೇಕಾದ ಶೇ. 5 ಮತ ಗಳಿಸದೆ ಹೋದವು. ಇವುಗಳಲ್ಲಿ ಹಿಂದೆ ಎನ್.ಜಿ.ಒ.ಗಳಂತೆ ಕೆಲಸ ಮಾಡುತ್ತಿದ್ದ ಮತ್ತು ಹೊಸ ಪಕ್ಷಗಳು ಸೇರಿವೆ. ಈ ಪಕ್ಷಗಳಿಗೆ ಬದಲಾಗಿ ಬದಲಿ ನೀತಿಗಳ ಸಲಹೆ ಮುಂದಿಟ್ಟ ಸ್ಮೇರ್ ಪಕ್ಷವನ್ನು ಜನ ಅಧಿಕಾರಕ್ಕೆ ತಂದಿದ್ದು ಆಶ್ಚರ್ಯವೇನಲ್ಲ.

ಈಗ ಪ್ರಧಾನಿ ಪಟ್ಟ ವಹಿಸಿಕೊಂಡಿರುವ ರಾಬರ್ಟ್ ಫಿಕೊ ತಮ್ಮ ಸರ್ಕಾರ ಯುರೋದಿಂದ ಹೊರಬರುವುದಿಲ್ಲ. ಆದರೆ ಸಾರ್ವಜನಿಕ ಮತ್ತು ಕಲ್ಯಾಣ ವೆಚ್ಚಗಳಲ್ಲಿ ಕಡಿತ ಮಾಡುವುದಿಲ್ಲ. ಬೇಕಾದ ಸಂಪನ್ಮೂಲ ಹೊಂದಿಸಲು ಶ್ರೀಮಂತರಿಗೆ ತೆರಿಗೆ ಏರಿಸುತ್ತದೆ. ಪೆನ್ಶನ್ ನಿಧಿಯನ್ನು ಖಾಸಗಿ ಕಂಪನಿಗಳಿಂದ ಸರ್ಕಾರ ವಹಿಸಿಕೊಳ್ಳುತ್ತದೆ ಎಂದು ಹೇಳಿದ್ದಾರೆ.


ಸ್ಲೋವಾಕಿಯ ಇಡೀ ಯುರೋಪಿನ ರಾಜಕೀಯದ ಮೇಲೆ ಪ್ರಭಾವ ಬೀರುವಷ್ಟು ಪ್ರಮುಖ ದೇಶವಲ್ಲ. ಆದರೆ ಈ ಚುನಾವಣಾ ಫಲಿತಾಂಶ ಯುರೋಪಿನಲ್ಲಿ ಬೀಸಬಹುದಾದ ಗಾಳಿಯ ಮುನ್ಸೂಚನೆ ಎಂದು ಹಲವು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಎಲ್ಲಾ 'ಬಣ್ಣ'ದ ಸರ್ಕಾರಗಳು ತೀವ್ರ 'ಮಿತವ್ಯಯ' ಜಾರಿ ಮಾಡುತ್ತಿರುವುದನ್ನು ಕಂಡು ಆಕ್ರೋಶಗೊಂಡಿರುವ ಯುರೋ ಮತದಾರ 'ಮಿತವ್ಯಯ'ದ ವಿರುದ್ಧ ದನಿ ಎತ್ತುವ ರಾಜಕೀಯ ಪಕ್ಷವನ್ನು ಬೆಂಬಲಿಸಲು ತಯಾರಾಗಿದ್ದಾನೆ. ಈ ಟ್ರೆಂಡ್ ಯುರೋಪಿನ ತುಂಬಾ ಹಬ್ಬಬಹುದು. ಈ ವರೆಗೆ ಆದಂತೆ, ಅತೃಪ್ತಿಯ ಪ್ರಯೋಜನ ಅಲ್ಪಸಂಖ್ಯಾತ-ವಿರೋಧಿ ವಲಸೆಗಾರ-ವಿರೋಧಿ ಉಗ್ರ ರಾಷ್ಟ್ರೀಯವಾದಿಗಳು ಮತ್ತು ಜನಮರುಳು ಬಲಪಂಥಿಯ ಪಕ್ಷಗಳಿಗೆ ಆಗಲಿಕ್ಕಿಲ್ಲ ಎಂದು ಹಲವರ ಅಭಿಪ್ರಾಯ.


ಲಂಡನ್

ಜಗದಗಲದಲ್ಲೂ ಮಹಿಳಾ ದಿನ ಶತಮಾನೋತ್ಸವ ಚಿತ್ರಗಳು

ಅಂತರ್ರಾಷ್ಟ್ರೀಯ ಮಹಿಳಾ ದಿನದ ಶತಮಾನ ವರ್ಷದ ಕೊನೆಯಾದ ಈ ವರ್ಷದ ಮಹಿಳಾ ದಿನವನ್ನು ಜಗದಗಲದಲ್ಲೂ ವಿಶಿಷ್ಟವಾಗಿ ಆಚರಿಸಲಾಯಿತು. ಈಜಿಪ್ಟಿನ ಮಹಿಳಾ ಚಳುವಳಿಕಾರರ ಮೇಲೆ ಮಿಲಿಟರಿ ಸರ್ಕಾರದ ಹಲ್ಲೆಯನ್ನು ಖಂಡಿಸಿದರು. ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಮಿಲಿಟರಿ ಸರ್ಕಾರ ಹಾಕಿರುವ ನಿರ್ಬಂಧಗಳನ್ನು ತೆಗೆಯಬೇಕು. ಮಹಿಳೆಯರಿಲ್ಲದ ಪಾರ್ಲಿಮೆಂಟು ಪಾರ್ಲಿಮೆಂಟೇ ಅಲ್ಲ ಎಂದು ಬರ್ಮಾ ಮಹಿಳೆಯರು ತಮ್ಮ ದನಿಯೆತ್ತಿದ್ದಾರೆ. ಪ್ಯಾಲೆಸ್ಟೈನ್ ಮಹಿಳೆಯರು ಜನತೆಯ ಮೂಲಭೂತ ಭದ್ರತೆ ಜೀವನದ ಹಕ್ಕಿಗೆ ಒತ್ತಾಯಿಸಿ ಬೀದಿಗಿಳಿದರು. ಬಾಂಗ್ಲಾದೇಶದ ಮಹಿಳೆಯರು ಖಾಲಿ ಬಿಂದಿಗೆ ಪ್ರದರ್ಶಿಸಿ ನೀರಿನ ಸಮಸ್ಯೆ ಮತ್ತು ಹವಾಮಾನ ಬದಲಾವಣೆಯಿಂದ ತಮ್ಮ ದೇಶ ತೀವ್ರ ಸಮಸ್ಯೆಗೀಡಾಗುವ ಬಗ್ಗೆ ತಮ್ಮ ಆತಂಕ ತೋಡಿಕೊಂಡರು. ತುರ್ಕಿಯ ಮತ್ತು ನ್ಯೂಯಾರ್ಕ್ ಮಹಿಳೆಯರು ಇರಾನ್ ವಿರುದ್ಧ ಯುದ್ಧವನ್ನು ತಮ್ಮ ವಿರೋಧ ವ್ಯಕ್ತಪಡಿಸಿದರು. ನ್ಯೂಯಾರ್ಕಿನ ಟೈಮ್ಸ್ ಚೌಕದಲ್ಲಿ ಪುರುಷಶಾಹಿ ಮತ್ತು ಮಹಿಳಾ-ವಿರೋಧಿ ಅಶ್ಲೀಲತೆಯ ವಿರುದ್ಧ ತಮ್ಮ ಪ್ರತಿಭಟನೆ ದಾಖಲಿಸಿದರು. ಹಲವು ಕಡೆ (ಲಂಡನ್, ಬ್ರಸೆಲ್ಸ್, ಟೊರಾಂಟೋ, ಕಾಂಗೋ, ಪಾಕಿಸ್ತಾನ ಇತ್ಯಾದಿ) 'ಸೇತುವೆ ಮೇಲೆ ನಮ್ಮನ್ನು ಕೂಡಿಕೊಳ್ಳಿ' ಎಂದು ನಗರದ ಪ್ರಮುಖ ಸೇತುವೆ ಮೇಲೆ ಗುಂಪಾಗಿ ಸೇರುವ ಮೂಲಕ ತಮ್ಮ ಶಾಂತಿ ಪರ ಆಶಯ ವ್ಯಕ್ತಪಡಿಸಿದರು. ಕಳೆದ ಎರಡು ವರ್ಷಗಳಿಂದ ಆರಂಭವಾದ ಈ ಶಾಂತಿಪರ ಚಳುವಳಿ, 'ಮಹಿಳೆ ಸೇತುವೆ ಮೇಲೆ ಇದ್ದಲ್ಲಿ ಯುದ್ಧ ಇರುವುದಿಲ್ಲ. ಶಾಂತಿ ಇರುತ್ತದೆ', 'ಮಹಿಳೆ ಶಾಂತಿಯ ಸೇತುವೆ' ಎಂಬ ಘೋಷಣೆಗಳನ್ನು ಕೊಟ್ಟಿದೆ. ಈ ವಿಶಿಷ್ಟ ವೈವಿಧ್ಯಪೂರ್ಣ ಈ ವರ್ಷದ ಮಹಿಳಾ ದಿನದ ಆಚರಣೆಗಳ ಚಿತ್ರಗಳು ಇಲ್ಲಿವೆ.




ಬ್ರೆಜಿಲ್

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH